ವೃದ್ಧಿ ಅಧಿಕಾರಿಗೆ ದೂರು ನೀಡಿದರೆ, ಅವರು ಮೆಕ್ಯಾನಿಕ್ ನನ್ನ ಬಳಿ ಇಲ್ಲ, ಆತನನ್ನು ವಾಪಸ್ಸು ಕರೆಸಿಕೊಂಡಿದ್ದಾರೆಂದು ಹೇಳುತ್ತಾರೆ. ಇದರಿಂದ, ಸಕಾಲದಲ್ಲಿ ಕೈ ಪಂಪುಗಳ ದುರಸ್ತಿಯಾಗುತ್ತಿಲ್ಲ. ಆದುದರಿಂದ, ಮೆಕ್ಯಾನಿಕ್‌ನನ್ನು ತಾಲ್ಲೂಕು ಬೋರ್ಡ್‌ನಲ್ಲೇ ಮೊದಲಿದ್ದ ಹಾಗೆ ಇಟ್ಟರೆ, ಕೆಟ್ಟು ಹೋದ ಕೈ ಪಂಪುಗಳನ್ನು ತಕ್ಷಣ ದುರಸ್ತು ಮಾಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಕೆ. ಪ್ರಭಾಕರ್.—ಹಾಗೆ ಮಾಡಿದರೆ ಅನಾನುಕೂಲವಾಗುತ್ತದೆಂದು ಮನಗಂಡು ಆತನನ್ನು ಇಲಾಖೆಯ ಖಾಯಂ ಅಧಿಕಾರಿಯನ್ನಾಗಿ ಮಾಡಿಕೊಡಲಾಗಿದೆ. ಆದರೆ, ವಾಸ್ತವಾಂಶ ತಾವು ಹೇಳಿದ ರೂಪದಲ್ಲಿಲ್ಲ. ಕ್ಷೇತ್ರಾಭಿವೃದ್ಧಿ ಅಧಿಕಾರಿಯವರು ದೂರನ್ನು ಸ್ವೀಕರಿಸಿ ಇಲಾಖೆಗೆ ಕಳುಹಿಸಿಕೊಡುವರು. ಮೇಜರ್ ರಿಪೇರಿ ಇದ್ದರೆ ಚಿಕ್ಕ ಹೆಲ್ಪರ್ ಮಾಡುವುದಕ್ಕಾಗುವುದಿಲ್ಲವೆಂದು ಮನಗಂಡು ಮೆಕ್ಯಾನಿಕ್‌ನನ್ನು ಇಲಾಖೆಯಲ್ಲಿಡಲಾಗಿದೆ. ಈಗ ಅನುಕೂಲವಾಗಿ ಕೆಲಸ ನಡೆಯುತ್ತಿದೆ.

3 30 P.M.

Budget Estimates for 1979-80
Demands for Grants
Demand Nos. 9, 10 and 12

SRI B. SUBBAYYA SHETTY (Minister for Education).—Sir, on the recommendation of the Governor, I beg to move .—

"That a sum not exceeding Rs. 5,09,61,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1980 in reepect of Demand No. 9 "Stationery and Printing"

Sir, on the recommendation of the Governor I beg to move:

"That a sum not exceeding Rs. 27,11,68,000 inclusive of the sum granted 'on account', be granted to the Government to defray the charges which will come in course of payment during the financial year ending 31st day of March 1980 in respect of Demand No. 10 "Higher Education".

Sir, on the recommendation of the Governor I beg to move :—

"That a sum not exceeding Rs. 115,12.93,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1980 in respect of Demand No. 12 "Primary and Secondary Education".

The question was proposed

†SRI M. SRINIVASA (Srirangapatna).—Mr. Speaker Sir, before I initiate the discussion on demands relating to Education I would like to congratulate and compliment our Hon. Chief Minister of

Karnataka for having made the statement though it has no relevance for this, still I want to mention it here. He said that they should lay stress more on programmes and policies than individuals, however great he or she may be, I liked that statement made by him.

[MR. CHAIRMAN (SRI H. T. KRISHNAPPA) in the Chair]

ಮಾನ್ಯ ಅಧ್ಯಕ್ಷರೇ, ಇಷ್ಟು ದೊಡ್ಡ ಮೊತ್ತದ ಮೂರು ಡಿಮ್ಯಾಂಡುಗಳಿಗೆ ಸಂಬಂಧಪಟ್ಟಂತೆ ಮಾನ್ಯ ವಿದ್ಯಾಸಚಿವರು ನಮ್ಮ ಮುಂದೆ ಬೇಡಿಕೆಗಳನ್ನು ಇಟ್ಟಿದ್ದಾರೆ. ಕಳೆದ ವರ್ಷದಿಂದ ಈ ವರ್ಷದ ವರೆಗೆ ಆಗಿರತಕ್ಕ ಸಾಧನೆಯನ್ನು ಈ ಇಲಾಖೆಯ ಪ್ರಗತಿಯನ್ನು ನೋಡಿದರೆ ಏನನ್ನೂ ಸರ್ಕಾರ ಸಾಧನೆ ಮಾಡಿ ದಂತೆ ಕಾಣುವುದಿಲ್ಲ. ಆದರಿಂದ ಅವರ ಒಂದು ಬೇಡಿಕೆಗೆ ನನ್ನ ವಿರೋಧವನ್ನು ವ್ಯಕ್ತಪಡಿಸುತ್ತಾ, ಕೆಲವು ವಿಚಾರಗಳನ್ನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಕೊಠಾರಿ ಕಮೀಷನ್ನಿನ ವರದಿಯಲ್ಲಿ ಒಂದು ವಾಕ್ಯ ಬರುತ್ತೆ ; ನಮ್ಮ ದೇಶದ ಭವಿಷ್ಯವನ್ನು ನಿರ್ಮಾಣಮಾಡತಕ್ಕಂಥ ಜಾಗ ಶಾಲೆಯ ಕಟ್ಟಡಗಳಲ್ಲಿ ; ಈ ವಾಕ್ಯದ ಮಹತ್ವವನ್ನು ನಮ್ಮ ಸರ್ಕಾರ ಅರಿತುಕೊಂಡಿಲ್ಲವೆಂದು ಹೇಳಿದರೆ ತಪ್ಪಾಗುವುದಿಲ್ಲವೆಂದು ಹೇಳುತ್ತೇನೆ. ವಿದ್ಯಾ ಇಲಾಖೆಯ ಪ್ರಗತಿ ಡ್ರಾಫ್ಟ್‌ಷೀಟ್‌ನಲ್ಲಿ ಇದೆಯೇ ಹೊರತು, ನೈಜ ದೃಷ್ಟಿಯಿಂದ ನೋಡುವುದಾದರೆ ಯಾವ ಪ್ರಗತಿಯನ್ನು ಮಾಡಲಿಲ್ಲವೆಂದು ಹೇಳಬೇಕಾಗುತ್ತದೆ. ಮೊದಲನೆಯದಾಗಿ ನಮ್ಮ ಒಂದು ಪಾಲಿಸಿಯಂತೆ ಕಂಪಲ್‌ಸರಿ ಯೂನಿವರ್ಸಲ್ ಪ್ರೈಮರಿ ಎಜುಕೇಷನ್ ಎಂದು ಅನೇಕ ವರ್ಷಗಳಿಂದ ಹೇಳಿಕೊಂಡು ಬರುತ್ತಿದ್ದೇವೆ. ಆದರೆ, ಈ ದಿಸೆಯಲ್ಲಿ ಸರ್ಕಾರ ಯಾವುದಾದರೊಂದು ಭದ್ರವಾದಂಥ ಗುರಿಯನ್ನು ಮುಟ್ಟತಕ್ಕ ಕಾರ್ಯಕ್ರಮವನ್ನು ಹಾಕಿಕೊಂಡಿಲ್ಲವೆನು ವುದು ಗೊತ್ತಾಗುತ್ತದೆ. ಆದರಲ್ಲಿಯೂ ಈ ವರ್ಷ ಯುನೆಸ್ಕೋದವರು ಅಂತರಾಷ್ಟ್ರೀಯ ಮಕ್ಕಳ ವರ್ಷವೆಂದು ಘೋಷಣೆ ಮಾಡಿದ್ದಾರೆ. ನಾನು ಮಾನ್ಯ ಮಂತ್ರಿಗಳನ್ನು ಪ್ರಶ್ನೆ ಮಾಡುತ್ತೇನೆ. ಈ ಅಂತರ ರಾಷ್ಟ್ರೀಯ ಮಕ್ಕಳ ವರ್ಷದಲ್ಲಾದರೂ ಮಕ್ಕಳಿಗೋಸ್ಕರ ಯಾವುದಾದರೊಂದು ಯೋಜನೆಯನ್ನು ಹಾಕಿಕೊಂಡಿದ್ದೀರಾ ಎಂದು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಕಳೆದ ೭-೮ ವರ್ಷಗಳಿಂದ ನಾವು ಕಡ್ಡಾಯ ಪ್ರಾಥಮಿಕ ಶಿಕ್ಷಣ ಕೊಡುವುದರಲ್ಲಿ ವಿಫಲತೆಯನ್ನು ಹೊಂದಿದ್ದೇವೆ, ಈ ದಿಸೆಯಲ್ಲಿ ಯಾವುದೇ ರೀತಿಯ ಸಂಶೋಧನೆಯನ್ನು ಶಿಕ್ಷಣ ಕ್ಷೇತ್ರದಲ್ಲಿ ಪರಿಣತೆಯನ್ನು ಪಡೆದಿರತಕ್ಕ ತಜ್ಞರ ಸಮಿತಿಯ ಮೂಲಕ ಮಾಡುವುದಕ್ಕೆ ಪ್ರಯತ್ನ ಮಾಡಿಲ್ಲ. ಕೇವಲ ದೂಷಣೆಯಲ್ಲಿ ನಮ್ಮ ಎಲ್ಲ ಕಾರ್ಯಕ್ರಮಗಳನ್ನು ಮುಗಿಸುತ್ತಿದ್ದೇವೆ. ಇವತ್ತು ಪ್ರಾಥಮಿಕ ಶಿಕ್ಷಣ ಯಾವ ಮಟ್ಟದಲ್ಲಿದೆ ಎನ್ನುವುದನ್ನು ಪ್ರತಿ ವರ್ಷವೂ ಕೂಡ ಶಾಸನಸಭೆಗಳಲ್ಲಿ ಹೇಳುತ್ತಿದ್ದೇವೆ. ಪತ್ರಿಕೆಗಳವರು ತಿಳಿಸುತ್ತಿದ್ದಾರೆ. ತಜ್ಞರೂ ಕೂಡ ಈ ವಿಚಾರದಲ್ಲಿ ತಿಳಿಸಿದ್ದಾರೆ, ಆದರೂ ಸರ್ಕಾರ ಮಾತ್ರ ಗಮನ ಕೊಡುತ್ತಿಲ್ಲ. ಇವತ್ತಿನ ದಿವಸ ಹಳ್ಳಿಗಾಡಿನ ಸ್ಕೂಲುಗಳು ಬಹಳ ಶೋಚನೀಯವಾದಂಥ ಪರಿಸ್ಥಿತಿಯಲ್ಲಿದೆ. ಎಷ್ಟೋ ವರ್ಷಗಳಿಂದ ಅವುಗಳಿಗೆ ಸುಣ್ಣ ಬಣ್ಣ ಬಳಿದಿಲ್ಲ. ಶಾಲೆಗಳಲ್ಲಿ ಮಕ್ಕಳಿಗೆ ಬೇಕಾದ ಸಲಕರಣೆಗಳು ಇಲ್ಲ. ಮಳೆ ಬಂದರೆ ಮಳೆ ನೀರು ಪೂರ್ತಿ ಶಾಲೆ ಒಳಗಡೆ ಇರತಕ್ಕ ಶಾಲೆಗಳು ಅನೇಕ ಇವೆ. ಹೆಂಚು ಒಡೆದುಹೋಗಿದ್ದರೂ ಅವುಗಳಿಗೆ ಹೊಸದಾಗಿ ಹೆಂಚು ಹಾಕಿಸುವ ಕೆಲಸ ಮಾಡಿಲ್ಲ. ಸರ್ಕಾರದವರು ಬಡವರಿಗೆ ಹಿಂದುಳಿದವರಿಗೆ ಅವರನ್ನು ಉದ್ಧಾರ ಮಾಡುತ್ತೇವೆಂದು ಉಚಿತವಾಗಿ ಸೈಟುಗಳನ್ನು ಕೊಡುತ್ತಿದ್ದಾರೆ. ಅದೇ ರೀತಿ ಶಾಲೆಗಳಿಗೆ ಒಳ್ಳೆಯ ಜಾಗದಲ್ಲಿ ಸೈಟುಗಳನ್ನು ಮಕ್ಕಳಿಗೆ ಒಂದು ಒಳ್ಳೆಯ ವಾತಾವರಣವನ್ನು ನಿರ್ಮಾಣ ಮಾಡತಕ್ಕ ಕೆಲಸ ಇದುವರೆಗೆ ಆಗಿಲ್ಲ. ಜೊತೆಗೆ ಉತ್ತಮ ಆಟದ ಮೈದಾನಗಳನ್ನು ಕೂಡ ಮಕ್ಕಳಿಗೆ ಒದಗಿಸಿಲ್ಲ. ಈ ಎಲ್ಲ ವ್ಯವಸ್ಥೆಯನ್ನು ಅತ್ಯಾವಶ್ಯಕವಾಗಿ ಒದಗಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇವತ್ತು ಹಳ್ಳಿಗಾಡಿನಲ್ಲಿರತಕ್ಕ ಶಾಲೆಗಳಲ್ಲಿ ಪಾಠಪ್ರವಚನಗಳು ಸರಿಯಾದ ರೀತಿಯಲ್ಲಿ ನಡೆಯುತ್ತಿಲ್ಲ. ಯಾವ ಹಳ್ಳಿ ಪಾಠಶಾಲೆಗಳಿಗೆ ಹೋಗಿ ನೋಡಿದರೂ ಪಾಠಪ್ರವಚನಗಳು ಸರಿಯಾಗಿ ನಡೆಯದೇ ಇರುವುದನ್ನು, ತೃಪ್ತಿಕರವಾಗಿ ನಡೆಯದೇ ಇರುವುದನ್ನು ಕಾಣುತ್ತಿದ್ದೇವೆ. ಇದಕ್ಕೆ ಕಾರಣ ಹಲವಾರು ಇವೆ. ಮೊದಲನೆಯದಾಗಿ, ಉಪಾಧ್ಯಾಯರುಗಳಿಗೆ ಹಳ್ಳಿಗಳಲ್ಲಿ ವಾಸ ಮಾಡಲು ಅನುಕೂಲ ಇಲ್ಲದೇ ಇರುವುದು. ನಾನು ಒಬ್ಬ ಮಾನಸಿಕ ಶಾಸ್ತ್ರದ ವಿದ್ಯಾರ್ಥಿಯಾಗಿ ಹೇಳುತ್ತಿದ್ದೇನೆ. ಉಪಾಧ್ಯಾಯರುಗಳಿಗೆ ಸಂಬಳ ಕೊಡುವುದರಿಂದ ದಕ್ಷತೆಯನ್ನು ಹೆಚ್ಚಿಸುವುದಕ್ಕೆ ಆಗುವುದಿಲ್ಲ. ಅವರಿಗೆ ಕೊಡತಕ್ಕ ಸೌಲಭ್ಯಗಳಿಂದ ದಕ್ಷತೆಯನ್ನು ಹೆಚ್ಚಿಸಿಕೊಳ್ಳಬಹುದು. ಮತ್ತೊಂದು ತೊಂದರೆ ಅಂದರೆ- ಉಪಾಧ್ಯಾಯರುಗಳಿಗೆ ಮತ್ತು ಮಕ್ಕಳಿಗೆ ಶಾಲೆಗಳಿಗೆ ಬರುವುದಕ್ಕೆ ಸಾರಿಗೆ ಅನುಕೂಲ ಇಲ್ಲದೇ ಇರುವುದು. ಸರ್ಕಾರ

ದವರು ಯಾವುದೇ ರೀತಿಯ ಸೌಲಭ್ಯಗಳನ್ನು ಕೊಡುವುದಕ್ಕೆ ಸಾಧ್ಯವಾಗಿಲ್ಲ. ನಮ್ಮ ಉಪಾಧ್ಯಾಯರುಗಳಿಗೆ ಸೌಲಭ್ಯಗಳನ್ನು ಒದಗಿಸಿಕೊಡುವುದರಿಂದ ದಕ್ಷತೆಯನ್ನು ಎಷ್ಟರಮಟ್ಟಿಗೆ ಹೆಚ್ಚಿಸಿಕೊಳ್ಳಬಹುದೆಂಬುದು ಅವಲಂಬಿಸಿರುತ್ತದೆ. ಆದ್ದರಿಂದ ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ ಅಲ್ಲಿಗೆ ಕನಿಷ್ಠ ಅವಶ್ಯಕತೆಗಳು ಏನಿದೆ ಅದನ್ನು ಒದಗಿಸಬೇಕು. ಒಳ್ಳೆಯ ವಾತಾವರಣದಲ್ಲಿರತಕ್ಕ ಶಾಲೆಗಳನ್ನು ನಿರ್ಮಾಣ ಮಾಡಬೇಕು. ಉಪಾಧ್ಯಾಯರುಗಳಿಗೆ ಕ್ವಾರ್ಟರ್ಸ್ ಕಟ್ಟಿಸಿಕೊಡಬೇಕು. ಶಾಲೆಗಳಲ್ಲಿ ಎಲ್ಲಾ ಪಾಠಪ್ರವಚನಗಳಿಗೆ ಬೇಕಾಗುವಂತಹ ಎಲ್ಲಾ ಎಕ್ವಿಪ್‌ಮೆಂಟ್‌ಗಳು ಅಂದರೆ, ಆಟ ಪಾಠಕ್ಕೆ ಬೇಕಾಗತಕ್ಕಂತಹವು, ಮ್ಯಾಪುಗಳು, ಡೆಸ್ಕ್‌ಗಳು ಈ ತರಹ ಎಲ್ಲಾ ಎಕ್ವಿಪ್‌ಮೆಂಟ್‌ಗಳನ್ನು ಉದಾರವಾಗಿ ಅದರಲ್ಲೂ ಹಳ್ಳಿಗಾಡಿನಲ್ಲಿರತಕ್ಕ ಶಾಲೆಗಳಿಗೆ ಹೆಚ್ಚಿಗೆ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂದು ನಾನು ನಿಮ್ಮಲ್ಲಿ ಪ್ರಾರ್ಥಿಸುತ್ತೇನೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಹಳ್ಳಿಗಾಡಿನಲ್ಲಿರತಕ್ಕಂಥ ಶಾಲೆಗಳು ಬಹಳ ದುಸ್ಥಿತಿಯಲ್ಲಿವೆ. ಕೆಲವು ಶಾಲೆಗಳನ್ನು ಅಂದರೆ, ಹೈಸ್ಕೂಲು ಶಾಲೆಯಾಗಲಿ, ಪ್ರೈಮರಿ ಶಾಲೆಯಾಗಲಿ, ಕೆಲವು ಶಾಲೆಗಳ ರಿಪೇರಿಯನ್ನು ತಾಲ್ಲೂಕು ಬೋರ್ಡ್‌ನವರು ನೋಡುತ್ತಾರೆ. ಅದರ ಬಗ್ಗೆ ಅವರು ಹೆಚ್ಚಿನ ಗಮನ ಕೊಡುವುದಿಲ್ಲ. ಇನ್ನು ಪಿಡಬ್ಲ್ಯೂಡಿ ಅವರಿಗೆ ಸಣ್ಣ ಪುಟ್ಟ ಕೆಲಸಗಳ ಬಗ್ಗೆ ಅವರಿಗೆ ಆಸಕ್ತಿ ಇರುವುದಿಲ್ಲ. ಈಗ ನೀವು ಕೊಟ್ಟಿರತಕ್ಕ ಅಂಕಿಅಂಶದಲ್ಲಿ ಇವೊತ್ತಿನ ದಿವಸ ೩೪,೦೨೫ ಪ್ರೈಮರಿ ಶಾಲೆಗಳು ಇವೆ. ಇದರ ಬಗ್ಗೆ ಆನ್ಯುಯಲ್ ರಿಪೇರಿಗೆ ಕೊಟ್ಟಿರತಕ್ಕ ಹಣ ೫೦ ಲಕ್ಷ ರೂಪಾಯಿ. ಇದನ್ನು ಲೆಕ್ಕ ಹಾಕಿದರೆ ಒಂದು ಶಾಲೆಗೆ ೧೫೦ ರೂಪಾಯಿಗಿಂತಲೂ ಕಡಿಮೆ ಬರುತ್ತದೆ. ಈ ೧೫೦ ರೂಪಾಯಿ ಹಣದಲ್ಲಿ ಏನು ರಿಪೇರಿ ಮಾಡಲಿಕ್ಕೆ ಸಾಧ್ಯವಾಗುತ್ತದೆ ಎನ್ನುವುದರ ಬಗ್ಗೆ ತಾವು ಯೋಚನೆ ಮಾಡಬೇಕಾಗುತ್ತದೆ. ಪ್ರೈಮರಿ ಸ್ಕೂಲು ಕಟ್ಟಡ ಕಟ್ಟಲಿಕೋಸ್ಕರ ೪,೫೦೦ ರೂಪಾಯಿಗಳನ್ನು ಧನ ಸಹಾಯ ಮಾಡುತ್ತಿದ್ದೀರಿ. ಈಗ ೨,೫೦೦ ರೂಪಾಯಿಗಳಿಂದ ೪,೫೦೦ ರೂಪಾಯಿಗಳಿಗೆ ಏರಿಸಿದ್ದೀರಿ ಅದನ್ನು ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಆದರೆ ಇವೊತ್ತು ಒಂದು ಕಟ್ಟಡ ಕಟ್ಟಲಿಕ್ಕೆ ಎಷ್ಟು ಹಣ ಖರ್ಚಾಗುತ್ತದೆ ಎಂದು ತಾವೇ ಯೋಚನೆ ಮಾಡಬೇಕು. ಇವೊತ್ತು ಪ್ರತಿ ಪದಾರ್ಥದ ಬೆಲೆಯೂ ಕೂಡ ಒಂದಕ್ಕೆ ಮೂರು ನಾಲ್ಕರಷ್ಟು ಜಾಸ್ತಿಯಾಗಿದೆ. ಆದುದರಿಂದ ಈಗ ೪,೫೦೦ ರೂಪಾಯಿ ಏನು ಕೊಡುತ್ತೀರಿ ಅದನ್ನು ಇನ್ನೂ ಜಾಸ್ತಿ ಮಾಡಬೇಕು. ಇದರಲ್ಲಿ ಎರಡನೆಯ ವಿಚಾರ ಹೇಳಬೇಕು ಅಂದರೆ ಇವೊತ್ತು ತಾವು ೪,೫೦೦ ರೂಪಾಯಿ ಕೊಟ್ಟರೆ ಮಿಕ್ಕ ಹಣವನ್ನು ಅಲ್ಲಿರತಕ್ಕ ಗ್ರಾಮದವರೇ ವಹಿಸಿಕೊಳ್ಳಬೇಕಾಗಿದೆ. ಒಂದು ಕೊಠಡಿ ಕಟ್ಟಲಿಕ್ಕೆ ೯–೧೦ ಸಾವಿರ ರೂಪಾಯಿಗಳು ಬೇಕಾಗುತ್ತದೆ. ಇವೊತ್ತು ಎರಡು ಸಾವಿರ ರೂಪಾಯಿ ಕೊಡದೇ ಇರುವ ಹಳ್ಳಿಗಳು ಬೇಕಾದಷ್ಟು ಇವೆ. ಆದುದರಿಂದ ತಾವು ಹಳ್ಳಿಗಳಲ್ಲಿ ಶಾಲಾ ಕಟ್ಟಡ ಕಟ್ಟಲಿಕ್ಕೆ ಸಂಪೂರ್ಣ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು. ಈ ಹಳ್ಳಿಗಳ ಬಗ್ಗೆ ಯಾವ ಯಾವ ಹಳ್ಳಿಗಳಿವೆ ಎಂದು ಒಂದು ಪಟ್ಟಿ ಮಾಡಿಕೊಳ್ಳಬೇಕು. ಇವೊತ್ತು ಯಾವ ಯಾವ ಹಳ್ಳಿಗಳು ಮಿನಿಮಮ್ 'ನೀಡ್' ಪ್ರೋಗ್ರಾಂನಲ್ಲಿ ಬರುತ್ತವೆ. ಆ ಹಳ್ಳಿಗಳಲ್ಲಿ ಶಾಲಾ ಕಟ್ಟಡಗಳನ್ನು ಕಟ್ಟಿಸಲಿಕ್ಕೆ ಸಂಪೂರ್ಣ ಜವಾಬ್ದಾರಿಯನ್ನು ನೀವೇ ಹೊರಬೇಕಾಗುತ್ತದೆ. ಜನರಿಂದ ನೀವು ಏನಾದರೂ ದುಡ್ಡು ಬರುತ್ತದೆ, ಅವರು ಸ್ವಲ್ಪ ಹಾಕುತ್ತಾರೆ ಅಂದರೆ ಇನ್ನೂ ನೂರು ವರ್ಷಗಳಾದರೂ ಕೂಡ ಆ ಹಳ್ಳಿಗಳಲ್ಲಿ ಶಾಲಾ ಕಟ್ಟಡಗಳನ್ನು ಪಡೆಯಲಿಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ಅತೀ ಬಡತನ ಇರತಕ್ಕ ಹಳ್ಳಿಗಳಲ್ಲಿ ಶಾಲಾ ಕಟ್ಟಡಗಳನ್ನು ನಿರ್ಮಾಣ ಮಾಡಲಿಕ್ಕೆ ತಾವೇ ಸಂಪೂರ್ಣ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು. ನೀವು ಉದಾರವಾಗಿ ಹಣವನ್ನು ಕೊಟ್ಟರೂ ಸಹ ೪,೫೦೦ ರೂಪಾಯಿ ಯಾವ ರೀತಿ ವಿಲೇವಾರಿಯಾಗುತ್ತದೆ ಎನ್ನುವುದಕ್ಕೆ ನೀವೇನಾದರೂ ಚೆಕ್‌ಸಿಸ್ಟಂ ಇಟ್ಟುಕೊಂಡಿದ್ದೀರಾ. ಯಾರೋ ಒಬ್ಬರು ತಾಲ್ಲೂಕು ಬೋರ್ಡ್‌ನಿಂದ ಬರುತ್ತಾರೆ, ಒಬ್ಬ ಎ.ಇ.ಓ. ಬಂದು ಇಂತಹ ಹಳ್ಳಿಗೆ ನಾಲ್ಕು ರೂಮುಗಳು ಬೇಕು ಎಂದು ಹೇಳುತ್ತಾರೆ, ತಾವು ಕೊಡುತ್ತೀರಾ. ಆ ಕೊಠಡಿಗಳು ಪೂರ್ಣವಾಗಿ ಆಗಿವೆಯೋ, ಪೂರ್ಣ ಆಗಿಲ್ಲವೇ, ಯಾವ ಒಂದು ಪರಿಸ್ಥಿತಿಯಲ್ಲಿವೆ ಎಂಬ ಬಗ್ಗೆ ಗಮನ ಕೊಟ್ಟಿದ್ದೀರಾ ? ಈ ಸಂದರ್ಭದಲ್ಲಿ ನನ್ನ ತಾಲ್ಲೂಕಿನಲ್ಲಿ ಆಗಿರತಕ್ಕಂತಹ ಒಂದು ವಿಚಾರವನ್ನು ಹೇಳಬೇಕು ಅಂದರೆ ೧೯೭೬–೭೭ರಲ್ಲೋ ಅಥವಾ ೧೯೭೭–೭೮ರಲ್ಲೋ, ಅಂತೂ ಸರಿಯಾಗಿ ನನಗೆ ಇಸವಿ ಗೊತ್ತಿಲ್ಲ. ಬೆಳಗೊಳ ಎನ್ನತಕ್ಕ ಒಂದು ಗ್ರಾಮಕ್ಕೆ ೧೦ ರೂಮುಗಳನ್ನು ಒಂದೇ ಹಳ್ಳಿಗೇ, ಒಂದೇ ಬಾರಿಗೆ ಕೊಟ್ಟಿದ್ದಾರೆ. ಅಲ್ಲಿ ೪೫ ಸಾವಿರ ರೂಪಾಯಿ ಗ್ರಾಂಟ್ಸ್ ತೆಗೆದುಕೊಂಡಿದ್ದಾರೆ. ಗ್ರಾಂಟ್ಸ್ ತೆಗೆದುಕೊಂಡಿದ್ದರೂ ಕೂಡ ೧೦ ರೂಮುಗಳು ರೆಡಿಯಾಗಿಲ್ಲ. ಹಳ್ಳಿಯವರು ಅವರ ಪರವಾಗಿ ೧೦–೧೨ ಸಾವಿರ ರೂಪಾಯಿ ಖರ್ಚು ಮಾಡಿ, ೪೫ ಸಾವಿರ ರೂಪಾಯಿ ಗ್ರಾಂಟ್ಸ್ ಕೂಡ ತೆಗೆದುಕೊಂಡು ಎಲ್ಲಾ ಅರ್ಧಂಬರ್ಧವಾಗಿ ಹಾಗೆ ನಿಂತಿದೆ, ಅದನ್ನು ತಾವು ಹೋಗಿ ನೋಡಿಕೊಂಡು ಬರಬೇಕು.

ಇಷ್ಟು ದೊಡ್ಡ ಹಣವನ್ನು ಕೊಟ್ಟು ಅದರ ಪೂರ್ಣ ಪ್ರಯೋಜನ ಪಡೆಯದೇ ಹೋದರೆ ಏನಾಗುತ್ತದೆ. ಇದರ ಬಗ್ಗೆ ಸರ್ಕಾರ ಗಮನ ಇಟ್ಟಿದೆಯೋ ಎಂದು ಕೇಳಬೇಕಾಗುತ್ತದೆ. ಅದೇ ರೀತಿ ನಮ್ಮ ತಾಲ್ಲೂಕಿನ ಹೊಸಹಳ್ಳಿಯಲ್ಲಿ ನಾಲ್ಕು ರೂಮುಗಳನ್ನು ಕಟ್ಟಿದ್ದಾರೆ. ಇವೊತ್ತಿನ ದಿವಸ ಅಲ್ಲಿಯೂ ಕೂಡ ಶಾಲಾ ಕಟ್ಟಡಗಳು ಪೂರ್ಣವಾಗಿಲ್ಲ. ಆದುದರಿಂದ ೪,೫೦೦ ರೂಪಾಯಿ ಹಣ ಏನು ಕೊಡುತ್ತೀರಾ ಅದರ ಬಗ್ಗೆ ಒಂದು ಚೆಕ್ ಮೆಜರ್ಸ್ ಇಟ್ಟು, ಆ ಹಣ ಪೂರ್ತಿಯಾಗಿ ಉಪಯೋಗವಾಗುತ್ತದೆಯೋ ಎನ್ನುವುದನ್ನು ಕಂಡುಹಿಡಿಯುವುದಕ್ಕೆ ಏನಾದರೂ ಒಂದು ವ್ಯವಸ್ಥೆ ಮಾಡಿದರೆ ಒಳ್ಳೆಯದಾಗುತ್ತದೆ. ಸಾರ್ವಜನಿಕರಿಂದ ತೆರಿಗೆ ರೂಪದಲ್ಲಿ ವಸೂಲಾಗತಕ್ಕಂತಹ ಹಣವನ್ನು ಪೋಲಾಗದಂತೆ ನೋಡಿಕೊಳ್ಳಬೇಕು. ಇದುವರೆಗೂ ನಾನು ಏನೇನು ಲೋಪದೋಷಗಳನ್ನು ಹೇಳಿದ್ದೇನೆ ಅವುಗಳ ಬಗ್ಗೆ ಸರಿಯಾದ ರೀತಿಯಲ್ಲಿ ನಡೆಸಿಕೊಂಡು ಹೋಗಲಿಕ್ಕೆ ನನ್ನ ಸಲಹೆ ಏನು ಎಂದರೆ ಇದಕ್ಕೆ ಎಜುಕೇಷನಲ್ ಬಿಲ್ಡಿಂಗ್ ಬೋರ್ಡ್ ಎಂದು ಮಾಡತಕ್ಕದ್ದು ಒಳ್ಳೆಯದು. ಈ ಎಜುಕೇಷನಲ್ ಬಿಲ್ಡಿಂಗ್ ಬೋರ್ಡ್‌ಗೆ ಸಂಪೂರ್ಣ ಸ್ವಾಯತ್ತತೆಯನ್ನು ಕೊಟ್ಟು, ವಿದ್ಯಾ ಇಲಾಖೆಯಲ್ಲಿರತಕ್ಕ ಎಲ್ಲಾ ಬಿಲ್ಡಿಂಗ್‌ಗೆ ಸಂಬಂಧಪಟ್ಟ ಎಲ್ಲಾ ವಿಚಾರಗಳನ್ನು ಈ ಬೋರ್ಡಿಗೆ ಕೊಡಬೇಕು. ಇವೊತ್ತು ಹೌಸಿಂಗ್ ಬೋರ್ಡ್, ಬಿ.ಡಿ.ಎ. ಬೋರ್ಡ್‌ಗಳು ಏನು ಕೆಲಸ ಮಾಡುತ್ತವೆ ಅದೇ ರೀತಿಯಲ್ಲಿ ಎಜುಕೇಷನಲ್ ಬೋರ್ಡ್ ಕೂಡ ಮಾಡಿದ್ದೇ ಆದರೆ ಸ್ವಲ್ಪ ಮಟ್ಟಿಗಾದರೂ ಸುಧಾರಿಸಲಿಕ್ಕೆ ಸಾಧ್ಯವಾಗುತ್ತದೆ. ಇದರಲ್ಲಿ ಎರಡು ತರಹ ಕೆಲಸ ಕಾರ್ಯಗಳು ಇವೆ. ಒಂದನೆಯದು ಇವೊತ್ತು ದುಸ್ಥಿತಿಯಲ್ಲಿರತಕ್ಕ ಶಾಲೆಗಳು ಏನಿವೆ ಅವುಗಳನ್ನು ರಿನೋವೇಟ್ ಮಾಡಿ ಒಳ್ಳೆಯ ವಾತಾವರಣವನ್ನು ಆ ಶಾಲೆಗಳಲ್ಲಿ ನಿರ್ಮಾಣ ಮಾಡತಕ್ಕದ್ದು ಮೊದಲನೆಯದು. ಇನ್ನು ಎರಡನೆಯದು ಈ ಶಾಲೆಗಳನ್ನು ಕಟ್ಟಿಸುವುದು, ಶಾಲೆಗಳನ್ನು ರಿಪೇರಿ ಮಾಡಿಸುವುದು. ಆರ್ಕಿಟೆಕ್ಟ್ ಮುಖಾಂತರ ಒಳ್ಳೆಯ ಡಿಸೈನ್ ಶಾಲೆಗಳನ್ನು ಕಟ್ಟಿಸುವುದು ಎರಡನೆಯದು. ಇವತ್ತಿನ ದಿವಸ ಹಳ್ಳಿಯಲ್ಲಿರತಕ್ಕ ಶಾಲೆಗಳನ್ನು ನೋಡಿದರೆ ಅದರ ರೂಪ ಅಷ್ಟು ಸರಿಯಿಲ್ಲ. ಅದುದರಿಂದ ಒಳ್ಳೆಯ ವಾತಾವರಣ ನಿರ್ಮಾಣ ಮಾಡತಕ್ಕ ಕೆಲಸವನ್ನು ಈ ಒಂದು ಎಜುಕೇಷನಲ್ ಬಿಲ್ಡಿಂಗ್ ಬೋರ್ಡ್‌ಗೆ ಕೊಡುವುದಾದರೆ ಒಳ್ಳೆಯದಾಗುತ್ತದೆ. ಆದರೆ ಈ ಒಂದು ಎಜುಕೇಷನ್ ಬಿಲ್ಡಿಂಗ್ ಬೋರ್ಡ್‌ಗೆ ಯಾವನೋ ಒಬ್ಬ ನಿವೃತ್ತ ರಾಜಕಾರಣಿಯನ್ನು ಅಧ್ಯಕ್ಷರನ್ನಾಗಿ ಹಾಕುವುದಾದರೆ ಅವರನ್ನು ಮಾತ್ರ ಖಂಡಿತ ಇದಕ್ಕೆ ಅಧ್ಯಕ್ಷರನ್ನಾಗಿ ಹಾಕಬೇಡಿ ಎಂದು ಕೈಮುಗಿದು ಕೇಳಿಕೊಳ್ಳುತ್ತೇನೆ. ಒಳ್ಳೆಯ ಟೆಕ್ನೋಕ್ರಾಟ್ಸ್, ಎಜುಕೇಷನಿಸ್ಟ್‌ನ್ನು ಈ ಬೋರ್ಡ್‌ನಲ್ಲಿ ತರುವುದಾದರೆ ಇದು ಒಂದು ಉಪಯುಕ್ತವಾಗುತ್ತದೆ ಎಂದು ನನ್ನ ಭಾವನೆ. ನಾನು ಮೊದಲೇ ಹೇಳಿದ ಹಾಗೆ ಬಹಳ ದೊಡ್ಡ ಮೊತ್ತವನ್ನು ಈ ವಿದ್ಯಾ ಇಲಾಖೆಗೆ ಖರ್ಚು ಮಾಡುತ್ತಿದ್ದೇವೆ. ಅಲ್ಲದೆ ಇದರಲ್ಲಿ ಅನೇಕ ಅನುಪಯುಕ್ತ ಕಾರ್ಯಗಳಿಗೂ ಸಹ ಖರ್ಚು ಮಾಡುತ್ತಿದ್ದೇವೆ. ಸ್ವಾಮಿ, ತಮ್ಮ ಮೂಲಕ ಒಂದು ಮಾತನ್ನು ಸರ್ಕಾರದವರಿಗೆ ಹೇಳಬೇಕಾದರೆ ವಿದ್ಯಾ ಇಲಾಖೆಯಲ್ಲಿ ೭ನೇ ತರಗತಿಗೆ ನಡೆಸತಕ್ಕ ಪರೀಕ್ಷೆಯ ಬಗ್ಗೆ ತಾವು ಪುನರ್‌ಪರಿಶೀಲನೆ ಮಾಡಬೇಕಾಗಿದೆ. ಇಲ್ಲಿ ಏನಾಗುತ್ತಿದೆ ಎಂದರೆ ಬಹಳವಾಗಿ ಭ್ರಷ್ಟಾಚಾರ ನಡೆಯುತ್ತಿದೆ. ಅದು ಹೇಗೆ ನಡೆಯುತ್ತದೆ ಎಂಬುದಕ್ಕೆ ಒಂದೇ ಒಂದು ಉದಾಹರಣೆಯನ್ನು ಹೇಳಬಯಸುತ್ತೇನೆ. ಒಂದು ಸಾರಿ ೪-೫ ಜನ ಸ್ನೇಹಿತರೊಡನೆ ನಾನು ಮಾತಾನಾಡುತ್ತಾ ಕುಳಿತಿದ್ದಾಗ, ಒಬ್ಬ ಸ್ನೇಹಿತರು ಬಂದು "ನನಗೆ ಇವತ್ತು ೭ನೇ ತರಗತಿಯ ಪ್ರಶ್ನೆಪತ್ರಿಕೆ ಸಿಕ್ಕಿದೆ ಎಂದು ಅಲ್ಲಿದ್ದ ಯಾರನ್ನೂ ಲೆಕ್ಕಿಸದೆ ಬಹಳ ಸಂತೋಷದಿಂದ ಹೇಳಿದರು. ಈ ರೀತಿ ಪ್ರಶ್ನೆಪತ್ರಿಕೆಗಳನ್ನು ಬಹಿರಂಗಗೊಳಿಸುವುದು ಕೇವಲ ಇಲ್ಲಿ ಒಂದೇ ಕಡೆ ಅಲ್ಲ. ಇದು ಸಾಮಾನ್ಯವಾಗಿ ಎಲ್ಲ ಕಡೆಗಳಲ್ಲೂ ಇರತಕ್ಕದ್ದೇ. ಸ್ವಾಮಿ, ಇವತ್ತು ೭ನೇ ತರಗತಿಯಲ್ಲೇ ಈ ರೀತಿ ಪ್ರಶ್ನೆಪತ್ರಿಕೆಗಳನ್ನು ಪಡೆದು ವಾಪಸ್ ಮಾಡುವುದಾದರೆ, ಇನ್ನು ದೊಡ್ಡ ದೊಡ್ಡ ತರಗತಿಗಳಲ್ಲಿ ಯಾವ ರೀತಿ ನಡೆಯುತ್ತದೆ ಎಂಬುದನ್ನು ತಾವು ಯೋಚನೆ ಮಾಡಬೇಕು. ತಮ್ಮ ಮಕ್ಕಳು ಹೆಚ್ಚಿನ ಅಂಕಿಗಳನ್ನು ತೆಗೆದುಕೊಂಡು ತೇರ್ಗಡೆಯಾಗಬೇಕೆಂಬುದು ಎಲ್ಲ ತಂದೆತಾಯಿಗಳಿಗೂ ಇರುತ್ತದೆ. ಆದರೆ ಈ ರೀತಿ ಪರೀಕ್ಷೆ ನಡೆಸುವ ಬದಲು ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ, ಈ ೭ನೇ ತರಗತಿಯ ಪರೀಕ್ಷೆಯನ್ನೇ ರದ್ದು ಮಾಡಿ ಸ್ಕೂಲಿನವರೇ ಪರೀಕ್ಷೆ ನಡೆಸುವಂತೆ ವ್ಯವಸ್ಥೆ ಮಾಡಬೇಕು. ಅದು ಹೇಗೆಂದರೆ, ೪-೫ ಸ್ಕೂಲಿನವರು ಒಟ್ಟಿಗೇ ಕಲೆತು ಪ್ರಶ್ನೆಪತ್ರಿಕೆಗಳನ್ನು ತಯಾರಿಸಿ ಪರೀಕ್ಷೆ ನಡೆಸುವುದಲ್ಲದೆ ಉತ್ತರ ಪತ್ರಿಕೆಗಳ ಮೌಲ್ಯಮಾಪನವನ್ನೂ ಕೂಡ ತಮ್ಮ ತಮ್ಮಲ್ಲೇ ಮಾಡಿಕೊಳ್ಳಬೇಕು. ಈ ರೀತಿ ಮೌಲ್ಯಮಾಪನವನ್ನು ಮಾಡಿ ಫಲಿತಾಂಶವನ್ನು ಪ್ರಕಟಿಸಿದ ಮೇಲೆ ಸುಮಾರು ೧-೨ ವರ್ಷಗಳವರೆಗೂ ಆ ಉತ್ತರಪತ್ರಿಕೆಗಳನ್ನು ಹಾಗೆಯೇ ಒಂದು ಕಡೆ ಜೋಪಾನವಾಗಿಡಬೇಕು. ಏಕೆಂದರೆ, ಯಾರಾದರೂ ವಿದ್ಯಾರ್ಥಿಗಳು ತಕರಾರು ಹಾಕಿದರೆ, ಆ ಸಂದರ್ಭದಲ್ಲಿ ಅನುಕೂಲ

ವಾಗುತ್ತದೆ. ಇನ್ನೂ ಒಂದು ಮಾತು ಹೇಳುವುದಾದರೆ ಪೀರಿಯಾಡಿಕಲ್ ಟೆಸ್ಟ್ ಮಾಡಿ ಆ ನಂಬರನ್ನು ಆ ವರ್ಷದ ಕೊನೆಯ ಪರೀಕ್ಷೆಯಲ್ಲಿ ವಿದ್ಯಾರ್ಥಿ ತೆಗೆದುಕೊಳ್ಳುವ ನಂಬರ್ ಜೊತೆಗೆ ಸೇರಿಸಿ ಪರೀಕ್ಷಾ ಫಲಿತಾಂಶವನ್ನು ಪ್ರಕಟಿಸಬೇಕು. ಈ ರೀತಿ ಮಾಡುವುದರಿಂದ ೭ನೇ ತರಗತಿಯ ವಿದ್ಯಾರ್ಥಿಗಳಿಗೆ ಬಹಳ ಉಪಯೋಗವಾಗುತ್ತದೆಂದು ನನ್ನ ಅಭಿಪ್ರಾಯ.

MR. CHAIRMAN.—The Hon. Member has already taken 25 minutes. Please finish it as early as possible.

ಶ್ರೀ ಎಂ. ಶ್ರೀನಿವಾಸ್.—ಸ್ವಾಮಿ, ಇವತ್ತಿನ ದಿವಸ ದಿನೇ ದಿನೇ ಹೈಸ್ಕೂಲ್‌ಗಳು ಬೆಳೆಯುತ್ತಿವೆ. ಕಾಲೇಜುಗಳು ಬೆಳೆಯುತ್ತಿವೆ. ಇವುಗಳಿಗಾಗಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿರುವಾಗ ಕೇವಲ ೨೫ ನಿಮಿಷಗಳಲ್ಲಿ ಪೂರ್ಣವಾಗಿ ಎಲ್ಲ ವಿಷಯಗಳನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕಾಗುವುದಿಲ್ಲ. ನನಗೆ ಇನ್ನೂ ಸುಮಾರು ೧.೩೦ ಗಂಟೆ ಬೇಕಾಗುತ್ತದೆ.

MR. CHAIRMAN.—I cannot help it. Please take another five minutes.

SRI M. SRINIVAS.—Can it be possible for anybody to speak so many things within 5 minutes ? We are going to spend Rs. 150 Crores on Education. I have to speak regarding Primary Education, Secondary Education, Collegiate Education, Library and University affairs. To speak on all these subjects, I require another one and half hours. I have taken months to prepare my points.

SRI P. RAMDEV.—The Chair may educate the Government to give more time.

MR. CHAIRMAN.—I have heard your Whips Your Whip has Suggested the time,

SRI GOVIND P. VADEYARAJ.—No Sir, I have not allotted the time. It is the Speaker who has allotted the time.

MR. CHAIRMAN.—Then, you have to adhere to the Speaker's ruling. The hon. Member can make his speech as concise as possible. The hon. Member may please allow others also to speak.

ಶ್ರೀ ಎಂ. ಶ್ರೀನಿವಾಸ್.—ಸ್ವಾಮಿ, ಇವತ್ತು ಹೈಸ್ಕೂಲ್‌ಗಳು ದಿನೇ ದಿನೇ ಬೆಳೆಯುತ್ತಿರುವುದನ್ನು ನೋಡಿದರೆ ಬಹಳ ಸಂತೋಷವಾಗುತ್ತದೆ. ಆದರೆ ಅದೇ ವಿದ್ಯಾಭ್ಯಾಸದ ಗುಣಮಟ್ಟ ತೆಗೆದುಕೊಂಡರೆ ಮನಸ್ಸಿಗೆ ಅಷ್ಟೇ ಬೇಸರವಾಗುತ್ತದೆ. ನಮ್ಮ ದೇಶದ ವಿದ್ಯಾಭ್ಯಾಸವನ್ನು ಕೇವಲ ಸಂಖ್ಯೆಯ ದೃಷ್ಟಿಯಿಂಧ ಅಳೆಯದೆ, ಅದರ ಗುಣಮಟ್ಟದಿಂದ ಅಳೆಯಬೇಕು ; We will appeal to the Education Minister. ನಮ್ಮ ದೇಶದಲ್ಲಿ ಹೆಚ್ಚು ಹೆಚ್ಚು ಶಾಲೆಗಳು ಬೆಳೆಯ ಬೇಕೆಂಬುದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಆ ಶಾಲೆಗಳನ್ನು ತರೆಯ ಬೇಕಾದರೆ ವಿದ್ಯಾಕ್ಷೇತ್ರದಲ್ಲಿ ಅರಿತು ನುರಿತವರ, ಮೇಧಾವಿಗಳ, ಪರಿಣತರ ಸಲಹೆಗಳನ್ನು ಪಡೆದು ಪರವಾನಗಿಯನ್ನು ಕೊಡಬೇಕು. ಇವತ್ತು ತೆರೆದಿರತಕ್ಕ ಶಾಲೆಗಳ ಪರಿಸ್ಥಿತಿ ಅಷ್ಟು ಸಮಾಧಾನಕರವಾಗಿಲ್ಲ. ಸಾಮಾನ್ಯವಾಗಿ ಏನು ಬಂದಿದೆ ಅಂದರೆ ನಮ್ಮ ಪಕ್ಕದ ಹಳ್ಳಿಯಲ್ಲಿ ಒಂದು ಶಾಲೆಯನ್ನು ತೆರೆದಿದ್ದಾರೆ. ಅವರಂತೆ ನಮ್ಮ ಹಳ್ಳಿಯಲ್ಲೂ ಈ ಸಾರಿ ಒಂದು ಶಾಲೆಯನ್ನು ತೆರೆಯಬೇಕೆಂದು ತೆರೆಯುತ್ತಿದ್ದಾರೆ. ಇಂಥ ಒಂದು ಮನೋಭಾವ ಒಳ್ಳೆಯದಲ್ಲ. ಶಾಲೆಗಳು ಯಾವ ಪ್ರದೇಶದಲ್ಲಿ ನಿಜವಾಗಿಯೂ ಅವಶ್ಯಕತೆ ಇರುತ್ತವೋ ಅಂಥ ಕಡೆಗಳಲ್ಲಿ ತೆರೆಯಬೇಕು. ಪ್ರಾಥಮಿಕ ಶಾಲೆಗಳು ಹಳ್ಳಿಗಳಲ್ಲಿ ಇರಬೇಕು. ಹೈಸ್ಕೂಲುಗಳು ತಾಲ್ಲೂಕು ಕೇಂದ್ರಗಳಲ್ಲಿ, ಜಿಲ್ಲಾ ಕೇಂದ್ರಗಳಲ್ಲಿ, ಅಥವಾ ಹೆಚ್ಚು ಜನಸಂಖ್ಯೆ ಇರುವ ಕಡೆಗಳಲ್ಲಿ ಇರಬೇಕು. ತಾವು ಶಾಲೆಗಳಿಗೆ ಪರವಾನಗಿ ಕೊಡಬೇಕಾದರೆ ಪರಿಣತರ ಸಲಹೆ ಮೇರೆಗೆ ಹಾಗೂ ಆ ಪ್ರದೇಶದಲ್ಲಿ ಶಾಲೆಯ ಅವಶ್ಯ

ಕತೆ ಇದೆಯೋ ಎಂಬುದನ್ನು ತಿಳಿದು ಕೊಡಬೇಕು. ಅದು ಬಿಟ್ಟು ಸರ್ಕಾರಕ್ಕೆ ಹಣ ಹಾಗೂ ಒತ್ತಡ ಬಂತು ಎಂದು ಕೂಡಲೇ ಶಾಲೆ ತೆರೆಯಲು ಪರವಾನಗಿ ಕೊಡುವುದು ಸರಿಯಿಲ್ಲ. ಸ್ವಾಮಿ, ತಮಗೆ ಒಂದು ಮಾತು ಹೇಳುವುದಾದರೆ, ಈ ಶಾಲೆಗಳಿಗಿಂತಲೂ ಹೆಚ್ಚಾಗಿ ವಿದ್ಯಾರ್ಥಿಗಳಿಗೆ ಹಾಸ್ಟಲ್‌ಗಳನ್ನು ತೆರೆದರೆ ಬೇರೆ ಬೇರೆ ಕಡೆಯಿಂದ ಬಂದವರಿಗೆ ಎರಡು ರೀತಿಯಲ್ಲಿ ಅನುಕೂಲವಾಗುತ್ತದೆ.

೪-೦೦ ಪಿ. ಎಂ.

ಈವತ್ತಿನ ದಿವಸ ಜಾತಿ ಮತ್ತಿತರ ಸಾಮಾಜಿಕ ದೋಷಣೆ ಎಂದು ಹೇಳುತ್ತೇನೆ, ಅದು ನಿವಾರಣೆ ಯಾಗುವುದಕ್ಕೆ ಸಾಧ್ಯವಾಗುತ್ತದೆ. ಸಣ್ಣ ವಯಸ್ಸಿನಲ್ಲಿಯೇ ಎಲ್ಲ ಜಾತಿಯ ಎಲ್ಲವರ್ಗದ ವಿದ್ಯಾರ್ಥಿಗಳು ಒಂದುಕಡೆ ಕುಳಿತು ಪಾಠಗಳನ್ನು ಕಲಿತು, ಆಟಪಾಠಗಳನ್ನು ಆಡಿಕೊಂಡು ವಿದ್ಯಾವಂತರಾದರೆ ಜಾತಿಯ ಭಾವನೆ, ವರ್ಗದ ಭಾವನೆಯು ಬರುವುದಕ್ಕೆ ಅವಕಾಶವೇ ಇರುವುದಿಲ್ಲ. ಈ ಒಂದು ದೃಷ್ಟಿಯಿಂದ ಸಾರ್ವಜನಿಕ ಹಾಸ್ಟೆಲ್‌ಗಳನ್ನು ತೆಗೆಯತಕ್ಕಂಥ ಕೆಲಸವನ್ನು ಮಾಡಬೇಕು. ಹೆಚ್ಚಿನ ಶಾಲೆಗಳನ್ನು ತೆಗೆಯುವ ಬದಲಾಗಿ ದೊಡ್ಡ ದೊಡ್ಡ ಶಾಲೆಗಳನ್ನು ತಾಲ್ಲೂಕ್ ಹೆಡ್ ಕ್ವಾಟರ್ಸ್‌ಗಳಲ್ಲಿ ತೆರೆದು ಹೆಚ್ಚಿನ ಸೌಲಭ್ಯಗಳನ್ನು ಕೊಡಬೇಕು. ಹಾಸ್ಟೆಲ್‌ಗಳಿಗೆ ಸಬ್ಸಿಡಿ, ಪಠ್ಯ ಪುಸ್ತಕಗಳು, ಗ್ರಂಥಾಲಯಗಳನ್ನು ಕೊಟ್ಟು ಅನುಕೂಲತೆಯನ್ನು ಕಲ್ಪಿಸಬೇಕು ಕೊಠಾರಿ ಕಮಿಷನ್ ರಿಪೋರ್ಟ್ ಪ್ರಕಾರವಾಗಿ ಒಂದು ಶಾಲೆಯನ್ನು ನಡೆಸಬೇಕಾದರೆ ಕನಿಷ್ಠಪಕ್ಷ ೩೫೦ ಜನ ವಿದ್ಯಾರ್ಥಿಗಳಾದರೂ ಇರಬೇಕೆಂದು ಒಂದು ರೆಕಮೆಂಡೇಷನ್ ಇರುತ್ತದೆ. ೩೫೦ ಜನ ಹುಡುಗರು ಇಲ್ಲದೆಹೋದರೂ ಕನಿಷ್ಠ ೨೫೦ ಜನರಾದರೂ ಇರಬೇಕು. ಕೇವಲ ೬೦-೬೫ ಜನರಿಗೆ ವಿದ್ಯಾರ್ಥಿಗಳಿಗೆ ಒಂದು ಹೈಸ್ಕೂಲನ್ನು ತೆರೆಯುವುದರಿಂದ ಅದರಲ್ಲಿ ಹೆಚ್ಚಿನ ಸೌಲಭ್ಯಗಳು ಇಲ್ಲದೆ ವಿಧ್ಯಾಭ್ಯಾಸ ಗುಣಮಟ್ಟವೂ ಕಡಿಮೆಯಾಗುವುದಕ್ಕೆ ಕಾರಣವಾಗುತ್ತದೆ. ಅಲ್ಲಿ ಬರತಕ್ಕಂಥ ಉಪಾಧ್ಯಾಯರಿಗೂ ಕೂಡ ಆಸಕ್ತಿ ಇರುವುದಿಲ್ಲವೆಂದು ಹೇಳಬಹುದು.

ಒಬ್ಬ ಸದಸ್ಯರು.—ಮಾನ್ಯ ಸದಸ್ಯರು ಮಲೆನಾಡು ಪ್ರದೇಶಗಳ ಶಾಲೆಗಳ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಳ್ಳಬೇಕೆಂದು ಹೇಳುತ್ತೇನೆ. ಅಲ್ಲಿಯ ಶಾಲೆಗಳಲ್ಲಿ ೩೦ ಜನ ವಿದ್ಯಾರ್ಥಿಗಳಿರುವುದೇ ಹೆಚ್ಚು. ಆದ್ದರಿಂದ ವಿದ್ಯಾರ್ಥಿಗಳ ಸಂಖ್ಯೆ ಇಷ್ಟೇ ಇರಬೇಕು ಎನ್ನುವ ವಿಷಯ ನಿಗದಿಮಾಡಲು ಸಾಧ್ಯವಿಲ್ಲ.

ಶ್ರೀ ಎಂ. ಶ್ರೀನಿವಾಸ್.—ಜಾಸ್ತಿ ವಿದ್ಯಾರ್ಥಿಗಳು ಇರುವ ಕಡೆ ಹಾಸ್ಟೆಲ್ ಫೆಸಿಲಿಟೀಸ್ ಕೊಟ್ಟು ಮಕ್ಕಳನ್ನು ಓದಿಸೋಣವೆಂದು ಹೇಳುತ್ತಿದ್ದೇನೆ. ಎಲ್ಲಿ ಕಡಿಮೆ ವಿದ್ಯಾರ್ಥಿಗಳು ಇರುತ್ತಾರೋ ಅಂಥ ಕಡೆಯಿಂದ ದೊಡ್ಡ ದೊಡ್ಡ ಶಾಲೆಗಳು ಇರುವ ಕಡೆಗೆ ಸೇರಿಸಿ, ಹಾಸ್ಟೆಲ್ ಫೆಸಿಲಿಟೀಸ್ ಕೊಟ್ಟು ಓದಿಸಬೇಕೆಂದು ಹೇಳುತ್ತಿದ್ದೇನೆ. ನಮ್ಮ ದೇಶದಲ್ಲಿ ಈವತ್ತಿನ ದಿವಸ ಸಾಧಾರಣವಾಗಿ ಸಣ್ಣ ಸಣ್ಣ ಶಾಲೆಗಳಲ್ಲಿ ಎಲ್ಲ ಸಬ್‌ಜಕ್ಟ್‌ಗಳಿಗೂ ಟೀಚರ್ಸ್ ಇರುವುದಿಲ್ಲ. ಕೆಲವು ಸಂದರ್ಭದಲ್ಲಿ ಸೈನ್ಸ್ ಟೀಚರ್ಸ್ ಎಲ್ಲ ಸಬ್‌ಜಕ್ಟ್‌ಗಳನ್ನು ಮಾಡುವ ಪರಿಸ್ಥಿತಿ ಇರುತ್ತದೆ. ಕೆಲವು ಶಾಲೆಗಳಲ್ಲಿ ವ್ಯಾಯಾಮವನ್ನು ಕಲಿಸಿಕೊಡತಕ್ಕಂಥ ಡ್ರಿಲ್ ಟೀಚರ್ ಪಾಠವನ್ನು ಮಾಡುವ ಸಂದರ್ಭವಿರುತ್ತದೆ. ಆದ್ದರಿಂದ ದೊಡ್ಡ ದೊಡ್ಡ ಶಾಲೆಗಳಲ್ಲಿ ಈ ಒಂದು ಪರಿಸ್ಥಿತಿ ಇರುವುದಿಲ್ಲ. ಒಳ್ಳೆಯ ಲ್ಯಾಬರೇಟರಿ ಇಟ್ಟುಕೊಂಡಿರುತ್ತಾರೆ, ಲೈಬ್ರರಿ ಇಟ್ಟುಕೊಂಡಿರುತ್ತಾರೆ, ಸ್ಪೆಷಲೈಸ್ಡ್ ಟೀಚರ್ಸ್‌ಗಳನ್ನು ಇಟ್ಟುಕೊಂಡಿರುತ್ತಾರೆ, ಇಂಥ ಶಾಲೆಗಳಲ್ಲಿ ವಿದ್ಯಾರ್ಥಿಗಳ ವ್ಯಾಸಂಗ ನಡೆದರೆ ಅವರ ಗುಣಮಟ್ಟವೂ ಹೆಚ್ಚುತ್ತದೆ. ದೊಡ್ಡ ದೊಡ್ಡ ಶಾಲೆಗಳಲ್ಲಿ ಆಟದ ಮೈದಾನಗಳು ಇದ್ದು ಕ್ರೀಡಾ ಚಟುವಟಿಕೆಗಳಲ್ಲಿಯೂ ಭಾಗವಹಿಸಲು ಅವಕಾಶವಾಗುತ್ತದೆ. ಕೇವಲ ಶಾಲೆಗಳು ಬೇಕೆಂದಾಗ ಅವಶ್ಯಕತೆ ಇಲ್ಲದೆ ಇರುವ ಕಡೆಗಳಲ್ಲೆಲ್ಲ ಶಾಲೆಗಳನ್ನು ತೆರೆಯಲು ಅವಕಾಶವನ್ನು ಕೊಡಬಾರದು. ಎಷ್ಟೋ ಕಡೆಗಳಲ್ಲಿ ಸ್ಪೋರ್ಟ್ಸ್ ಫೆಸಿಲಿಟೀಸ್ ಇರುವುದಿಲ್ಲ ಶಾಲೆಗಳನ್ನು ತೆರೆಯುವ ಅನುಮತಿ ಕೊಟ್ಟಾಗ ಸ್ಪೋರ್ಟ್ಸ್ ಫೆಸಿಲಿಟೀಸ್ ಇರಬೇಕೆನ್ನುವುದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು.

ಮತ್ತೊಂದು ವಿಚಾರವೆಂದರೆ ಈವತ್ತಿನ ದಿವಸ ಅನೇಕ ಪಬ್ಲಿಕ್ ಸ್ಕೂಲ್ಸ್‌ಗಳು ಇರುತ್ತವೆ. ರೆಸಿಡೆನ್‌ಷಿಯಲ್ ಸ್ಕೂಲ್‌ಗಳು ಇವೆ. ನಮ್ಮ ಸರ್ಕಾರದವರು ಎರಡು ಪಬ್ಲಿಕ್ ಸ್ಕೂಲ್‌ಗಳನ್ನು ನಡೆಸುತ್ತಿರುತ್ತಾರೆ. ಕಿತ್ತೂರು ರಾಣಿ ಚೆನ್ನಮ್ಮ ಸ್ಕೂಲ್ ಎಂದು ನಡೆಯುತ್ತಿದೆ. ಎಕ್ಸ್‌ಪಿರಿಮೆಂಟಲ್ ಬೇಸಿಸ್‌ಮೇಲೆ ಪ್ರತಿಯೊಂದು ಭಾಗದಲ್ಲಿಯೂ ಇಂಥ ಶಾಲೆಗಳನ್ನು ತೆರೆದರೆ ಬಹಳ ಒಳ್ಳೆಯದಾಗುತ್ತದೆ.

ಕೆಲವು ಜನಕೆ ಕೊಡಬೇಕೆಂದು ಇರುತ್ತದೆ. ಎಲ್ಲ ವರ್ಗದ ಜನರನ್ನು ಇಲ್ಲಿ ಸೇರುವ ಅವಕಾಶವನ್ನು ಕಲ್ಪಿಸಿದರೆ, ಈ ಒಂದು ವಾತಾವರಣದಲ್ಲಿ ವಿದ್ಯಾಭ್ಯಾಸವನ್ನು ಕೊಡುವುದಾದರೆ ನಮ್ಮ ದೇಶಕ್ಕೆ ಒಳ್ಳೆಯ ಭವಿಷ್ಯ ಬರುತ್ತದೆ. ಹಿಂದುಳಿದಿರತಕ್ಕಂಥ ವಿದ್ಯಾರ್ಥಿಗಳಿಗೂ ಒಳ್ಳೆಯದಾಗುತ್ತದೆ. ಲೆವಡಲ್, ಬಿಷಪ್‌ಕಾಟನ್ ಮುಂತಾದ ಸ್ಕೂಲ್‌ಗಳಲ್ಲಿ ಓದಬೇಕೆಂಬ ಆಸೆ ವಿದ್ಯಾರ್ಥಿಗಳಲ್ಲಿ ಇರುತ್ತದೆ, ರಾಮಕೃಷ್ಣಾಶ್ರಮದಲ್ಲಿ ಓದಬೇಕೆಂಬ ಆಶೆ ಇರುತ್ತದೆ. ಆದರೆ ಆರ್ಥಿಕವಾಗಿ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಕೆಲವಾದರೂ ರೆಸಿಡೆನ್‌ಶಿಯಲ್ ಸ್ಕೂಲ್‌ಗಳನ್ನು ತೆರೆಯುವತ್ತ ಗಮನವನು ಇಟ್ಟುಕೊಳ್ಳ ಬೇಕೆಂದು ಹೇಳುತ್ತೇನೆ.

ಇನ್ನು ವಿದ್ಯಾಭ್ಯಾಸ ಮಾಡುತ್ತಿರುವಾಗ ಫಿ ೀಶಿಫ್ ಸ್ಕಾಲರ್‌ಶಿಫ್ ಎಂದು ನಮ್ಮ ಸರ್ಕಾರದವರು ಬಹಳ ಉದಾರವಾಗಿ ಕೊಡುತ್ತಿರುತ್ತಾರೆ. ಫ್ರೀಶಿಫ್ ಮತ್ತು ಸ್ಕಾಲರ್‌ಶಿಫ್ ಕೊಡಬೇಕಾದರೆ ತಾವು ಯಾವುದಾದರೂ ಒಂದಕ್ಕೆ ಲಿಂಕ್ ಇಟ್ಟುಕೊಳ್ಳಬೇಕು. ಎಲ್ಲರಿಗೂ ಕೊಡುವುದಾದರೆ ಇದರಿಂದ ಒಂದು ಕೆಟ್ಟ ಪರಿಣಾಮವಾಗುತ್ತದೆ. ಇದರ ಬಗ್ಗೆ ಒಂದು ಗಮನ ಸೆಳೆಯುವ ಸೂಚನೆಯೂ ಕೂಡ ಬಂದಿತ್ತು. ಇದರಲ್ಲಿ ಅನೇಕ ಸಂದರ್ಭಗಳಲ್ಲಿ ಅಪ್ರಮಾಣಿಕತೆ ಅವ್ಯವಹಾರ ನಡೆದಿರುತ್ತದೆ. ಶಾಲೆಗೆ ಕ್ರಮವಾಗಿ ಹಾಜರಾತಿ ಇಲ್ಲದಿದ್ದರೂ ಕೂಡ ಸ್ಕಾಲರ್‌ಶಿಫ್ ಮತ್ತು ಫ್ರೀಶಿಫ್ ಪಡೆದಿರುತ್ತಾರೆ. ಆದ್ದರಿಂದ ಅಟೆಂಡೆನ್ಸ್‌ಗೂ ಸ್ಕಾಲರ್‌ಶಿಫ್‌ಗೂ ಒಂದು ಲಿಂಕ್ ಇಟ್ಟರೆ, ಒಂದು ಜವಾಬ್ದಾರಿ ಬರುತ್ತದೆ. ಅಟೆಂಡೆನ್ಸ್ ಕಡಿಮೆ ಇರುವವರಿಗೆ ಸ್ಕಾಲರ್‌ಶಿಫ್ ಮತ್ತು ಫ್ರೀಶಿಪ್ ತೆಗೆದುಕೊಳ್ಳುವುದಕ್ಕೆ ಅನರ್ಹ ರಾಗುತ್ತಾರೆ. ಈ ರೀತಿಯಾಗಿ ಯಾರು ಅಕ್ರಮವಾಗಿ ಪಡೆಯುತ್ತಾರೋ ಅಂಥವರಿಂದ ಕಡ್ಡಾಯವಾಗಿ ವಾಪಸ್ ತೆಗೆದುಕೊಳ್ಳಲು ಒಂದು ರೂಲ್ಸ್ ಫ್ರೇಮ್ ಮಾಡಬೇಕೆಂದು ಹೇಳುತ್ತೇನೆ.

ಮತ್ತೊಂದು ವಿಷಯವೆಂದರೆ ಎಲ್ಲ ಶಾಲೆಗಳಲ್ಲಿಯೂ ಸ್ಪೋರ್ಟ್ಸ್, ರೀಡಿಂಗ್ ರೂಮ್ ಇವುಗಳ ಯಾವುದೇ ಸೌಲಭ್ಯಗಳು ಇರುವುದಿಲ್ಲ. ಕೇವಲ ರಾಜಕೀಯ ಪಾಪ್ಯುಲ್ಯಾರಿಟಿಗೋಸ ರವಾಗಿ ಮಾಡಿದರೆ ವಿನಃ ಅದರಿಂದ ಯಾವುದೇ ಸಾಧನೆಯನ್ನು ಮಾಡಲಿಲ್ಲ ಸ್ಪೋರ್ಟ್ಸ್ ಎಷ್ಟು ಮುಖ್ಯವಾದ ವಿಷಯ ವೆನ್ನುವುದರ ಬಗ್ಗೆ ಅಷ್ಟಾಗಿ ಗಮನವನ್ನು ಕೊಟ್ಟಹಾಗೆ ಕಾಣುತ್ತಿಲ್ಲ. ಹಣದ ಸಹಾಯವನು ಒದಗಿಸದಿದ್ದರೆ ಸ್ಪೋರ್ಟ್ಸ್ ಆಕ್ಟಿವಿಟೀಸ್‌ಗಳನ್ನು ಶಾಲೆಗಳು ಹೇಗೆ ನಡೆಸಲು ಸಾಧ್ಯವಾಗುತ್ತದೆ. ಕಳೆದ ವರ್ಷ ಯಾವುದೇ ಶಾಲೆಗಳಲ್ಲಿ ಒಂದು ಸ್ಪೋರ್ಟ್ಸ್ ಆಕ್ಟಿವಿಟಿಸ್ ನಡೆಯಲಿಲ್ಲ. ಯಾವುದೇ ಕ್ರೀಡಾ ಚಟುವಟಿಕೆಗಳು, ಸಾಂಸ್ಕೃತಿಕ ಚಟುವಟಿಕೆಗಳು ನಡೆಯಲಿಲ್ಲ. ಇದೆಲ್ಲಕೂ ಹಣದ ಅಭಾವವೆ ಕಾರಣವಾಗಿರುತ್ತದೆ. ಆದ್ದರಿಂದ ವಿದ್ಯಾರ್ಥಿಗಳ ಹಿತವನ್ನು ದೃಷ್ಟಿಯಲ್ಲಿಟ್ಟುಕೊಂಡು, ಶಾಲೆಗಳನ್ನು ತೆರೆಯಲು ಆರ್ಡರನ್ನು ಕೊಡಬೇಕು. ರಾಜಕೀಯ ದೃಷ್ಟಿಯನ್ನು ಇಟ್ಟುಕೊಂಡು, ರಾಜಕೀಯ ಪಾಪ್ಯುಲ್ಯಾರಿಟಿಗೋಸ್ಕರವಾಗಿ ಶಾಲೆಗಳನ್ನು ಅನಾವಶ್ಯಕವಾಗಿ ತೆರೆಯುವುದು ಬೇಡವೆಂದು ಹೇಳುತ್ತೇನೆ.

ಇನ್ನು ಪ್ರಿಯೂನಿವರ್ಸಿಟಿಯ ಬಗ್ಗೆ ಹೇಳುವುದಾದರೆ ೧೯೭೬ರಲ್ಲಿ ಅಂದಿನ ವೈಸ್‌ಚಾನ್ಸಲರ್ ಆಗಿದ್ದ ಶ್ರೀ ಅರಸ್‌ರವರ ನೇತೃತ್ವದಲ್ಲಿ ಒಂದು ಕಮಿಟಿಯನ್ನು ಮಾಡಿದ್ದರು ಮೈಸೂರು ಪ್ರಿಯೂನಿ ವರ್ಸಿಟಿ ಸ್ಟಡೀಸ್ ಬಗ್ಗೆ ಮಾಡಿದಂಥ ಕಮಿಟಿಯವರು ನನಗೆ ತಿಳಿದ ಮಟ್ಟಿಗೆ ಅವರು ರಿಪೋರ್ಟನ್ನು ಸಬ್‌ಮಿಟ್ ಮಾಡಿದರೋ ಇಲ್ಲವೋ ತಿಳಿದಿಲ್ಲ. ತಾವು ಅದರ ಬಗ್ಗೆ ಏನು ಕಾರ್ಯಕ್ರಮ ತೆಗೆದು ಕೊಂಡಿರುತ್ತೀರೆಂದು ಕೇಳುತ್ತೇನೆ. ಇದುವರೆಗೂ ಅಂದರೆ ಮೂರು ವರ್ಷವಾದರೂ ಕೂಡ ಯಾವುದೇ ಒಂದು ನಿರ್ಧಾರಕ್ಕೆ ಬರದೇಹೋದರೆ ಈ ವಿದ್ಯಾ ಇಲಾಖೆ ಕೆಲಸ ಮಾಡುತ್ತಿದೆಯೋ ಎಂಬ ಪ್ರಶ್ನೆಯನ್ನು ನಾನು ಕೇಳಬೇಕಾಗುತ್ತದೆ. ಪಿ.ಯು.ಸಿ. ಶಿಕ್ಷಣ ಯಾವರೀತಿ ಇದೆ ಎಂದರೆ ಇದಕ್ಕೆ ನಾಲ್ಕು ಜನ ಗಂಡಂದಿರು ಕಾಂಪೋಸಿಟ್ ಕಾಲೇಜಿನ ಪಿ.ಯು.ಸಿ. ಶಿಕ್ಷಣಕ್ಕೆ ಕಾಲೇಜು ಶಿಕ್ಷಣ ಇಲಾಖೆ ನಿರ್ದೇಶನಾಲಯ ಜವಾಬ್ದಾರಿ ವಹಿಸಿಕೊಂಡಿದೆ, ಹೈಸ್ಕೂಲಿನಲ್ಲಿ ಇರತಕ್ಕ ಜೂನಿಯರ್ ಕಾಲೇಜಿಗೆ ಡಿ.ಪಿ.ಐ. ರವರು ಜವಾಬ್ದಾರಿ ವಹಿಸಿಕೊಂಡಿದ್ದಾರೆ. ಬೇರೆ ಜೂನಿಯರ್ ಕಾಲೇಜಿನ ಪಿ ಯು.ಸಿ. ಶಿಕ್ಷಣಕ್ಕೆ ಪ್ರೀಯೂನಿ ವರ್ಸಿಟಿ ಬೋರ್ಡ್ ಇದೆ, ಮತ್ತು ವೊಕೇಷನಲ್ ಎಜುಕೇಷನ್‌ನಲ್ಲಿ ಓದುವವರಿಗೆ ವೊಕೇಷನಲ್ ಡೈರೆಕ್ಟರ್ ಇದ್ದಾರೆ. ಈ ರೀತಿ ನಾಲ್ಕು ಜನರ ಆಡಳಿತಕ್ಕೆ ಇದು ಒಳಪಟ್ಟಿದೆ. ಈ ರೀತಿಯ ವ್ಯವಸ್ಥೆ ಬೇರೆ ಯಾವುದಾದರೂ ದೇಶದಲ್ಲಿ ಇದೆಯೋ ಎಂಬುದನ್ನು ತಾವು ದಯವಿಟ್ಟು ಯೋಚನೆ ಮಾಡಬೇಕಾಗಿದೆ. ಕಾಲೇಜು ಶಿಕ್ಷಣ ಇಲಾಖೆ ವಿಷಯವಾಗಿ ಹೇಳುವುದಾದರೆ ಇವತ್ತು ಕಾಲೇಜು ಶಿಕ್ಷಣ ಇಲಾಖೆ ಏನಾದರೂ ಕೆಲಸ ಮಾಡುತ್ತಿದೆಯೋ ಎಂಬ ಪ್ರಶ್ನೆಯನ್ನು ಹಾಕಬೇಕಾಗಿದೆ. ನನ್ನ ಹತ್ತಿರ ಅನೇಕ ದೂರುಗಳು ಬಂದಿವೆ. ನಾನು ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯನಾಗಿರುವುದರಿಂದ ಅನೇಕ ಜನ

ಪ್ರಿನ್ಸಿಪಾಲರು ನನ್ನನ್ನು ಭೇಟಿಯಾಗುತ್ತಾರೆ. ಅವರು ಹೇಳುತ್ತಾರೆ, ನಾವು ಕೊಲಿಜಿಯೇಟ್ ಎಜುಕೇಷನ್ ಇಲಾಖೆಗೆ ಪತ್ರಗಳನ್ನು ಬರೆದರೆ ಮೂರು ನಾಲ್ಕು ತಿಂಗಳುಗಳಾದರೂ ನಮಗೆ ಉತ್ತರವೇ ಬರುವುದಿಲ್ಲ ಮತ್ತು ಅಲ್ಲಿ ಯಾವುದೇ ರೀತಿಯಲ್ಲಿ ಅಪ್ರೋಚ್ ಮಾಡುವುದಕ್ಕೂ ಸಾಧ್ಯವಾಗುತ್ತಾ ಇಲ್ಲ ಎಂಬ ದೂರುಗಳನ್ನು ಅವರು ಹೇಳಿದ್ದಾರೆ. [ಅದಕ್ಷತೆಗೆ ಮತ್ತೊಂದು ಹೆಸರು ಎಂದರೆ ಈ ಕೊಲಿಜಿಯೇಟ್ ಎಜುಕೇಷನ್ ನಿರ್ದೇಶನಾಲಯ. ಉದಾಹರಣೆಗೆ ಹೇಳುವುದಾದರೆ ಯಾವುದೋ ಒಂದು ಕಾಲೇಜಿಗೆ ಅಪಾಯಿಂಟ್‌ಮೆಂಟ್ ಮಾಡಿಕೊಳ್ಳುವುದಕ್ಕೆ ಪರ್ಮಿಷನ್ ಬೇಕಾಗಿತ್ತು. ಅದಕ್ಕೆ ೧೯೭೭ನೇ ಇಸವಿ ಅಕ್ಟೋಬರ್‌ನಲ್ಲಿ ಆ ಕಾಲೇಜಿನವರು ಕೊಲಿಜಿಯೇಟ್ ಎಜುಕೇಷನ್ ಡೈರೆಕ್ಟರ್ ಅವರಿಗೆ ಪತ್ರ ಬರೆದರೆ ಅದಕ್ಕೆ ಉತ್ತರವೇ ಬರಲಿಲ್ಲ. ೧೯೭೮ನೇ ಇಸವಿ ಮೇನಲ್ಲಿ ಖುದ್ದಾಗಿ ಹೋಗಿ ಕೊಲಿಜಿಯೇಟ್ ಎಜುಕೇಷನ್ ಡೈರೆಕ್ಟರ್ ಆಫೀಸಿನಲ್ಲಿ ವಿಚಾರಿಸಿದಾಗ ೧೯೭೮ನೇ ಜನವರಿಯಲ್ಲೇ ನಾವು ಉತ್ತರ ಕಳಿಸಿದ್ದೇವೆ ಎಂದು ಹೇಳಿದರು. ಆಮೇಲೆ ಸಂಬಂಧಪಟ್ಟ ಗುಮಾಸ್ತರನ್ನು ಹೋಗಿ ನೋಡಿದಾಗ ಇವರಿಗೆ ಕಳಿಸಬೇಕಾದ ಕಾಗದದ ಮೂಲ ಪ್ರತಿ ಯಾವುದಿತ್ತೋ ಅದು ಅವನ ಹತ್ತಿರವೇ ಇತ್ತು. ೫ ತಿಂಗಳಾಗಿದ್ದರೂ ಸಹ ಆ ಕಾಗದವನ್ನು ಪೋಸ್ಟ್ ಮಾಡುವುದಕ್ಕೆ ಹೋಗದೇ ಆ ಕಾಗದವನ್ನು ಹಾಗೆಯೇ ಇಟ್ಟುಕೊಂಡಿದ್ದಾರೆ. ಇದು ಆ ಇಲಾಖೆಯಲ್ಲಿ ಆಗುತ್ತಿರುವ ಪರಿಸ್ಥಿತಿ. ಆದ್ದರಿಂದ ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುವುದೇನೆಂದರೆ ಈ ಇಲಾಖೆ ದಕ್ಷತೆಯಿಂದ ಕೆಲಸ ಮಾಡುವಂತೆ ತಾವು ಕ್ರಮ ತೆಗೆದುಕೊಳ್ಳಬೇಕು ಇವತ್ತಿನ ದಿವಸ ಬಹಳ ಜನ ಕಾಲೇಜು ಅಭ್ಯಾಸ ಮಾಡುವುದಕ್ಕೆ ಆಸೆಯನ್ನು ವ್ಯಕ್ತಪಡಿಸುತ್ತಿದ್ದಾರೆ. ಈಪತ್ತಿನ ಪರಿಸ್ಥಿತಿಯನ್ನು ನೋಡಿದರೆ ಉಚ್ಚ ಶಿಕ್ಷಣ ಅವಶ್ಯಕವೇ ಎಂಬ ಪ್ರಶ್ನೆಯನ್ನು ನಾವು ಹಾಕಿಕೊಳ್ಳಬೇಕಾಗಿದೆ. ಬೇರೆ ದೇಶಗಳಲ್ಲಿ ಶೇಕಡ ೧೫ ರಿಂದ ೨೦ ರಷ್ಟು ಮಾತ್ರ ಕಾಲೇಜು ಶಿಕ್ಷಣವನ್ನು ಪಡೆಯುವುದಕ್ಕೆ ಬರುತ್ತಿದ್ದಾರೆ. ಆದರೆ ನಮ್ಮ ದೇಶದಲ್ಲಿ ಎಸ್. ಎಸ್. ಎಲ್. ಸಿ. ಪಾಸಾದವರಲ್ಲಿ ಶೇಕಡ ೭೦-೭೫ರಷ್ಟು ಕಾಲೇಜು ಶಿಕ್ಷಣ ಪಡೆಯುವುದಕ್ಕೆ ಬರುತ್ತಿದ್ದಾರೆ. ಕಾಲೇಜಿಗೆ ಹೋಗತಕ್ಕ ವಿದ್ಯಾರ್ಥಿಗಳ ಸಂಖ್ಯೆಯನ್ನು ಕಡಿಮೆ ಮಾಡಿ ಸೆಲ್ಫ್ ಎಂಪ್ಲಾಯ್‌ಮೆಂಟಿಗೆ ಅನುಕೂಲವಾಗತಕ್ಕ ಕೋರ್ಸ್‌ಗಳನ್ನು ಜಾಸ್ತಿ ಮಾಡಿ ವಿದ್ಯಾರ್ಥಿಗಳು ವೊಕೇಷನಲ್ ಕೋರ್ಸ್‌ಗೆ ಹೋಗುವಂತೆ ವ್ಯವಸೆ ಮಾಡಬೇಕು. ಇದಕ್ಕೆ ಹೆಚ್ಚು ಉತ್ತೇಜನವನ್ನು ಕೊಟ್ಟರೆ ಕಾಲೇಜಿಗೆ ಬರತಕ್ಕ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುತ್ತದೆ. ಕಾಲೇಜು ಶಿಕ್ಷಣದ ಗುಣಮಟ್ಟವನ್ನೂ ಕೂಡ ಹೆಚ್ಚಿಸುವುದಕ್ಕೆ ಇದರಿಂದ ಸಾಧ್ಯವಾಗುತ್ತದೆ. ಮತ್ತೊಂದು ವಿಚಾರ ಏನೆಂದರೆ ಇವತ್ತಿನ ದಿವಸ ಕಾಲೇಜುಗಳ ಸಂಖ್ಯೆಯನ್ನು ಬೆಳೆಸುವುದಕ್ಕೆ ಸಹ ನಾವು ತಡೆ ಹಾಕಬೇಕಾಗಿದೆ. ಎಲ್ಲಾ ಕಡೆಗಳಲ್ಲಿ ಕಾಲೇಜುಗಳ ಸಂಖ್ಯೆ ಬೆಳೆಯುವುದು ಬೇಕಿಲ್ಲ. ಮೈಸೂರು, ಬೆಂಗಳೂರಿನಂಥ ನಗರಗಳಲ್ಲಿ ಈಗಾಗಲೇ ಸಾಕಷ್ಟು ಕಾಲೇಜುಗಳಿದ್ದು ಮತ್ತೆ ಇಲ್ಲಿ ಕಾಲೇಜುಗಳು ಬೆಳೆಯುವುದಕ್ಕೆ ಅವಕಾಶವನ್ನು ನೀಡಬಾರದು. ಬೇರೆ ಯಾವುದಾದರೂ ಜಿಲ್ಲಾ ಕೇಂದ್ರಗಳಲ್ಲಿ ಕಾಲೇಜುಗಳ ಸಂಖ್ಯೆ ಕಡಿಮೆ ಇದ್ದರೆ ಅಂಥ ಕಡೆಗಳಿಗೆ ಮಾತ್ರ ಕಾಲೇಜುಗಳನ್ನು ಕೊಡುವುದಕ್ಕೆ ಏರ್ಪಾಡು ಮಾಡಬೇಕು. ಒಂದು ವೇಳೆ ಎಲ್ಲಾ ಕಡೆ ಕಾಲೇಜುಗಳ ಸಂಖ್ಯೆಯನ್ನು ಹೆಚ್ಚಿಸುತ್ತಾ ಹೋದರೆ ಎರಡು ಮೂರು ವರ್ಷ ಆದಮೇಲೆ ಹಣಕಾಸಿನ ವ್ಯವಸ್ಥೆ ಸಂಪೂರ್ಣವಾಗಿ ಸರ್ಕಾರದ ಮೇಲೆ ಬೀಳುತ್ತದೆ. ಇದರಿಂದ ಬಡವ ಕೊಡತಕ್ಕ ತೆರಿಗೆ ಹಣ ಸದುಪಯೋಗವಾದಂತಾಗುವುದಿಲ್ಲ. ವಿದ್ಯಾ ಇಲಾಖೆಯವರು ಹಣ ಖರ್ಚು ಮಾಡಬೇಕಾದರೆ ಕಾಲೇಜು ಶಿಕ್ಷಣಕ್ಕೆ ಖರ್ಚು ಮಾಡುವ ಬದಲು ಪ್ರೈಮರಿ ಶಿಕ್ಷಣಕ್ಕೆ ಹೆಚ್ಚು ಖರ್ಚು ಮಾಡಿ ಅದನ್ನು ಅಭಿವೃದ್ಧಿಪಡಿಸುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ನಿನ್ನೆ ಮೈಸೂರು ವಿಶ್ವವಿದ್ಯಾನಿಲಯದ ಅಫಿಲಿಯೇಷನ್ ಕಮಿಟಿ ಸದಸ್ಯನಾಗಿ ಮೂರು ನಾಲ್ಕು ಜಾಗಗಳಿಗೆ ಹೋಗಿದ್ದೆ. ಅಲ್ಲಿ ಹೋದಾಗ ಹೊಸ ಕಾಲೇಜುಗಳಿಗೆ ಅಫಿಲಿಯೇಷನ್ ಕೊಡುವುದಕ್ಕೆ ನಾವು ಹೋಗಲಿಲ್ಲ. ಹೊಸ ಕೋರ್ಸ್‌ಗಳನ್ನು ಪ್ರಾರಂಭ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೇವೆ.

ಛೇರ್ಮನ್‌ರವರು.—ನಿಮ್ಮ ಭಾಷಣವನ್ನು ದಯವಿಟ್ಟು ಬೇಗ ಮುಗಿಸಬೇಕು. ಏಕೆಂದರೆ ಬೇರೆಯವರಿಗೆ ಅವಕಾಶವನ್ನು ಕೊಡಬೇಕು.

ಶ್ರೀ ಎಂ. ಶ್ರೀನಿವಾಸ್.—ವಿಶ್ವವಿದ್ಯಾನಿಲಯಗಳ ಬಗ್ಗೆ ಒಂದೆರಡು ವಿಚಾರಗಳನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಮಾನ್ಯ ಶಿಕ್ಷಣ ಮಂತ್ರಿಗಳು ಹೋದಸಾರಿ ಇದೇ ಬೇಡಿಕೆಗೆ ಉತ್ತರ ಕೊಡುತ್ತಾ ಯೂನಿವರ್ಸಿಟಿ ಆಕ್ಟ್‌ನಲ್ಲಿರತಕ್ಕ ಕೆಲವು ಲೋಪದೋಷಗಳನ್ನು ಸರಿ ಮಾಡಿ ಅದಕ್ಕೆ ತಿದ್ದುಪಡಿಗಳನ್ನು ತರುತ್ತೇವೆ ಎಂಬ ಭರವಸೆಯನ್ನು ನೀಡಿದ್ದರು. ಆದರೆ ಇದುವರೆಗೂ ಆ ಬಗ್ಗೆ

ಯಾವುದೇ ಒಂದು ತಿದ್ದುಪಡಿಯನ್ನೂ ಸಭೆಯ ಮುಂದೆ ತರಲಿಲ್ಲ. ಇದನ್ನು ನೋಡಿದರೆ ಮಾನ್ಯ ಮಂತ್ರಿಗಳು ಯೂನಿವರ್ಸಿಟಿಗಳು ಇಲ್ಲವೇ ಇಲ್ಲ ಎಂಬ ಭಾವನೆಯನ್ನು ಇಟ್ಟುಕೊಂಡಿದ್ದಾರೇನೋ ಅನ್ನಿಸುತ್ತದೆ. ೧೯೭೫ನೇ ಸೆಪ್ಟೆಂಬರ್ ೨೬ನೇ ತಾರೀಖು ಯಾವ ದೃಷ್ಟಿಯಿಂದ ಕಾಮನ್ ಯೂನಿವರ್ಸಿಟಿ ಬಿಲ್ಲನ್ನು ಸುಗ್ರೀವಾಜ್ಞೆ ಮೂಲಕ ಆಕ್ಟ್ ಮಾಡಿದರೋ ಆ ದೃಷ್ಟಿ ಮತ್ತು ಆ ಉತ್ಸಾಹ ಈ ತಿದ್ದುಪಡಿಯನ್ನು ತರುವ ಬಗ್ಗೆ ಇಲ್ಲ. ಯಾವುದೇ ಒಂದು ಚರ್ಚೆ ಇಲ್ಲದೇ ದೋಷಪೂರಿತವಾದ ಒಂದು ಬಿಲ್ಲನ್ ೧೯೭೫ರಲ್ಲಿ ಸುಗ್ರೀವಾಜ್ಞೆ ಮೂಲಕ ಕಾಯಿದೆಯನ್ನಾಗಿ ಮಾಡಿದಿರಿ. ನಾಲ್ಕು ವರ್ಷ ಆಯಿತು. ಇದರಲ್ಲಿ ಯಾವ ಯಾವ ದೋಷಗಳಿವೆ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಮಾನ್ಯ ಸಚಿವರು ಹೋಗಲಿಲ್ಲ. ಇದರಿಂದ ಏನು ಅನಾಹುತವಾಗಿದೆ ಎಂದು ಹೇಳಿದರೆ ೫ನೇ ಯೋಜನೆಯಲ್ಲಿ ಯೂನಿವರ್ಸಿಟಿ ಗ್ರ್ಯಾಂಟ್ ಕಮಿಷನ್‌ನವರು ಕೊಟ್ಟಿದ್ದಂಥ ಅನೇಕ ಹುದ್ದೆಗಳನ್ನು ಸಂಬಂಧಪಟ್ಟ ವಿಶ್ವವಿದ್ಯಾನಿಲಯದವರು ಭರ್ತಿ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಹೊಸ ಪೋಸ್ಟ್‌ಗಳನ್ನು ಕೇಳುವುದಕ್ಕೆ ಹೋದರೆ ನಿಮಗೆ ಕೊಟ್ಟಿದ್ದ ಪೋಸ್ಟ್‌ಗಳನ್ನೇ ನೀವು ಭರ್ತಿ ಮಾಡಿಕೊಂಡಿಲ್ಲ ಹಾಗೆ ಬಿಟ್ಟಿದ್ದೀರಿ, ಈಗ ಹೊಸ ಪೋಸ್ಟ್‌ಗಳನ್ನು ಹೇಗೆ ಕೊಡುವುದಕ್ಕೆ ಸಾಧ್ಯ ಎಂಬ ಪ್ರಶ್ನೆಯನ್ನು ಕೇಳುತ್ತಿದ್ದಾರೆ. ಯು. ಜಿ. ಸಿ. ಯವರು ಕೊಟ್ಟಂತಹ ಉಪಾಧ್ಯಾಯರುಗಳನ್ನು ನೀವು ಉಪಯೋಗಿಸಿ ಕೊಳ್ಳದೆ ಹೋದರೆ ಇದರಿಂದ ಯಾರಿಗೆ ನಷ್ಟವಾಗುತ್ತದೆ ? ಏತಕ್ಕಾಗಿ ಈ ತೊಂದರೆ ಎಂಬುದಾಗಿ ಹೇಳುವುದಾದರೆ ನಿಮ್ಮಲ್ಲಿರತಕ್ಕಂಥ ಯೂನಿವರ್ಸಿಟಿ ಆಕ್ಟ್. ಇದರಿಂದ ಅನೇಕ ತೊಂದರೆಗಳಾಗಿವೆ. ಎಲ್ಲವನ್ನೂ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಬೇಕಾದಷ್ಟು ವಿಷಯಗಳಿದ್ದರೂ ಎಲ್ಲವನ್ನೂ ತಿಳಿಸುವುದಕ್ಕೆ ಸಮಯದ ಅಭಾವ ಇದೆ. ಮತ್ತೆ ಎಲ್ಲವನ್ನೂ ಹೇಳುವುದಕ್ಕೂ ಸಾಧ್ಯವಾಗುವುದಿಲ್ಲ.

ಮತ್ತೆ ಸೆನೆಟ್ ಮೆಂಬರ್ಸನ್ನು ಮಾಡುವಾಗ ನಿಮ್ಮ ಆಕ್ಟ್‌ನಲ್ಲಿ ಪದನಿಮಿತ್ತ ಡೈರೆಕ್ಟರನ್ನು ಮಾಡುವುದಕ್ಕೆ ಅವಕಾಶ ಇದೆ. ಅದರಂತೆ ಆರೋಗ್ಯ ಮತ್ತು ಕುಟುಂಬಕಲ್ಯಾಣ ಇಲಾಖೆಯಲ್ಲೇ ಎರಡು ವಿಭಾಗಗಳನ್ನಾಗಿ ಮಾಡಿದ್ದೀರಿ. ಒಂದು ಡೈರೆಕ್ಟರ್ ಫಾರ್ ಮೆಡಿಕಲ್ ಎಜುಕೇಷನ್, ಮತ್ತೊಂದು ಡೈರೆಕ್ಟರ್ ಫಾರ್ ಹೆಲ್ತ್ ಅಂಡ್ ಫ್ಯಾಮಿಲಿ ವೆಲ್‌ಫೇರ್. ಇವರನ್ನು ಯೂನಿವರ್ಸಿಟಿ ಸೆನೆಟ್‌ನಲ್ಲಿ ಸದಸ್ಯರನ್ನಾಗಿ ಮಾಡಿದ್ದೀರಿ. ಯೂನಿವರ್ಸಿಟಿಗೆ ಸಂಬಂಧಪಟ್ಟ ವ್ಯಕ್ತಿ ಸೆನೆಟ್ ಸಭೆಗೆ ಹೋಗುತ್ತಿಲ್ಲ. ಸಿಂಡಿಕೇಟ್ ಸಭೆಗೆ ಹೋಗುತ್ತಿಲ್ಲ, ಯಾವ ವ್ಯಕ್ತಿ ಯೂನಿವರ್ಸಿಟಿಗೆ ಸಂಬಂಧ ಪಟ್ಟಿಲ್ಲವೋ ಆ ವ್ಯಕ್ತಿ ಸೆನೆಟ್ ಹಾಗೂ ಸಿಂಡಿಕೇಟ್ ಸಭೆಗಳಿಗೆ ಹೋಗತಕ್ಕಂಥಹ ಪರಿಸ್ಥಿತಿ ಇದೆ. ಈ ಒಂದು ಸಣ್ಣ ಲ್ಯಾಕೂನವನ್ನು ಇಷ್ಟು ವರ್ಷಗಳಿಂದಲೂ ಸರಿಮಾಡಿಕೊಳ್ಳದೆಹೋದರೆ ನೀವು ಇದರ ಬಗ್ಗೆ ಗಮನ ಹರಿಸಿದ್ದೀರಾ ಎಂಬುದಾಗಿ ನಾನು ನಿಮ್ಮನ್ನು ಪ್ರಶ್ನೆ ಮಾಡಬೇಕಾಗುತ್ತದೆ.

ಮೈಸೂರು ಯೂನಿವರ್ಸಿಟಿಯ ಬಗ್ಗೆ ಎರಡು ವಿಚಾರಗಳನ್ನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಮೈಸೂರು ಮಹಾರಾಣಿ ಕಾಲೇಜಿನಲ್ಲಿ ೪,೫೦೦ ವಿದ್ಯಾರ್ಥಿನಿಯರು ವ್ಯಾಸಂಗ ಮಾಡುತ್ತಿದ್ದಾರೆ. ಅವರು ಕುಳಿತುಕೊಳ್ಳುವುದಕ್ಕೆ ಜಾಗ ಇಲ್ಲ. ಈ ಕಾಲೇಜನ್ನು ನಾನು ನೋಡಿದ್ದೇನೆ. ಇದನ್ನು ವಿಂಗಡಣೆ ಮಾಡುವ ಬಗ್ಗೆ ತೀರ್ಮಾನವನ್ನು ಮಾಡಲಾಗಿದೆ ಎಂಬುದಾಗಿ ತಿಳಿಸಿದ್ದೀರಿ. ಅದಕ್ಕಾಗಿ ನಾನು ತಮ್ಮನ್ನು ವಂದಿಸುತ್ತೇನೆ. ಆದರೆ ಆದಷ್ಟು ಬೇಗ ಈ ಕಾಲೇಜನ್ನು ವಿಂಗಡಿಸಿ, ವಿದ್ಯಾರ್ಥಿನಿಯವರಿಗೆ ಅನುಕೂಲ ಮಾಡಿಕೊಡತಕ್ಕಂತಹ ರೀತಿಯಲ್ಲಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತೊಂದು ಯಾವುದೆಂದರೆ ಡಿ. ಬನುಮಯ್ಯಾಸ್ ಕಾಲೇಜ್ ಎಂಬುದಾಗಿ ಇದೆ. ಅದು ಮೈಸೂರು ಪಟ್ಟಣದ ಮಧ್ಯದಲ್ಲಿದೆ. ಮತ್ತು ಇದು ಖಾಸಗಿ ಮ್ಯಾನೇಜ್‌ಮೆಂಟ್‌ನವರ ಅಧೀನದಲ್ಲಿ ನಡೆಯುತ್ತಿದೆ. ಈ ಕಾಲೇಜಿನಲ್ಲೂ ಸಹ ೩–೪ ಸಾವಿರಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಈ ಕಾಲೇಜಿನಲ್ಲಿ ಪ್ರೈಮರಿ ಸ್ಕೂಲಿನಿಂದ ಹಿಡಿದು, ಹೈಸ್ಕೂಲು, ಕಾಲೇಜು, ಕಾಮರ್ಸ್, ಮತ್ತೆ ಸಂಜೆ ಕಾಲೇಜು ಇಷ್ಟೂ ನಡೆಯುತ್ತಿವೆ. ಈ ಕಾಲೇಜು ಬೆಳಿಗ್ಗೆ ೭ ಘಂಟೆಗೆ ಪ್ರಾರಂಭವಾದರೆ ಸಂಜೆ ೯–೦೦ ಘಂಟೆಯವರೆಗೂ ನಡೆಯುತ್ತಿರುತ್ತದೆ. ಮೈಸೂರಿನಲ್ಲಿ ನಡೆಯುವಂತಹ ವಿದ್ಯಾರ್ಥಿಗಳ ಮುಷ್ಕರ, ಇತರೇ ಗಲಾಟೆಗಳಿಗೆ ಈ ಕಾಲೇಜು ಒಂದು ಕೇಂದ್ರ ಸ್ಥಾನವಾಗಿದೆ. ಇದಕ್ಕೆ ನನ್ನ ಒಂದು ಸಲಹೆ ಏನೆಂದರೆ ಮೈಸೂರಿನಲ್ಲಿ ಯಾವುದೇ ಒಂದು ಸರ್ಕಾರಿ ಕಾಲೇಜು ಇಲ್ಲ. ಆದರೆ ಮಹಿಳೆಯ ಸರ್ಕಾರಿ ಕಾಲೇಜು ಇದೆ. ಆದರೆ ವಿದ್ಯಾರ್ಥಿಗಳ ಸರ್ಕಾರಿ ಕಾಲೇಜು ಇಲ್ಲ. ಈ ಒಂದು ಖಾಸಗಿ ಕಾಲೇಜಿನ ಆಡಳಿತ ಬಗ್ಗೆಯೂ ಕೂಡ ಅನೇಕ ಟೀಕೆ ಟಿಪ್ಪಣಿಗಳು ನಡೆದಿವೆ. ಮತ್ತೆ ವಿಚಾರಣೆಯೂ ಕೂಡ ನಡೆದಿದೆ. ತಕ್ಷಣವೇ ಈ ಕಾಲೇಜನ್ನು ಸರ್ಕಾರ ವಹಿಸಿಕೊಂಡು ಈ ಕಾಲೇಜನ್ನು ಈಗ ಇರುವ ಸ್ಥಳ

ದಿಂದ ಸಿಟಿಯು ಹೊರಗಡೆಗೆ ವರ್ಗ ಮಾಡುವುದಾದರೆ ಅನೇಕ ಸಮಸ್ಯೆಗಳನ್ನು ಪರಿಹಾರ ಮಾಡಿದಂತಾಗುತ್ತದೆ.

ಮಾನ್ಯ ವಿದ್ಯಾ ಸಚಿವರು ವಿದ್ಯಾಭ್ಯಾಸದ ಬೇಡಿಕೆಯ ಬಗ್ಗೆ ಎಷ್ಟರ ಮಟ್ಟಿಗೆ ಗಮನ ಹರಿಸಿದ್ದಾರೆ ಎಂಬುದನ್ನು ಹೇಳುವುದಾದರೆ ೨–೩ ನಿದರ್ಶನಗಳನ್ನು ನಾನು ಕೊಡಬೇಕಾಗಿದೆ. ಕಳೆದ ವರ್ಷದಿಂದ ಕರ್ನಾಟಕದಲ್ಲಿರುವ ಎಲ್ಲಾ ಪ್ರಾಥಮಿಕ ಶಾಲೆಗಳಲ್ಲಿ ೭ ಸಾವಿರ ಉಪಾಧ್ಯಾಯರ ಕೊರತೆ ಇದೆ ಎಂಬುದು ನಮ್ಮ ಒಂದು ಅಂಕಿ ಅಂಶಗಳಿಂದ ತಿಳಿದು ಬರುತ್ತದೆ. ಈ ೭ ಸಾವಿರ ಉಪಾಧ್ಯಾಯರುಗಳನ್ನು ಭರ್ತಿ ಮಾಡತಕ್ಕಂತಹ ಒಂದು ಧೈರ್ಯ ನಿಮ್ಮ ಕೈಯ್ಯಲ್ಲಿ ಆಗಲಿಲ್ಲ. ಇದಕ್ಕೆ ರಾಜಕೀಯ ಕಾರಣವೋ ಅಥವಾ ವಿದ್ಯಾಭ್ಯಾಸದ ಬೇಡಿಕೆಗೆ ನೀವು ಇಟ್ಟಿರತಕ್ಕಂತಹ ಅಲಕ್ಷ್ಯ ಕಾರಣವೋ ಎಂಬುದನ್ನು ನಾನು ಕೇಳಬೇಕಾಗಿದೆ. ರಿಕ್ರೂಟ್‌ಮೆಂಟ್ ಕಮಿಟಿಯನ್ನು ಮಾಡುವುದಕ್ಕೆ ಒಂದು ವರ್ಷ ತೆಗೆದುಕೊಂಡಿದ್ದೀರಿ. ಇವತ್ತೂ ಅದು ಪೂರ್ತಿ ರೆಡಿಯಾಗಿಲ್ಲ. ೭ ಸಾವಿರ ಉಪಾಧ್ಯಾಯರುಗಳನ್ನು ಭರ್ತಿ ಮಾಡುವುದಕ್ಕೆ ನಿಮಗೆ ಆಗಲಿಲ್ಲವೆಂದರೆ ಇದು ನಿಮ್ಮ ಒಂದು ಬೇಜವಾಬ್ದಾರಿಯ ಪರಮಾವಧಿ ಎಂಬುದಾಗಿ ಹೇಳಿದರೆ ತಪ್ಪಾಗುವುದಿಲ್ಲ. ಏತಕ್ಕೆಂದರೆ ಯಾವ ಒಂದು ಶಾಲಾ ಕಾಲೇಜುಗಳಲ್ಲಿ ಮುಖ್ಯವಾಗಿ ಇರಬೇಕಾದಂತಹ ಉಪಾಧ್ಯಾಯರುಗಳನ್ನು ಭರ್ತಿ ಮಾಡದೆ ಇರುವುದು ಈ ಬಗ್ಗೆ ನೀವು ಇಟ್ಟಿರತಕ್ಕಂತಹ ಒಂದು ಅಲಕ್ಷ್ಯ ಮನೋಭಾವವೇ ಕಾರಣ ಎಂಬುದಾಗಿ ಹೇಳಿದರೆ ಅದು ಏನೂ ಅತಿಶಯೋಕ್ತಿಯಾಗಲಾರದು. ಇದೂ ಅಲ್ಲದೆ ಕಳೆದ ಸಾರಿ ಶ್ರೀಮಾನ್ ಮಳೂರು ಆನಂದರಾವ್‌ರವರು ಅನೇಕ ವಿಚಾರಗಳನ್ನು ಹೇಳಿದ್ದರು. ಅನೇಕ ಸಲಹೆಗಳನ್ನೂ ಕೂಡ ಕೊಟ್ಟಿದ್ದರು. ತಾವೂ ಕೂಡ ತಮ್ಮ ಉತ್ತರದಲ್ಲಿ ಎಜುಕೇಷನ್ ಆಕ್ಟನ್ನು ತರುತ್ತೇವೆಂದು ಹೇಳಿದ್ದೀರಿ. ಆದರೆ ಅದು ಇದುವರೆಗೂ ಏನಾಗಿದೆ, ಯಾವ ಹಂತದಲ್ಲಿದೆ, ಎಲ್ಲಿದೆ ಎಂಬುದು ಗೊತ್ತಿಲ್ಲ. ಇದರ ಬಗ್ಗೆ ಮಾನ್ಯ ಮಲ್ಲಾರಾಧ್ಯರವರು ಕೊಟ್ಟಂತಹ ವರದಿಗೆ ಯಾವ ಒಂದು ಪುರಸ್ಕಾರವೂ ಸಿಗಲಿಲ್ಲ. ಅದೇ ರೀತಿ ಶ್ರೀಮಾನ್ ಎ. ಸಿ. ದೇವೇಗೌಡರ ವರದಿಗೂ ಅದೇ ಆಗಬಹುದೇನೋ ಎಂಬ ಸಂಶಯ ನಮಗೆ ಬಂದಿದೆ. ಇದರ ಬಗ್ಗೆ ನ್ಯಾಷನಲ್ ಮಾಸ್ಟರ್ ಪ್ಲಾನ್ ಎಂಬುದಾಗಿ ಮಾಡಿದ್ದಾರೆ. ಅದರಲ್ಲಿ the Karnataka is not in the main stream of our national master plan ಎಲ್ಲಾ ರಾಜ್ಯಗಳೂ ಒಪ್ಪಿರಬೇಕಾದರೆ ನಮ್ಮ ಕರ್ನಾಟಕ ರಾಜ್ಯ ಈ ಒಂದು ಮಾಸ್ಟರ್ ಪ್ಲಾನ್‌ನಲ್ಲಿ ಬಂದಿಲ್ಲ. ಇದಕ್ಕೆ ಕಾರಣವೇನು ಎಂಬುದನ್ನು ಸವಿವರವಾಗಿ ತಮ್ಮ ಉತ್ತರದಲ್ಲಿ ತಿಳಿಸಬೇಕು. ಇದರ ಬಗ್ಗೆ ಉದಾಸೀನ ಮನೋಭಾವ ತೋರಿಸದೆ ತಮ್ಮ ಗಮನ ಹರಿಸಬೇಕು. ನಾನು ಮೊದಲೇ ಹೇಳಿದ್ದಂತಹ ಒಂದು ವಾಕ್ಯವನ್ನು ತಮ್ಮ ಗಮನದಲ್ಲಿಟ್ಟುಕೊಂಡು the destiny of this is shaped in our class room ಮನಸ್ಸಿನಲ್ಲಿ ಆಗಾಗ್ಗೆ ನೆನಸಿಕೊಂಡು ಕೆಲಸ ಮಾಡಬೇಕು. ಇನ್ನೂ ಹೇಳುವ ವಿಚಾರಗಳು ಬಹಳಷ್ಟು ಇದ್ದರೂ ಕೂಡ ಅಧ್ಯಕ್ಷರು ಸಾಕಷ್ಟು ಸಮಯವನ್ನು ಕೊಡದಿದ್ದರೂ ಅವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

೪–೩೦ ಪಿ.ಎಂ.

† ಶ್ರೀ ಟಿ. ಚೌಡಯ್ಯ (ಭರಮಸಾಗರ್).—ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ಮಾನ್ಯ ಶಿಕ್ಷಣ ಮಂತ್ರಿಗಳು ನಮ್ಮ ಮುಂದೆ ಮಂಡಿಸಿರತಕ್ಕಂತಹ ಬೇಡಿಕೆಗಳನ್ನು ಸಂಪೂರ್ಣವಾಗಿ ಸ್ವಾಗತಿಸುತ್ತಾ ನನ್ನ ಅನುಭವದಲ್ಲಿ ಗಳಿಸಿರತಕ್ಕಂತಹ ಹಲವಾರು ನನ್ನ ಅನುಭವಗಳನ್ನು ಸಲಹೆಗಳ ರೂಪದಲ್ಲಿ ಈ ಶಿಕ್ಷಣದ ಬಗ್ಗೆ ಈ ಸಭೆಯ ಮುಂದೆ ಹೇಳುವುದಕ್ಕೆ ನಾನು ಪ್ರಯತ್ನ ಪಡುತ್ತೇನೆ. ಅದಕ್ಕೆ ಮುಂಚೆ ಮಾನ್ಯ ಗೆಳೆಯರಾದ ಶ್ರೀ ಶ್ರೀನಿವಾಸ್‌ರವರು ಈ ಬೇಡಿಕೆಯನ್ನು ಖಂಡಿಸುತ್ತಾ ಈ ಸರ್ಕಾರ ಶಿಕ್ಷಣ ರಂಗದಲ್ಲಿ ಏನನ್ನೂ ಸುಧಾರಿಸಿಲ್ಲ ಎಂಬುದಾಗಿ ತಮ್ಮ ಭಾಷಣವನ್ನು ಪ್ರಾರಂಭ ಮಾಡಿ ಕೊನೆಗೆ ಮುಕ್ತಾಯದಲ್ಲಿ ರಾಜಕೀಯ ಬಣ್ಣವನ್ನೂ ಕೂಡ ಈ ಸರ್ಕಾರಕ್ಕೆ ಹಾಗೂ ಈ ಸರ್ಕಾರವನ್ನು ನಡೆಸತಕ್ಕಂತಹ ಪಕ್ಷಕ್ಕೆ ಹಚ್ಚಿದರು. ಅದನ್ನು ನಾನು ಸಂಪೂರ್ಣವಾಗಿ ಖಂಡನೆ ಮಾಡುತ್ತೇನೆ. ಏಕೆಂದರೆ ಸುಧಾರಣೆ ಸಾಕಷ್ಟು ಆಗಿದೆ. ಆದರೆ ಅದರ ಕ್ರಮ ಸರಿಯಾಗಿಲ್ಲ ಎನ್ನತಕ್ಕಂತಾದ್ದನ್ನು ನಾನೂ ಕೂಡ ಒಪ್ಪಿಕೊಳ್ಳುತ್ತೇನೆ. ಶಿಕ್ಷಣ ರಂಗದಲ್ಲಿ ನನಗಿರುವಂತಹ ಹಲವಾರು ಅನುಭವಗಳಿಂದ ಹಲವಾರು ಸಲಹೆಗಳನ್ನು ಕೊಡತಕ್ಕಂತಾದ್ದು ಈ ಮನೆಯ ಸದಸ್ಯನಾಗಿ ನನ್ನ ಜವಾಬ್ದಾರಿ, ನನ್ನ ಕರ್ತವ್ಯ ಎಂಬುದಾಗಿ ನಾನು ತಿಳಿದುಕೊಂಡಿದ್ದೇನೆ. ಈ ಬಗ್ಗೆ ಈ ಹಿಂದೆ ಮಾತನಾಡಿದಂಥಾ ನಮ್ಮ ಗೆಳೆಯರು ತಮ್ಮ ಒಂದು ಜವಾಬ್ದಾರಿಯನ್ನು ಅರಿತುಕೊಂಡು ತಮ್ಮ ಸಲಹೆಗಳನ್ನು ಕೊಡದೆ ಇದಕ್ಕೆ ಒಂದು ರಾಜಕೀಯ ಬಣ್ಣವನ್ನು ಹಚ್ಚಿದ್ದಾರೆ ಎಂದು ನಾನು ಬಹಳ ವಿಷಾದದಿಂದ ಹೇಳುತ್ತೇನೆ. ಏತಕ್ಕೆಂದರೆ ಅವರು ಈ ರಿಕ್ರೂಟ್‌ಮೆಂಟ್

ಕಮಿಟಿಗಳು ಸರಿಯಾಗಿ ಕೆಲಸ ಮಾಡಲಿಲ್ಲಾ ಅಂತ ಹೇಳಿ ಅದಕ್ಕೆ ಒಂದು ರಾಜಕೀಯ ಬಣ್ಣವನ್ನು ಹಚ್ಚಿದರು, ಅದಕ್ಕಾಗಿ ನಾನು ಈ ಮಾತನ್ನು ಹೇಳುತ್ತಿದ್ದೇನೆ. ನಾನು ಅವರನ್ನು ಕೇಳುತ್ತೇನೆ. ಈ ಹಿಂದೆ ಇದ್ದಂಥಾ ರೆಕ್ರೂಟ್‌ಮೆಂಟ್ ಕಮಿಟಿಗಳನ್ನು ರದ್ದು ಮಾಡಿದವರು ಯಾರು? ಆ ಒಂದು ಸಂದಿಗ್ಧ ಕಾಲವನ್ನು ಅವರು ಜ್ಞಾಪಿಸಿಕೊಂಡರೆ ಅದರಲ್ಲಿ ರಾಜಕೀಯ ಮನೋಭಾವನೆ ಹಿಂದೆ ಇದ್ದುದರಿಂದಲೇನೇ ಅದನ್ನು ರದ್ದು ಮಾಡಿದರು ಎಂದು ಹೇಳಬೇಕಾಗುತ್ತದೆ. ಯಾವ ರೆಕ್ರೂಟ್‌ಮೆಂಟ್ ಕಮಿಟಿ ಆಗಲಿ ಅದು ಸರಿಯಾಗಿ ಕೆಲಸ ಮಾಡದೇ ಹೋಗಿದ್ದರೆ ಅದಕ್ಕೆ ನಾನಾ ಕಾರಣಗಳಿಂದ ತಡವಾಗಿರಬಹುದು. ಅದನ್ನು ನಾನು ಪುಷ್ಟೀಕರಿಸುತ್ತಾ ಇಲ್ಲಾ.

ಶ್ರೀ ಎಂ. ಶ್ರೀನಿವಾಸ.—ನಾನು ಹೇಳಿದ್ದು ಕಳೆದ ಸಾರಿ ಮಾಡಿದಂಥಾದ್ದರ ಬಗ್ಗೆ ಹೇಳಿದೆ. ಹಿಂದೆ ನಡೆದಿದ್ದನ್ನು ಬಿಟ್ಟುಬಿಡಿ. ಈವೊತ್ತು ಈ ರೆಕ್ರೂಟ್‌ಮೆಂಟ್ ಕಮಿಟಿಗಳನ್ನು ಫಾರಂ ಮಾಡಿ ೧೪ ತಿಂಗಳಾಯಿತಲ್ಲಾ ಅವರು ೭ ಸಾವಿರ ಉಪಾಧ್ಯಾಯರನ್ನು ನೇಮಕ ಮಾಡುವುದಕ್ಕೆ ಇನ್ನೂ ಕೂಡ ಆಗಲಿಲ್ಲವಲ್ಲಾ ಅನ್ನುವ ವಿಚಾರ ಈಗ ತಿಳಿಸಿದ್ದು. ಇದಕ್ಕೆ ನಾನು ರಾಜಕೀಯ ಬಣ್ಣ ಹಚ್ಚಲಿಲ್ಲಾ. ಈ ಒಂದು ಹಿನ್ನೆಲೆಯನ್ನು ಇಟ್ಟುಕೊಂಡು ನಾನು ಹೇಳಿದ್ದು.

ಶ್ರೀ ವೈಸ್‌ಛೇರ್ಮನ್.—ಬೇರೆ ಸದಸ್ಯರು ಯಾವುದಾದರೂ ವಿಚಾರಗಳನ್ನು ಎತ್ತಬೇಕಾದರೆ ಮಾತನಾಡತಕ್ಕಂಥಾ ಸದಸ್ಯರು ಮೊದಲು ಕುಳಿತುಕೊಳ್ಳಬೇಕು. ಅವರು ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ, ಅವರು ಯೀಲ್ಡ್ ಆದರೆ, ಅವರಿಗೆ ತಮ್ಮ ಮಾತುಗಳನ್ನು ಕೇಳಲು ಅಪೇಕ್ಷೆ ಇದ್ದರೆ ಅವರು ಕುಳಿತುಕೊಳ್ಳುತ್ತಾರೆ. ಅವರು ಯೀಲ್ಡ್ ಆಗದೇ ಹೋದರೆ ಅವಾಗ ಇಬ್ಬರೂ ಕೂಡ ನಿಂತುಕೊಂಡು ಮಾತನಾಡುವುದಕ್ಕಾಗುವುದಿಲ್ಲ. ಅದು ಕ್ರಮವಲ್ಲಾ.

ಶ್ರೀ ಟಿ. ಚೌಡಯ್ಯ.—ಅದರ ಬಗ್ಗೆ ನಾನು ಇನ್ನು ಮುಂದುವರೆಸಿಕೊಂಡು ಹೋಗುವುದಿಲ್ಲಾ. ನಾನು ಮೊದಲೇ ಹೇಳಿದ ಹಾಗೆ ಈ ಒಂದು ಹಿನ್ನೆಲೆಯನ್ನಿಟ್ಟುಕೊಂಡು ಆ ಉಪಾಧ್ಯಾಯರುಗಳನ್ನು ಇನ್ನೂ ಭರ್ತಿ ಮಾಡಲಿಕ್ಕೆ ಆಗಲಿಲ್ಲಾವಲ್ಲಾ ಅಂತ ಹೇಳಿದ್ದು. ಆದುದರಿಂದ ನಾನು ಅದಕ್ಕೆ ರಾಜಕೀಯ ಬಣ್ಣ ಹಚ್ಚಿಲ್ಲಾ. ಇನ್ನು ನಾನು ಶಿಕ್ಷಣದ ಬಗ್ಗೆ ಮಾತನಾಡುವುದಕ್ಕೆ ಪ್ರಾರಂಭ ಮಾಡುತ್ತೇನೆ. ಈ ಶಿಕ್ಷಣದ ಬಗ್ಗೆ ಸಾಕಷ್ಟು ಸಾಹಿತ್ಯ ಮತ್ತು ಸಾಕಷ್ಟು ಜ್ಞಾನ ಇರಬೇಕು ಅನ್ನುವ ಒಂದು ಹಿನ್ನೆಲೆಯನಿಟ್ಟು ಕೊಂಡು ಮಾತನಾಡುತ್ತೇನೆ. ಈ ಶಿಕ್ಷಣದಲ್ಲಿರುವ ಸ್ಥಾನ ಎಂತ ಮಹತ್ವದ್ದು ಅನ್ನುವುದರ ಬಗ್ಗೆ ಮಾತನಾಡುತ್ತೇನೇ ಹೊರತು ಇದರಲ್ಲಿ ಯಾವ ರಾಜಕೀಯ ರಂಗಾಗಲಿ ಇಲ್ಲವೆಂದು ನಾನು ಹೇಳುತ್ತೇವೆ. ಈ ವಿದ್ಯಾವಂತರ ಕೊರತೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಮತ್ತು ಈ ಶಿಕ್ಷಣದ ಒಂದು ಮಹತ್ವವನ್ನು ಮತ್ತು ಮುಂದಿನ ಮಕ್ಕಳ ಒಂದು ಜೀವನದಲ್ಲಿ ಇದು ಯಾವರೀತಿ ಪ್ರಾರಂಭವಾಗುತ್ತದೆ ಮತ್ತು ಇದು ಯಾವರೀತಿ ಸಾಧನೆಯಾಗುತ್ತದೆ ಅನ್ನುವುದನ್ನು ಸಹ ಮನಸ್ಸಿನಲ್ಲಿಟ್ಟುಕೊಂಡು ನಾನು ಇದರ ಬಗ್ಗೆ ಮಾತನಾಡುತ್ತೇನೆ. ಈ ಒಂದು ಶಿಕ್ಷಣಕ್ಕೆ ಬಹಳ ವರ್ಷಗಳಿಂದಲೂ ಕೂಡ ಬೇರೆ ಯಾವುದಕ್ಕೂ ಕೂಡ ಸಿಕ್ಕದೇ ಇರುವಂಥಾ ಒಂದು ಮಹತ್ವದ ಸ್ಥಾನವನ್ನು ಇದಕ್ಕೆ ಕೊಟ್ಟಿದೆ. ಇದಕ್ಕೆ ಕಾರಣ ಈ ಒಂದು ಸಾಧನೆಯಿಂದ ಭಾವಿ ಪ್ರಜೆಗಳನ್ನು ಉತ್ತಮ ಪ್ರಜೆಯನ್ನಾಗಿ ತಯಾರು ಮಾಡುವುದಕ್ಕಾಗಿ ಇದನ್ನು ಆರಿಸಿಕೊಂಡಿದ್ದಾರೆ. ಈ ಶಿಕ್ಷಣ ಎನ್ನತಕ್ಕಂಥಾದ್ದರಲ್ಲಿ ಮಹತ್ವವಾದ ಕೀರ್ತಿಯನ್ನು ಸಾಧನೆ ಮಾಡುವು ದಕ್ಕೋಸ್ಕರವಾಗಿ ಇದು ಒಂದು ದೊಡ್ಡ ಸಾಧನೆಯಾಗಿದೆ. ಇದನ್ನು ವಿದ್ಯೆ ಎಂತಲೂ ಕರೆಯುತ್ತೇವೆ, ಜ್ಞಾನ ಎಂತಲೂ ಕರೆಯುತ್ತೇವೆ ಸಾಧನೆ ಎಂತಲೂ ಕರೆಯುತ್ತೇವೆ, ವಿಚಾರ ಎಂತಲೂ ಕರೆಯುತ್ತೇವೆ, ಈ ಒಂದು ಶಿಕ್ಷಣವನ್ನು ನಾನಾ ರೀತಿಯಾಗಿ ಕರೆಯುತ್ತೇವೆ. ಇದಕ್ಕೆ ಸರಿಸಮನಾಗಿರತಕ್ಕಂಥಾ ಒಂದು ಶ್ಲೋಕ ಗೀತೆಯಲ್ಲಿ ಈ ರೀತಿ ಇದೆ: ಏನು ಇದೆ ಎಂದರೆ "ನಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೆ" ಇದೆ. ಅಂದರೆ ಇಂತಹ ಪವಿತ್ರವಾಗಿರತಕ್ಕಂಥಾ ವಿದ್ಯೆಗೆ ಸರಿಸಮವಾಗಿರತಕ್ಕಂಥಾದ್ದು ಯಾವುದೂ ಇಲ್ಲ. ಈ ಜ್ಞಾನಕ್ಕೆ ಸರಿಸಮನಾಗಿರತಕ್ಕಂಥಾದ್ದು ಯಾವುದೂ ಇಲ್ಲ ಎಂದು ನಾವು ಮೊದಲು ಮನವರಿಕೆ ಮಾಡಿಕೊಂಡರೆ ಈ ಸಾಧನೆಯನ್ನು ಕೊಡತಕ್ಕಂಥಾ ಬೋಧಕರಾಗಲಿ ಮತ್ತು ಸರ್ಕಾರದ ಒಂದು ನೀತಿ ಯನ್ನು ರೂಪಿಸಿಕೊಂಡಂಥಾ ನಾವಾಗಲಿ ಅಂದರೆ ಈ ಸದನದ ಸದಸ್ಯರಾಗಲಿ ಇದರಲ್ಲಿ ನಮ್ಮ ಜವಾಬ್ದಾರಿ ಏನು ಇದೆ ಎನ್ನುವುದನ್ನು ನಾವು ಮೊದಲು ಮನವರಿಕೆ ಮಾಡಿಕೊಳ್ಳಬೇಕಾಗಿದೆ. ಈ ಒಂದು ಮಾತನ್ನು ನಾನು ಸ್ವಲ್ಪ ವಿಶಾದದಿಂದ ಹೇಳಬೇಕಾಗಿದೆ. ಖಡ್ಡಾಯ ಶಿಕ್ಷಣವನ್ನು ನಾವು ರಾಜ್ಯಾಂಗದಲ್ಲಿ ಅಳವಡಿಸಿ ದ್ದೇವೆ. ಆ ಪ್ರಕಾರ ನಾವು ಪ್ರತಿಜ್ಞೆ ತೆಗೆದುಕೊಂಡಿದ್ದೇವೆ. ಇದನ್ನು ನಾವು ಪ್ರತಿ ಹಂತದಲ್ಲೂ ಕೂಡ ವಿಚಾರಣೆ ಮಾಡಿ ನೋಡಿದರೆ ನಮ್ಮಲ್ಲಿ ಸಾಕ್ಷರತೆಯ ಸಂಖ್ಯೆ ಇರತಕ್ಕಂಥಾದ್ದು ೩೧.೭೪ ಪರ್ಸೆಂಟ್ ಅಂತ

ಈ ಒಂದು ಪುಸ್ತಕದಲ್ಲಿ ಅಂಕಿಅಂಶಗಳನ್ನು ಕೊಟ್ಟಿದೆ. ಇದು ೧೯೭೧ ರ ಸೆನ್ಸಸ್ ಪ್ರಕಾರ ೩೧.೭೪ ಪರ್ಸೆಂಟ್ ಇದ್ದುದು ಈಗ ಸುಮಾರು ೩೩.೩೪ ಪರ್ಸೆಂಟ್‌ಗೆ ಬಂದು ಮುಟ್ಟಿದೆ ಅಂದರೆ ೧/೩ ಭಾಗದಷ್ಟು ಜನ ನಮ್ಮ ದೇಶದಲ್ಲಿ ವಿದ್ಯಾವಂತರಾಗಿದ್ದಾರೆ ಎಂದು ಇಟ್ಟುಕೊಳ್ಳೋಣ. ನಮ್ಮ ರಾಜ್ಯದ ೩ ಕೋಟಿ ಜನತೆಯಲ್ಲಿ ಸುಮಾರು ಒಂದು ಕೋಟಿ ಜನರು ವಿದ್ಯಾವಂತರು ಎಂದು ಭಾವಿಸಿಕೊಂಡರೂ ಕೂಡ ಇನ್ನು ಉಳಿದ ೨ ಕೋಟಿ ಜನರನ್ನು ನಾವು ಕತ್ತಲಲ್ಲಿ ಇಟ್ಟಿರುವ ಹಾಗೆ ಇದೆ. ಈ ತಪ್ಪು ಯಾರು ಮಾಡಿದ್ದಾರೆ? ಈ ಮನೆಯಲ್ಲಿ ಯಾರು ಒಂದು ಜವಾಬ್ದಾರಿ ಸ್ಥಾನದಲ್ಲಿ ಇದ್ದಾರೆಯೋ ಅವರು ಈ ಹೊಣೆಗಾರಿಕೆಯನ್ನು ಹೊರಬೇಕೇ ವಿನಾ ಇನ್ನಾರೂ ಅಲ್ಲ. ಈ ದೃಷ್ಟಿಯಿಂದ ಈ ಮನೆಯ ಸದಸ್ಯರು ಇದನ್ನು ಯಾವರೀತಿಯಲ್ಲಿ ಸಾಧಿಸಬೇಕು ಎನ್ನುವುದರ ಬಗ್ಗೆ ವಿಚಾರ ಮಾಡಬೇಕಾಗಿದೆ ಎಂದು ಹೇಳುತ್ತೇನೆ. ಅಧ್ಯಕ್ಷರೆ, ಇದು ಬಹಳ ಗಂಭೀರವಾದ ವಿಚಾರ. ಇಡೀ ರಾಷ್ಟ್ರದ, ಇಡೀ ರಾಜ್ಯದ ಸಮಾಜದ ಒಂದು ಭವಿಷ್ಯವನ್ನು ರೂಪಿಸತಕ್ಕಂಥಾ ಈ ಶಿಕ್ಷಣದ ಬಗ್ಗೆ ಕೊಠಾರಿ ಕಮೀಷನ್ ರಿಪೋರ್ಟ್‌ನಲ್ಲಿ ಏನು ಇದೆ ಅದನ್ನು ನೋಡಿದರೆ ''ರಾಷ್ಟ್ರದ ಅಥವಾ ಸಮಾಜದ ಭವಿಷ್ಯ ಅನ್ನುವುದು ಶಾಲೆಯ ಕೊಠಡಿಯಲ್ಲಿ'' ಪ್ರಾರಂಭ ಎಂದಿದ್ದಾರೆ. ಅದಕ್ಕೋಸ್ಕರವಾಗಿ ಇದಕ್ಕೆ ಅಷ್ಟು ಮಹತ್ವವಾದ ಸ್ಥಾನವನ್ನು ಕೊಟ್ಟಿದೆ. ಮತ್ತು ಶಿಕ್ಷಣ ಕೊಡತಕ್ಕಂತ ಉಪಾಧ್ಯಾಯರಿಗೂ ಕೂಡ ನಾವು ಅಷ್ಟೇ ಮಹತ್ವವಾದ ಸ್ಥಾನವನ್ನು ಕೊಟ್ಟಿದ್ದೇವೆ ಅನ್ನುವುದನ್ನು ವಿಚಾರ ಮಾಡಬೇಕಾಗುತ್ತದೆ. ಈ ವಿಷಯವನ್ನು ನಿಷ್ಪಕ್ಷಪಾತವಾಗಿ ವಿಚಾರ ಮಾಡಬೇಕಾಗಿದೆ. ಅಷ್ಟೇ ಅಲ್ಲ ಈ ಒಂದು ಶಿಕ್ಷಣದ ಬಗ್ಗೆ ಪತ್ರಿಕೆಯಲ್ಲಿ ಬಂದಿರುವುದನ್ನು ತಾವು ನೋಡಿರಬಹುದು, ನಮ್ಮ ಭಾರತದ ರಾಷ್ಟ್ರಪತಿಯವರೇ ಈ ಬಗ್ಗೆ ಏನು ಹೇಳಿದ್ದಾರೆ ಅದನ್ನು ತಮ್ಮ ಮುಂದೆ ಓದುತ್ತೇನೆ. ಅದು ಈ ರೀತಿ ಇದೆ.

> "Let us not forget that we will introduce compulsory primary education for all children of school-going age within 10 years of coming into force of our Constitution. Now nearly three decades have passed and we are still far from the goal" ಎಂದು ಹೀಗೆ ಹೇಳಿದರು. ಅವರು ಇದರ ಬಗ್ಗೆ ಇನ್ನೊಂದು ಮಾತು ಹೇಳಿದ್ದಾರೆ ಅದು ಈ ರೀತಿ ಇದೆ :
>
> "to enable the teaching Community to meet such challenges it was necessary to give the teaching profession status and emoluments commensurate with the nation-building task it performs.

ಹೀಗೆ ಎಂದು ಹೇಳಿದ್ದಾರೆ. ಇದರಲ್ಲಿ ಎರಡು ಮುಖ್ಯವಾದ ವಿಷಯಗಳನ್ನು ನಾನು ಈಗ ಪ್ರಸ್ತಾಪ ಮಾಡುತ್ತೇನೆ. ಮೊದಲನೆಯದಾಗಿ ಹೇಳುವುದಾದರೆ ಈ ಖಡ್ಡಾಯ ಶಿಕ್ಷಣದ ಬಗ್ಗೆ ಕಾನ್ಸ್ಟಿಟ್ಯೂಷನ್‌ನಲ್ಲಿ ಮಾನ್‌ಡೇಟರಿ ಪ್ರಾವಿಷನ್ ಏನು ಇದೆ ಆ ಬಗ್ಗೆ ಜವಾಬ್ದಾರಿ ನಮ್ಮ ಮೇಲೆ ಇದೆ. ಈ ಖಡ್ಡಾಯ ಶಿಕ್ಷಣದ ಬಗ್ಗೆ ಮ್ಯಾನ್‌ಡೇಟರಿ ಪ್ರಾವಿಷನ್ ಏನು ಇದೆ ಅದನ್ನು ತಮ್ಮ ಮುಂದೆ ಓದುತ್ತೇನೆ. ಅದು ಈ ರೀತಿ ಇದೆ.

> "Article 45 of the Constitutions reads like this:
> "The State shall endeavour to provide within a piriod of ten years from the commencement of this Constitution for free & compulsory education until they complete the age of 14 years" ಎಂದು ಇದೆ.

ಈ ಕಾನ್ಸ್ಟಿಟ್ಯೂಷನ್ ಬಂದು ಈಗಾಗಲೇ ೩೦ ವರ್ಷ ಆಗಿಹೋಯಿತು. ಆದರೆ ಈ ಬಗ್ಗೆ ಸಾಧನೆ ಎಲ್ಲಿಯವರೆಗೆ ಬಂದಿದೆ ಎಂದರೆ ನಾನು ಮೊದಲೇ ಹೇಳಿದ ಹಾಗೆ ಶೇಕಡ ೩೩-೩೪ ಪರ್ಸೆಂಟ್ ಅಷ್ಟು ಮಾತ್ರ ನಮ್ಮ ದೇಶದಲ್ಲಿ ವಿದ್ಯಾವಂತರನ್ನಾಗಿ ಮಾಡಿದ್ದಾರೆ. ಅದನ್ನಾದರೂ ಕೂಡ ಕ್ರಮಬದ್ಧವನ್ನಾಗಿ ಮಾಡಿದ್ದಾರೆಯೇ ಎಂದರೆ ಈ ಶಿಕ್ಷಣ ರಂಗದಲ್ಲಿ ನಾವು ನೋಡತಕ್ಕಂಥ ಆ ವ್ಯವಸ್ಥೆ ನೋಡಿದರೆ ಪ್ರೈಮರಿ ಪಾಠಶಾಲೆಗಳಲ್ಲಿ ಮತ್ತು ಗ್ರಾಮಾಂತರಗಳಲ್ಲಿರುವ ಪಾಠಶಾಲೆಗಳನ್ನು ಹೋಗಿ ನೋಡಿದರೆ ನಾನು

ಮೊದಲೇ ಹೇಳಿದ ಹಾಗೆ ಈ ಕೊಠಾರಿ ಕಮೀಷನ್ನಿನ ಒಂದು ರಿಪೋರ್ಟ್ ಪ್ರಕಾರ ಈ ರಾಷ್ಟ್ರದ ಭವಿಷ್ಯವನ್ನು ರೂಪಿಸತಕ್ಕಂಥಾದ್ದು ಈ ಪಾಠಶಾಲೆಯ ಕೊಠಡಿಗಳಲ್ಲಿ ಇದೆ. ಈ ಒಂದು ಕೊಠಡಿಯನ್ನೇಕೆ ಒಂದು ಉದಾಹರಣೆಯನ್ನಾಗಿ ಈ ಕೊಠಾರಿ ಕಮೀಷನ್ನಿನವರು ತೆಗೆದುಕೊಂಡರು ಎನ್ನುವುದನ್ನು ವಿಚಾರ ಮಾಡಿ ನೋಡಿದರೆ ಈವೊತ್ತಿನ ದಿವಸ ಅನೇಕ ಹಳ್ಳಿಗಳಲ್ಲಿ ಪಾಠಶಾಲೆಗಳು ಏನು ಇವೆ ಅದನ್ನು ನೋಡಿದರೆ ಕೆಲವು ಕಡೆಗಳಲ್ಲಿ ಈ ಪಾಠಶಾಲೆಗಳಿಗೆ ಕಟ್ಟಡ ಇಲ್ಲ, ಒಂದುವೇಳೆ ಕಟ್ಟಡಗಳು ಇದ್ದರೂ ಅಲ್ಲಿ ಮಳೆಗಾಲದಲ್ಲಿ ಮಕ್ಕಳಿಗೆ ಸರಿಯಾಗಿ ವ್ಯಾಸಂಗ ಮಾಡುವುದಕ್ಕೆ ಸಾಧ್ಯವಾಗುತ್ತಾ ಇಲ್ಲಾ. ನನ್ನ ಕ್ಷೇತ್ರದ ಕೇಂದ್ರವಾಗಿರತಕ್ಕಂಥಾ ಭರಮಸಾಗರವನ್ನೇ ತೆಗೆದುಕೊಂಡು ನೋಡಿದರೆ ಸುಮಾರು ೮೦-೮೫ ವರ್ಷದ ಹಿಂದೆ ಕಟ್ಟಿದಂಥಾ ಕಟ್ಟದಲ್ಲಿ ಈ ಶಾಲೆ ನಡೆಯುತ್ತಾ ಇದೆ. ಈ ಒಂದು ಕಟ್ಟಡವನ್ನು ನಾನು ನೋಡಿದಾಗ ಆ ಭಾಗದಲ್ಲಿರತಕ್ಕಂಥಾ ಉಪಾಧ್ಯಾಯರನ್ನು ಕರೆದು ಅವರ ಕುಂದುಕೊರತೆಗಳನ್ನು ವಿಚಾರ ಮಾಡಿದಾಗ ಆ ಪಾಠಶಾಲೆಯಲ್ಲಿರುವವರು ಏನು ಹೇಳಿದರು ಎಂದರೆ ಮಳೆಗಾಲದಲ್ಲಿ ಆ ಮಕ್ಕಳನ್ನು ಹೊರಗಡೆ ಕಳುಹಿಸುತ್ತೇವೆ ಅಲ್ಲಿ ಪಾಠ ನಡೆಸುವುದಕ್ಕಾಗುವುದಿಲ್ಲಾ ಎಂದು ಹೇಳಿದರು. ಅಲ್ಲಿಯ ಗ್ರಾಜುಯೇಟ್ ಮುಖ್ಯೋಪಾಧ್ಯಾಯರು. ಇದನ್ನು ನಾನು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದಿದ್ದೇನೆ ಇದರ ರಿಪೇರಿ ಬಗ್ಗೆಯೂ ಕೂಡ ಅವರಿಗೆ ತಿಳಿಸಿದ್ದೇವೆ, ನಾವು ಅದನ್ನು ಕಾದು ನೋಡುತ್ತಿದ್ದೇವೆ. ನಾವು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಎಲ್ಲಿ ಯಾವುದಕ್ಕೆ ಪ್ರಾಮುಖ್ಯತೆ ಕೊಡಬೇಕೋ, ಎಲ್ಲಿ ಯಾವುದಕ್ಕೆ ಆದ್ಯತೆ ಕೊಡಬೇಕೋ ಅದನ್ನು ಕೊಡದೇ ಬೇರೆ ಕಾರ್ಯಕ್ರಮಗಳಲ್ಲಿ ನಾವು ತೊಡಗಿದ್ದೇ ಆದರೆ ಖಂಡಿತವಾಗಿಯೂ ಕೂಡ ನಾವು ನಿರೀಕ್ಷಿಸಿದ ಒಂದು ಪ್ರಗತಿ ಅದರಲ್ಲಿ ಕಾಣುವುದಕ್ಕೆ ಸಾಧ್ಯವಿಲ್ಲಾ, ಈ ವಿಚಾರವನ್ನು ತಮ್ಮ ಮುಂದೆ ಈ ಸಂದರ್ಭದಲ್ಲಿ ಮನವರಿಕೆ ಮಾಡುತ್ತೇನೆ. ದೊಡ್ಡ ಗಾತ್ರದ ಬೇಡಿಕೆಯನ್ನು ನಮ್ಮ ಮುಂದಿಟ್ಟಿದ್ದಾರೆ. ಇದನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ಆದರೆ ಇದು ಸಾಲ, ಏಕೆಂದರೆ, ನಮ್ಮ ಶಿಕ್ಷಣ ರಂಗ ಬಹಳ ದೊಡ್ಡದಾಗಿದೆ. ಇಲ್ಲಿ ನಮಗೆ ಕೊಟ್ಟಿರುವ ಅಂಕಿ ಅಂಶಗಳನ್ನು ನೋಡುವುದಾದರೆ, ಪ್ರೈಮರಿ ಪಾಠಶಾಲೆಗಳು ಮುವತ್ತನಾಲ್ಕು ಸಾವಿರದ ಇಪ್ಪತ್ತೈದು ಇವೆ. ಅದೇರೀತಿ ಲೋಯರ್ ಪ್ರೈಮರಿ ಮತ್ತು ಹೈಯರ್ ಪ್ರೈಮರಿ ಉಪಾಧ್ಯಾಯರು ಒಂದು ಲಕ್ಷದ ನಾಲ್ಕು ಸಾವಿರದ ನೂರೈದು ಮಂದಿ ಇದ್ದಾರೆ. ಆದಕಾರಣ ಇದರ ಒಂದು ಗಾತ್ರಕ್ಕೆ ತಕ್ಕಂತೆ ಇಲ್ಲಿ ಹಣ ಒದಗಿಸಿಲ್ಲ, ಇದನ್ನು ಇನ್ನೂ ಹೆಚ್ಚು ಮಾಡಬೇಕೆಂದು ಹೇಳುತ್ತೇನೆ. ಇದರ ಬಗ್ಗೆ ನಾನು ಹಲವಾರು ಸಲಹೆಗಳನ್ನು ಕೊಡುತ್ತೇನೆ. ನನ್ನ ಒಂದು ದೃಷ್ಟಿಯಲ್ಲಿ ಹಾಗೂ ತಜ್ಞರ ವರದಿಗಳನ್ನು ನೋಡಿದಾಗ, ನನ್ನ ಮನಸ್ಸಿಗೆ ಬಂದಿರುವ ವಿಚಾರವೇನೆಂದರೆ, ನಮ್ಮ ಸರ್ಕಾರದವರು ನರ್ಸರಿ ಶಾಲೆಗಳಿಗೆ ಹೆಚ್ಚಿನ ಮಹತ್ವವನ್ನು ಕೊಟ್ಟಿಲ್ಲ ಎಂಬುದು; ಕೇರಳದಲ್ಲಿ ಇದಕ್ಕೆ ಹೆಚ್ಚಿನ ಒಂದು ಪ್ರಾಶಸ್ತ್ಯವನ್ನು ಕೊಟ್ಟಿರುವುದರಿಂದ ಅಲ್ಲಿ ವಿದ್ಯಾ ರಂಗದಲ್ಲಿ ನಾವು ಹೆಚ್ಚಿನ ಒಂದು ಫಲಿತಾಂಶವನ್ನು ನೋಡುತ್ತಿದ್ದೇವೆ. ಅಲ್ಲಿ ಹೆಚ್ಚಿನ ದಕ್ಷತೆಯಿರುವಂತಹ ವಿದ್ಯಾವಂತರನ್ನು ತಯಾರು ಮಾಡುತ್ತಿದ್ದಾರೆ. ನಮ್ಮಲ್ಲಿಯೂ ಖಾಸಗೀ ವಿದ್ಯಾಸಂಸ್ಥೆಗಳು ಹಾಗೂ ಮಿಷಿನರಿಗಳು ಈ ನರ್ಸರಿ ಶಾಲೆಗಳನ್ನು ನಡೆಸುತ್ತಿವೆ. ಆದರೆ ಸರ್ಕಾರದ ಮಟ್ಟದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಪ್ರಾರಂಭಮಾಡಿಲ್ಲ. ಕಳೆದವರ್ಷ ಟ್ರೈಬಲ್ ಏರಿಯಾದಲ್ಲಿ ಹತ್ತು ನರ್ಸರಿ ಶಾಲೆಗಳನ್ನು ಪ್ರಾರಂಭ ಮಾಡಲಾಗಿದೆ. ಇದಕ್ಕೂ ಮೊದಲು ೬೦೦ ನರ್ಸರಿ ಶಾಲೆಗಳಿದ್ದವು. ಹೀಗೆ ಒಟ್ಟು ನಮ್ಮಲ್ಲಿ ೬೧೦ ನರ್ಸರಿ ಶಾಲೆಗಳು ಮಾತ್ರ ಇವೆ. ಇವು ಸಾಲದು; ನಮ್ಮ ಮಕ್ಕಳನ್ನು ಒಳ್ಳೆಯ ಪ್ರತಿಭಾವಂತ ವಿದ್ಯಾರ್ಥಿಗಳನ್ನಾಗಿ ಬೆಳೆಸಬೇಕಾದರೆ ನಮ್ಮಲ್ಲಿರುವಂತಹ ಪ್ರೈಮರಿ ಶಾಲೆಗಳಷ್ಟೆ ನರ್ಸರಿ ಶಾಲೆಗಳನ್ನು ತೆರೆಯಬೇಕೆಂದು ಸಲಹೆ ಮಾಡುತ್ತೇನೆ. ನರ್ಸರಿ ಶಾಲೆಯ ಕಲಿತ ನಂತರ ನೇರವಾಗಿ ಪ್ರೈಮರಿ ಶಾಲೆಗಳಿಗೆ ಬರುವಂತಹ ರೀತಿಯಲ್ಲಿ ತಯಾರು ಮಾಡಬೇಕು. ಈ ಕಡ್ಡಾಯ ಶಿಕ್ಷಣ ಪದ್ಧತಿಯು ಕಳೆದವರ್ಷ ನವೆಂಬರ್ ತಿಂಗಳಲ್ಲಿ ಪ್ರಾರಂಭವಾಗಿದ್ದು. ಇದನ್ನು ನಾವು ೩೦ ವರ್ಷಗಳ ಹಿಂದೆಯೇ ಪ್ರಾರಂಭ ಮಾಡಬೇಕಾಗಿತ್ತು. ಆ ರೀತಿ ಮಾಡಿದ್ದರೆ ನಮ್ಮಲ್ಲಿ ಈಗ ಮೂರನೇ ಎರಡು ಭಾಗದಷ್ಟು ಅನಕ್ಷರಸ್ಥರು ಇರುತ್ತಿರಲಿಲ್ಲ. ನಾವು ಈ ಬಗ್ಗೆ ಉದಾಸೀನ ಮಾಡಿದ್ದರಿಂದ ಅನಕ್ಷರಸ್ಥರ ಸಂಖ್ಯೆ ಇಷ್ಟೊಂದು ಪ್ರಮಾಣದಲ್ಲಿ ಬೆಳೆದಿದೆ. ಈ ವಿಚಾರದಲ್ಲಿ ನಾವು ತಪ್ಪು ಮಾಡಿದ್ದೇವೆ. ನಾವು ಬ್ರಿಟೀಷರ ಕಾಲದ ಶಿಕ್ಷಣ ಪದ್ಧತಿಯನ್ನೇ ತ್ಯಾಪೆ ಹಾಕಿಕೊಂಡು ಮುಂದುವರೆಸಿಕೊಂಡು ಬಂದಿದ್ದೇವೆ. ಇದು ಸರಿಯಲ್ಲ; ಹೊಸಹೊಸ ಸ್ಕೀಮುಗಳನ್ನು ನಾವು ಜಾರಿಗೆ ತರಬೇಕಾಗಿದೆ. ನಮ್ಮ ರಾಷ್ಟ್ರದ ಸಂಪತ್ತನ್ನು ಹೆಚ್ಚಿಸುವಂತಹ ರೀತಿಯಲ್ಲಿ ವಿದ್ಯಾಭ್ಯಾಸದ ಪದ್ಧತಿ ಬದಲಾವಣೆಯಾಗಬೇಕು. ಆದರೆ ಇದು ಕ್ರಮಬದ್ಧವಾಗಿ ನಡೆದಿಲ್ಲವೆಂದು ನಾನು ಹೇಳುತ್ತೇನೆ. ಈ ಬಗ್ಗೆ ಶಿಕ್ಷಣ ಸಚಿವರಲ್ಲಿ ಒಂದು ಪ್ರಶ್ನೆ ಕೇಳುತ್ತೇನೆ; I want to know from the Hon'ble Minister for

Education what remedial measures the Government has taken to prevent drop-outs especially in the rural areas.

ಶ್ರೀ ಮಳ್ಳೂರು ಆನಂದರಾವ್.—ಇಲ್ಲಿ ಶಿಕ್ಷಣ ಮಂತ್ರಿಗಳೇ ಇಲ್ಲ.

ಶ್ರೀ ಟಿ. ಚೌಡಯ್ಯ.—ಅವರ ಪರವಾಗಿ ಬೇರೆ ಮಂತ್ರಿಗಳು ನೋಟ್ ಮಾಡಿಕೊಳ್ಳುತ್ತಿದ್ದಾರೆ. ಇಲ್ಲಿ ನಾವು ನಾಲ್ಕು ಮಾತುಗಳನ್ನು ಹೇಳಿ ಹೋಗುವುದು ಮುಖ್ಯವಲ್ಲ; ನಾವು ಹೇಳಿದ್ದು ಕಾರ್ಯಗತ ವಾಗಬೇಕು. ಕಳೆದವರ್ಷ ಈ ಇಲಾಖೆಯ ಬೇಡಿಕೆಗಳು ಇಲ್ಲಿ ಬಂದಾಗ ಮಾನ್ಯ ಮಳ್ಳೂರು ಆನಂದರಾವ್ ಅವರು ಹಾಗೂ ನಮ್ಮ ಕಡೆಯ ಅನೇಕ ಮಾನ್ಯ ಸದಸ್ಯರು ಬಹಳ ಒಳ್ಳೆಯ ಸಲಹೆಗಳನ್ನು ಕೊಟ್ಟರು ಮತ್ತು ಶಿಕ್ಷಣ ರಂಗದಲ್ಲಿರುವ ಲೋಪದೋಷಗಳನ್ನು ಸರ್ಕಾರದ ಗಮನಕ್ಕೆ ತಂದರು. ಮಾನ್ಯ ಸದಸ್ಯರು ಕೊಟ್ಟ ಸಲಹೆಗಳನ್ನು ಕಾರ್ಯಗತ ಮಾಡುವುದು ಮತ್ತು ಇರತಕ್ಕಂಥ ಲೋಪದೋಷಗಳನ್ನು ಹೋಗ ಲಾಡಿಸುವುದು ಹಂತಹಂತವಾಗಿ ನಡೆಯಬೇಕು.

ಇನ್ನು ಅಡಲ್ಟ್ ಎಜುಕೇಷನ್ ಬಗ್ಗೆ ಸರ್ಕಾರದವರು ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಈ ವರ್ಷ ಸುಮಾರು ೧೦.೨೩ ಲಕ್ಷ ಅನಕ್ಷರನ್ನು ಅಕ್ಷರಸ್ಥರನ್ನಾಗಿ ಮಾಡುವ ಕಾರ್ಯಕ್ರಮವನ್ನು ಹಾಕಿ ಕೊಂಡು ಅದಕ್ಕಾಗಿ ೪ ಕೋಟಿ ರೂ. ಗಳ ಮೇಲೆ ಸ್ಟೇಟ್ ಪ್ಲಾನಿನಲ್ಲಿ ಮೀಸಲಿಟ್ಟಿದ್ದಾರೆ. ಇದೊಂದು ಸಂತೋಷದ ಸಂಗತಿ. ಇದನ್ನು ಇನ್ನೂ ಹೆಚ್ಚಿನ ಮಟ್ಟದಲ್ಲಿ ಹಳ್ಳಿಗಳ ಮಟ್ಟದಲ್ಲಿ ಮುಂದುವರಿಸ ಬೇಕೆಂದು ಒತ್ತಾಯ ಮಾಡುತ್ತೇನೆ. ಈ ಬಗ್ಗೆ ನನ್ನ ಒಂದು ಸಲಹೆ ಏನೆಂದರೆ, ಈಗ ಎಂಪ್ಲಾಯ್ ಮೆಂಟ್ ಗ್ಯಾರಂಟಿ ಸ್ಕೀಮಿನಲ್ಲಿ ಪದವೀಧರರನ್ನು ಕೆಲಸಕ್ಕೆ ತೆಗೆದುಕೊಳ್ಳಲಾಗಿದೆ; ಆದರೆ ಹಳ್ಳಿಗಳಲ್ಲಿ ಇವರು ನಿಜವಾಗಿಯೂ ಕೆಲಸ ಮಾಡುತ್ತಿಲ್ಲ; ಇವರಿಗೆ ಹಳ್ಳಿಗಳಲ್ಲಿ ಇರಲು ಇಷ್ಟವಿಲ್ಲದ ಕಾರಣ, ಸರಿ ಯಾಗಿ ಕೆಲಸ ಮಾಡದೆ ಕಾಲಹರಣ ಮಾಡುತ್ತಿದ್ದಾರೆ. ಇದೇರೀತಿ ಅಡಲ್ಟ್ ಎಜುಕೇಷನ್ ಪ್ರೋಗ್ರಾಮ್ ಆಗಬಾರದು. ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡುವಂತಹ ಕೆಲಸ ಬಹಳ ಪವಿತ್ರವಾದಂಥ ಕೆಲಸ. ಆದಕಾರಣ ಈ ಬಗ್ಗೆ ಒಂದು ಫೇಸ್ಡ್ ಪ್ರೋಗ್ರಾಮ್ ಹಾಕಿಕೊಂಡು ಬೇರೆ ರಾಜ್ಯದವರಿಗೆ ಮಾದರಿ ಯಾಗಿರುವಂತಹ ರೀತಿಯಲ್ಲಿ ಇದನ್ನು ನಡೆಸಬೇಕೆಂದು ಹೇಳುತ್ತೇನೆ.

ಇನ್ನು ಟೆಕ್ನಿಕಲ್ ಎಜುಕೇಷನ್ ಬಗ್ಗೆ ಹೇಳುವುದಾದರೆ, ಇಲ್ಲಿ ಯಾರಿಗೆ ಸೀಟ್ಸ್ ಸಿಗುತ್ತದೆಂದು ವಿಚಾರ ಮಾಡುವುದಾದರೆ, ಹೈಯರ್ ಕೇಡರ್‌ನವರಿಗೆ, ದೊಡ್ಡ ದೊಡ್ಡ ಅಧಿಕಾರಿಗಳ ಮಕ್ಕಳಿಗೆ, ಶ್ರೀಮಂತರ ಮಕ್ಕಳಿಗೆ, ಪಟ್ಟಣಗಳಲ್ಲಿ ವ್ಯಾಸಂಗ ಮಾಡತಕ್ಕಂಥ ಅನುಕೂಲಸ್ಥರ ಮಕ್ಕಳಿಗೆ ಮಾತ್ರ ಸೀಟ್ಸ್ ಸಿಗುತ್ತವೆಯೇ ಹೊರತು, ಶೇಕಡಾ ೮೦ ರಷ್ಟು ಜನರು ವಾಸ ಮಾಡತಕ್ಕಂಥ ಗ್ರಾಮಾಂತರ ಪ್ರದೇಶಗಳಿಂದ ಬರುವಂತಹ ವಿದ್ಯಾರ್ಥಿಗಳಿಗೆ ಸೀಟ್ಸ್ ಸಿಗುತ್ತಿಲ್ಲ. ಇದು ಸರಿಯಲ್ಲ. ಇನ್ನು ಮುಂದೆ ಈ ಟೆಕ್ನಿಕಲ್ ಎಜುಕೇಷನ್‌ನಲ್ಲಿ ಶೇಕಡಾ ೮೦ ರಷ್ಟು ಸೀಟ್ಸನ್ನು ಗ್ರಾಮಾಂತರ ಪ್ರದೇಶಗಳಿಂದ ಬರುವ ವರಿಗೆ ಮೀಸಲಿಡಬೇಕೆಂದು ತಮ್ಮ ಮೂಲಕ ಶಿಕ್ಷಣ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಇನ್ನು ಪರೀಕ್ಷಾ ಪದ್ಧತಿಯ ಬಗ್ಗೆ ಹೇಳಬೇಕೆಂದರೆ, ನಾವು ವರ್ಷೇ ವರ್ಷೇ ನಡೆಸ ತಕ್ಕಂಥ ವಾರ್ಷಿಕ ಪರೀಕ್ಷೆಗೆ ಹೆಚ್ಚಿನ ಮಹತ್ವ ಕೊಡದೆ, ಅಮೇರಿಕಾ ಹಾಗೂ ಇತರೇ ದೇಶಗಳಲ್ಲಿ ಯಾವ ರೀತಿ ವೀಕ್ಲಿ–ಟೆಸ್ಟ್‌ಗಳನ್ನು ಮಾಡಲಾಗುತ್ತದೋ, ಅದರಂತೆ ಇಲ್ಲಿಯೂ ಮಾಡಿದರೆ, ನಮ್ಮ ಮಕ್ಕಳು ಶ್ರದ್ಧೆಯಿಂದ ವಿದ್ಯಾಭ್ಯಾಸ ಮಾಡುತ್ತವೆ. ಈ ರೀತಿ ಮಾಡಿದರೆ ಹಿಂದಿನ ವಾರದ ಅಂಕಗಳನ್ನು ರಿವ್ಯೂ ಮಾಡುವುದಕ್ಕೂ ಅನುಕೂಲವಾಗುತ್ತದೆ. ಇದು ಉಪಾಧ್ಯಾಯರಿಗೆ ಕಷ್ಟವಾಗಿ ಕಾಣಬಹುದು; ಆದರೆ ಮಕ್ಕಳಹಿತದೃಷ್ಟಿಯಿಂದ ಈ ಪದ್ಧತಿ ಒಳ್ಳೆಯದು. ತಜ್ಞರು ಸಹ ಈ ಬಗ್ಗೆ ಸಲಹೆ ಕೊಟ್ಟಿದ್ದಾರೆ. ವೀಕ್ಲಿ ಟೆಸ್ಟ್ ಮಾಡಿ, ಅದರಲ್ಲಿ ಬರುವ ಅಂಕಗಳ ಸರಾಸರಿಯನ್ನು ಗಣನೆಗೆ ತೆಗೆದುಕೊಂಡು, ಅದರ ಆಧಾರದ ಮೇಲೆ ವಾರ್ಷಿಕ ಪರೀಕ್ಷೆಗೆ ಕೂರಲು ಯಾರು ಅರ್ಹರಿದ್ದಾರೆ, ಯಾರು ಅರ್ಹರಿಲ್ಲವೆಂಬುದನ್ನು ತೀರ್ಮಾನ ಮಾಡಬಹುದು. ವೀಕ್ಲಿ ಟೆಸ್ಟ್‌ನಿಂದ ವಿದ್ಯಾರ್ಥಿಗಳ ಒಂದು ದಕ್ಷತೆ ಯನ್ನು ಹೆಚ್ಚಿಸಬಹುದು; ಈ ರೀತಿ ಮಾಡದೆ ವರ್ಷದ ಕೊನೆಯಲ್ಲಿ ಮಾರ್ಚಿ ಅಥವಾ ಏಪ್ರಿಲ್ ತಿಂಗಳಲ್ಲಿ ಒಂದೇ ಸಲ ಪರೀಕ್ಷೆ ಮಾಡಿದರೆ, ಮಕ್ಕಳು ಸರಿಯಾಗಿ ಓದದೆ ವರ್ಷವೆಲ್ಲಾ ಕಾಲಹರಣ ಮಾಡಿ ಪರೀಕ್ಷೆಯ ಸಮಯದಲ್ಲಿ ಮಾತ್ರ ಓದುತ್ತವೆ. ಇದರಿಂದ ಒಳ್ಳೆಯ ಫಲಿತಾಂಶ ಬರುವುದಿಲ್ಲ. ವೀಕ್ಲಿ ಟೆಸ್ಟ್ ಮಾಡುವುದಕ್ಕೆ ಸಾಧ್ಯವಾಗದಿದ್ದರೆ ತಿಂಗಳಿಗೊಂದು ಸಲವಾದರೂ ಟೆಸ್ಟ್ ಮಾಡಿ, ಅದರಲ್ಲಿ ಮಕ್ಕಳು ತೆಗೆಯುವಂತಹ ಅಂಕಗಳನ್ನು ಆ ಮಕ್ಕಳ ತಂದೆತಾಯಿಗಳಿಗೆ ತಿಳಿಸುವಂತಹ ವ್ಯವಸ್ಥೆಯನ್ನಾದರೂ

ಮಾಡಬೇಕು. ಈಗ ಕಾನ್‌ವೆಂಟ್‌ಗಳಲ್ಲಿ ಈ ಪದ್ಧತಿ ಇದೆ. ಅದನ್ನೇ ಇಲ್ಲಿಯೂ ಮಾಡಲು ವಿಚಾರ ಮಾಡಬೇಕೆಂದು ಹೇಳುತ್ತೇನೆ. ಆದ್ದರಿಂದ ಅದನ್ನು ಮಾಡುವುದರಿಂದ ಮಕ್ಕಳ ಒಂದು ಪ್ರಗತಿ ಒಂದು ಮಟ್ಟದಲ್ಲಿ ಬರುತ್ತದೆ. ಹಾಗೂ ಅವರು ವಿದ್ಯಾವಂತರಾಗುತ್ತಾರೆ. ಅವರು ದೇಶಕ್ಕೆ ಉಪಯುಕ್ತ ವಾಗತಕ್ಕಂತಹ ರೀತಿಯಲ್ಲಿ ಸ್ವಾವಲಂಬಿಗಳಾಗುತ್ತಾರೆ. ಈ ಒಂದು ಸ್ವಾವಲಂಬನೆಯ ವಿಚಾರವನ್ನು ಮಾತನಾಡುವುದಾದರೆ ಇವತ್ತು ಗುರ ಕುಲಮಟ್ಟದಲ್ಲಿ ಏನು ಹಿಂದೆ ಇತ್ತು? ಕೊಠಾರಿ ಕಮಿಷನ್‌ನವರು ಮಾಡಿರುವ ಸಿಲಿಬಸ್ ಇದೆ ಅದನ್ನು ಗಮನದಲ್ಲಿಟ್ಟುಕೊಂಡು ಆ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಹಂತಹಂತವಾಗಿ ಮಾಡಬೇಕಾಗುತ್ತದೆ. ಇದನ್ನು ಅಭ್ಯಾಸ ಮಾಡಿಸುವುದರಿಂದ, ತಮ್ಮ ಗಮನಕ್ಕೆ ಒಂದು ವಿಷಯವನ್ನು ತರುತ್ತೇನೆ. ಅದೇನೆಂದರೆ ಆ ಮಕ್ಕಳ ಸ್ವಾವಲಂಭನೆಯನ್ನು ಗಮನದಲ್ಲಿಟ್ಟು ಕೊಂಡು ಈ ಶಿಕ್ಷಣವನ್ನು ಪ್ರೈಮರಿ ಶಿಕ್ಷಣದಿಂದ ಪ್ರಾರಂಭ ಮಾಡಬೇಕಾಗುತ್ತದೆ. ಇವತ್ತು ನಾವು ಗ್ರಾಮಾಂತರ ಪ್ರದೇಶದಲ್ಲಿರತಕ್ಕ ವಿದ್ಯಾರ್ಥಿಗಳಿಗೆ ಸಿರಿಕಲ್ಚರ್ ಹಾಗೂ ವ್ಯವಸಾಯದ ಬಗ್ಗೆ ಒಂದು ರೀತಿಯ ಶಿಕ್ಷಣವನ್ನು ಕೊಡುತ್ತಾ ಬಂದ ಪಕ್ಷದಲ್ಲಿ ಅವರು ತಮ್ಮ ನೌಕರಿಗಾಗಿ ಸರ್ಕಾರವನ್ನು ಅವಲಂಬಿಸದೆ ತಮ್ಮ ಕೆಲಸವನ್ನು ತಾವೇ ಪಡೆದುಕೊಳ್ಳುತ್ತಾರೆ. ಆದುದರಿಂದ ಈ ರೀತಿಯ ಶಿಕ್ಷಣವನ್ನು ಹಂತ ಹಂತವಾಗಿ ಕೊಟ್ಟು ವಿದ್ಯಾರ್ಥಿಗಳನ್ನು ತಯಾರು ಮಾಡಬೇಕು. ಇದರಿಂದಾಗಿ ಕೆಲಸಕ್ಕೆ ಸರ್ಕಾರಕ್ಕೆ ಬರುವ ಜನರ ರಶ್ ಕಡಿಮೆಯಾಗುತ್ತದೆ. ಈ ರೀತಿಯ ಬೇಸಿಕ್ ಎಜುಕೇಶನ್ ಕೊಡುವ ಬಗ್ಗೆ ನಾವು ವಿಚಾರ ಮಾಡಬೇಕು. ಈ ಬಗ್ಗೆ ಒಂದು ತಜ್ಞರ ಸಮಿತಿಯನ್ನು ರಚನೆ ಮಾಡಿ, ಸಭೆಗಳನ್ನು ಕರೆದು ಮುಂದಿನ ಸಾಲಿನೊಳಗಾಗಿ ಈ ವಿದ್ಯಾಭ್ಯಾಸದ ಬಗ್ಗೆ ಈ ಕಾರ್ಯಕ್ರಮವನ್ನು ನೆರವೇರಿಸಿ ರಾಷ್ಟ್ರದ ಸಂಪತ್ತನ್ನು ಹೆಚ್ಚಿಸಲು ಸಹಾಯ ಮಾಡಬೇಕು. ಈ ರೀತಿ ಮಕ್ಕಳನ್ನು ನಾವು ತಯಾರು ಮಾಡದೇ ಹೋದರೆ ಮಕ್ಕಳು ಸೋಮಾರಿಗಳಾಗುವ ಸಂಭವ ಇದೆ. ಹಿಂದೆ ವಿದ್ಯಾ ಇಲಾಖೆಯಿಂದ ಏಡೆಡ್ ಹಾಸ್ಟಲುಗಳನ್ನು ಹರಿಜನಗಿರಿಜನರ ಒಂದು ಪ್ರಗತಿಗೋಸ್ಕರ ನಡೆಸುತ್ತಿದ್ದರು, ಅವು ಈಗಲೂ ಚೆನ್ನಾಗಿ ನಡೆಯುತ್ತಿದ್ದವು. ಕಾರಣ ಇಷ್ಟೇ. ತಾಲ್ಲೂಕು ಮಟ್ಟದಲ್ಲಿ ಅಸಿಸ್ಟೆಂಟ್ ಎಜ್ಯುಕೇಷನಲ್ ಆಫೀಸರು ಇರುತ್ತಿದ್ದರು. ಅವರು ಈಗಲೂ ಇದ್ದಾರೆ. ಅವರನ್ನು ಇವತ್ತು ಅಪ್‌ಗ್ರೇಡ್ ಮಾಡಿ ಗೆಜೆಟೆಡ್ ಮಾಡಿದ್ದಾರೆ. ತನಿಖೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ಆಯಾಯ ತಾಲ್ಲೂಕಿನ ಏಡೆಡ್ ಇನ್‌ಸ್ಟಿಟ್ಯೂಷನ್‌ನ ಬಿಲ್ಲುಗಳನ್ನು ಅವುಗಳನ್ನು ತನಿಖೆ ಮಾಡಿ ಒಂದೆರಡು ದಿನಗಳಲ್ಲಿ ಅವನ್ನು ಮಂಜೂರು ಮಾಡಿಕೊಡುವುದಕ್ಕೆ ಅನುಕೂಲವಾಗುತ್ತದೆ. ಗ್ರಾಂಟ್ ಕಾಲಕ್ಕೆ ಸರಿಯಾಗಿ ಬಾರದೇ ಹೋದರೆ ವಿದ್ಯಾರ್ಥಿಗಳ ಊಟ ಉಪಚಾರಕ್ಕೆ ಬಹಳ ತೊಂದರೆಯಾಗುತ್ತದೆ. ಈಗ ಈ ಹಾಸ್ಟಲುಗಳು ಸಮಾಜ ಕಲ್ಯಾಣ ಇಲಾಖೆಗೆ ಬಂದಿರುತ್ತವೆ. ಆದ್ದರಿಂದ ಈ ಹಾಸ್ಟಲುಗಳಿಗೆ ಸಂಬಂಧಪಟ್ಟ ಬಿಲ್ಲುಗಳಿಗೆ ಡೆಪ್ಯೂಟಿ ಕಮಿಷನರ್ ಅವರು ಕೌಂಟರ್‌ಸೈನ್ ಮಾಡಬೇಕಾಗುತ್ತದೆ. ತಾಲ್ಲೂಕು ಮಟ್ಟದಲ್ಲಿ ಇರುವ ಹಾಸ್ಟಲ್‌ಗಳವರು ಬಿಲ್ಲುಗಳನ್ನು ಸುಮಾರು ೫೦-೬೦ ಮೈಲಿ ದೂರ ಇರತಕ್ಕ ಡಿಸ್ಟ್ರಿಕ್ ಹೆಡ್‌ಕ್ವಾರ್ಟರ್ಸ್‌ಗೆ ಹೋಗಿ ಡೆಪ್ಯೂಟಿ ಕಮಿಷನರ್ ಅವರಿಂದ ಕೌಂಟರ್ ಸೈನ್ ಮಾಡಿಸಬೇಕಾದರೆ ಬಹಳ ತೊಂದರೆ ಇದೆ. ಇದರಿಂದ ಬಿಲ್ ಕೌಂಟರ್‌ಸೈನ್ ಮಾಡಲು ಬಹಳ ವಿಳಂಬವಾಗುತ್ತದೆ. ಆದ್ದರಿಂದ, ಮಕ್ಕಳಿಗೆ ಊಟ ಉಪಚಾರಗಳು ಹಾಸ್ಟಲುಗಳಲ್ಲಿ ಕೊಡುವುದಕ್ಕೆ ತೊಂದರೆಯಾಗುತ್ತದೆ. ಆದ್ದರಿಂದ ನಾವು ಹೇಳಿದಂತಹ ವಿಚಾರವನ್ನು ಸರ್ಕಾರದವರು ಪುನರ್ ಪರಿಶೀಲನೆ ಮಾಡಿ ಏಡೆಡ್ ಹಾಸ್ಟಲುಗಳು ಏನಿವೆ ಅವುಗಳನ್ನು ಎಜುಕೇಷನ್ ಡಿಪಾರ್ಟ್‌ಮೆಂಟ್ ಕಂಟ್ರೋಲ್‌ಗೆ ವಾಪಸ್ ತೆಗೆದುಕೊಂಡು ನಡೆಸಿದರೆ ಅವುಗಳನ್ನು ಹೆಚ್ಚು ದಕ್ಷತೆಯಿಂದ ನಡೆಸುವುದಕ್ಕೆ ಅನುಕೂಲವಾಗುತ್ತದೆ. ಈಗ ಜನರಲ್ ಹಾಸ್ಟಲುಗಳನ್ನು ಸಮಾಜ ಕಲ್ಯಾಣ ಇಲಾಖೆಯವರು ನಡೆಸಿ ವಿದ್ಯಾರ್ಥಿಗಳಿಗೆ ಪುಸ್ತಕ, ಬಟ್ಟೆ ಮತ್ತು ಊಟ ಇವುಗಳನ್ನು ಸಾಕಷ್ಟು ರೀತಿಯಲ್ಲಿ ಕೊಡುತ್ತಿದ್ದಾರೆ. ಆದರೆ ಈ ಏಡೆಡ್ ಇನ್‌ಸ್ಟಿಟ್ಯೂಷನ್‌ಗಳಲ್ಲಿ ವಿದ್ಯಾರ್ಥಿಯೊಬ್ಬನಿಗೆ ೪೦ ರೂಪಾಯಿಗಳನ್ನು ಗ್ರಾಂಟ್ ರೂಪದಲ್ಲಿ ಕೊಡುತ್ತಿದ್ದಾರೆ. ಆದುದರಿಂದ ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳುತ್ತಿದ್ದೇನೆ, ಎಲ್ಲಾ ಹಾಸ್ಟಲುಗಳನ್ನು ಕೂಡ ನಿಮ್ಮ ಎಜ್ಯುಕೇಷನ್ ಇಲಾಖೆಯ ವ್ಯಾಪ್ತಿಗೆ ಬರುವಂತೆ ಮಾಡಿ ಪುನಃ ಒಂದು ಗ್ರಾಂಟನ್ನು ರಿವೈಸ್ ಮಾಡಿ ಹಾಸ್ಟಲುಗಳು ಸರಿಯಾದ ರೀತಿಯಲ್ಲಿ ನಡೆಸಲು ಸರ್ಕಾರದವರು ಈ ಬಗ್ಗೆ ಪರಿಶೀಲಿಸಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಇನ್ನು ನರ್ಸರಿ ಸ್ಕೂಲ್ಸ್ ಬಗ್ಗೆ ನಾನು ಒಂದು ಸಲಹೆಯನ್ನು ಕೊಡುತ್ತೇನೆ. Because every child is an asset to the Nation. ನರ್ಸರಿ ಸ್ಕೂಲ್‌ಗಳನ್ನು ಪ್ರಾರಂಭ ಮಾಡಿ

ಅವರನ್ನು ತಯಾರು ಮಾಡಿ ಬೇರೆ ಪ್ರೈಮರಿ ಸ್ಕೂಲ್ ವಿದ್ಯಾರ್ಥಿಗಳಿಗೆ ಕೊಡತಕ್ಕ ಶಿಕ್ಷಣ ಸೌಲಭ್ಯವನ್ನು ಇವರಿಗೂ ಕೊಡುವಂತಹ ಒಂದು ಫಾಲೋಅಪ್ ಪ್ರೋಗ್ರಾಮ್ ಹಾಕಿಕೊಳ್ಳಬೇಕೆಂದು ನಾನು ಮಾನ್ಯ ಶಿಕ್ಷಣ ಮಂತ್ರಿಯವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ನಾವು ಉಪಾಧ್ಯಾಯರಿಗೆ ಸೌಕರ್ಯಗಳನ್ನು ಕೊಡದೇ ಹೋದರೆ ನಾವು ನಿರೀಕ್ಷಿಸಿದಷ್ಟು ಕೆಲಸವನ್ನು ಅವರಿಂದ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಅನೇಕ ಉಪಾಧ್ಯಾಯರಿಗೆ ಮನೆ ಇರುವುದಿಲ್ಲ. ನಿಮ್ನ ವರ್ಗದವರಿಗಂತೂ ಮನೆಗಳು ಸಿಗುವುದು ಕಷ್ಟವಾಗಿದೆ. ಆದ್ದರಿಂದ ಉಪಾಧ್ಯಾಯರುಗಳು ೧೫-೨೦ ಮೈಲಿ ದೂರದ ಪಟ್ಟಣಗಳಲ್ಲಿ ವಾಸ ಮಾಡಿಕೊಂಡು ಆ ಹಳ್ಳಿಗಳಿಗೆ ಹೋಗಿ ಪಾಠ ಮಾಡುವ ಪರಿಸ್ಥಿತಿ ಇದೆ. ಇದು ಬಹಳ ಕಷ್ಟತರವಾದುದು. ಆದ್ದರಿಂದ ಇವರನ್ನು ವರ್ಗಾಯಿಸಿ ಎಂದು ಹೇಳುವುದಿಲ್ಲ. ಆದ್ದರಿಂದ ಇವರುಗಳಿಗೆ ಹಳ್ಳಿಗಳಿಗೆ ಹಾಕುವುದಕ್ಕಿಂತ ಮುಂಚೆ ಇವರಿಗೆ ವಸತಿ ಸೌಕರ್ಯವನ್ನು ಮಾಡಿದ ಪಕ್ಷದಲ್ಲಿ ಇವರಿಂದ ನಾವು ನಿರೀಕ್ಷಿಸಿದ ೧೦೦ಕ್ಕೆ ೧೦೦ ರಷ್ಟು ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ. ಆದ್ದರಿಂದ ವರ್ಗಾವರ್ಗಿಯನ್ನು ಆದಷ್ಟು ಕಡಿಮೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಈ ಒಂದು ದಿಸೆಯಲ್ಲಿ ಉಪಾಧ್ಯಾಯರಿಗೆ ವಸತಿಸೌಕರ್ಯಗಳನ್ನು ಗ್ರಾಮಾಂತರ ಮಟ್ಟದಲ್ಲಿ ಮಾಡಿ ಕೊಡಬೇಕು. ಆದಷ್ಟು ಹೆಣ್ಣು ಮಕ್ಕಳನ್ನು ಗ್ರಾಮಾಂತರದ ಪ್ರದೇಶಗಳಿಗೆ ವರ್ಗ ಮಾಡಬಾರದೆಂದು ನಾನು ಕೇಳಿಕೊಳ್ಳುತ್ತೇನೆ. ಇದರಿಂದ ಅವರ ಕಷ್ಟ ಹೇಳತೀರದಾಗಿದೆ. ಹೆಣ್ಣುಮಕ್ಕಳನ್ನು ಗ್ರಾಮಾಂತರ ಪ್ರದೇಶಕ್ಕೆ ಹಾಕಿದರೆ ಅವರಿಗೆ ಅಲ್ಲಿನವರು ಕೊಡತಕ್ಕ ಕಿರುಕುಳವನ್ನು ನಾವೇ ಕೇಳಬೇಕಾಗುತ್ತದೆ. ಆದ್ದರಿಂದ ಬಹಳ ಕಷ್ಟವಾಗಿರತಕ್ಕ ಕಡೆ ಹೆಣ್ಣು ಮಕ್ಕಳನ್ನು ವರ್ಗ ಮಾಡಬಾರದು. ಅವರನ್ನು ಸಾಧ್ಯವಾದಷ್ಟು ಟೌನ್ ಹಾಗೂ ಹೋಬಳಿ ಮಟ್ಟದಲ್ಲಿ ವರ್ಗಾವರ್ಗಿ ಮಾಡುವುದಕ್ಕೆ ಒಂದು ವ್ಯವಸ್ಥೆ ಮಾಡಬೇಕು. ಹರಿಜನಗಿರಿಜನರಿಗೂ ಕೂಡ ಟೌನ್ ಭಾಗದಲ್ಲಿಯೇ ವರ್ಗಾವರ್ಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಹಾಗೂ ಇವರ ವಸತಿ ಸೌಕರ್ಯದ ಬಗ್ಗೆಯೂ ಮಾನ್ಯ ಮಂತ್ರಿಗಳು ಯೋಚನೆ ಮಾಡಬೇಕು. ಈ ಒಂದು ವಿದ್ಯಾ ಕ್ಷೇತ್ರಕ್ಕೆ ಹೆಚ್ಚಿನ ಮಟ್ಟದಲ್ಲಿ ಮುಂದಿನ ವರ್ಷದೊಳಗೆ ಹೆಚ್ಚಿನ ಪ್ರಗತಿಯನ್ನು ಸಾಧಿಸುವುದಕ್ಕೆ ಮಾನ್ಯ ಮಂತ್ರಿಗಳು ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇದರ ಬಗ್ಗೆ ದೀರ್ಘವಾಗಿ ಆಲೋಚನೆ ಮಾಡಿ ತಜ್ಞರ ಅಭಿಪ್ರಾಯವನ್ನು ತೆಗೆದುಕೊಂಡು ಬೇರೆ ಎಲ್ಲಾ ಇಲಾಖೆಗಿಂತಲೂ ಈ ಇಲಾಖೆಗೆ ಹೆಚ್ಚಿನ ಒಂದು ಆದ್ಯತೆಯನ್ನು ಸರ್ಕಾರ ಕೊಡುವುದಕ್ಕೆ ಪ್ರಯತ್ನ ಮಾಡಬೇಕು. ಇದಕ್ಕೆ ನಮ್ಮೆಲ್ಲರ ಸಹಕಾರ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಈಗ ಇಲ್ಲಿ ಮಂಡಿಸಿರತಕ್ಕ ಬಜೆಟ್ ಸಾಕಷ್ಟು ಇಲ್ಲ. ಇದು ಇನ್ನೂ ಹೆಚ್ಚು ಆಗಬೇಕು; ಎಂದು ನಾನು ಹೇಳಬಯಸುತ್ತೇನೆ. ಆದುದರಿಂದ ಹೆಚ್ಚಿನ ಮಟ್ಟದಲ್ಲಿ ವಿದ್ಯಾ ಇಲಾಖೆ ಹೆಚ್ಚಿನ ರೀತಿಯಲ್ಲಿ ದಕ್ಷತೆಯಿಂದ ಕೆಲಸ ಮಾಡಿದಲ್ಲಿ ಮಕ್ಕಳು ಹೆಚ್ಚಿನ ಉಪಯುಕ್ತತೆಯನ್ನು ಪಡೆಯುವುದಕ್ಕೆ ಅನುಕೂಲವಾಗುತ್ತದೆ. ಎಂದು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಮೇಲಿಂದ ಮೇಲೆ ಒತ್ತಾಯ ಮಾಡಿದರೂ ಸಾಕಷ್ಟು ಕಾಲವನ್ನು ಕೊಟ್ಟಿದ್ದಾರೆ. ಅದಕ್ಕಾಗಿ ಅವರನ್ನು ವಂದಿಸಿ ಶಿಕ್ಷಣ ಮಂತ್ರಿಗಳನ್ನೂ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

೫-೦೦ ಪಿ. ಎಂ

ಛೇರ್ಮನ್‌ರವರು (ಶ್ರೀ ಎಚ್. ಟಿ. ಕೃಷ್ಣಪ್ಪ).—ಮುಂದಿನ ಭಾಷಣಕಾರರನ್ನು ಕರೆಯುವುದಕ್ಕೆ ಮುಂಚೆ ಮಾನ್ಯ ಸದಸ್ಯರನ್ನು ಕೇಳಿಕೊಳ್ಳುವುದೇನೆಂದರೆ, ತಮಗೆ ನಿಗದಿಯಾದ ಕಾಲದೊಳಗೆ ತಾವು ಹೇಳಬೇಕಾದ ಎಲ್ಲಾ ವಿಚಾರಗಳನ್ನೂ ಸಂಕ್ಷಿಪ್ತವಾಗಿ ಹೇಳಬೇಕು. ಹೀಗೆ ಪ್ರತಿಯೊಬ್ಬರೂ ೧೦ ನಿಮಿಷ, ೧೫ ನಿಮಿಷ ಹೆಚ್ಚಾಗಿ ತೆಗೆದುಕೊಂಡರೆ ನಾವು ಗೊತ್ತುಮಾಡಿರತಕ್ಕ ಕಾಲದೊಳಗೆ ಚರ್ಚೆಯನ್ನು ಮುಗಿಸುವುದಕ್ಕೆ ಆಗುವುದಿಲ್ಲ. ಎಲ್ಲಾ ವಿಚಾರಗಳನ್ನು ಒಬ್ಬರೇ ಹೇಳಬೇಕು ಎನ್ನತಕ್ಕ ವಿಚಾರ ಸರಿಯಾದುದಲ್ಲ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಮಾನ್ಯ ಸದಸ್ಯರು ಮಾತನಾಡುವುದಕ್ಕೆ ಮೊದಲೇ ಅವರಿಗೆ ಎಷ್ಟು ಸಮಯ ಕೊಟ್ಟಿದೆ ಎಂದು ತಿಳಿಸಿದರೆ ಅನುಕೂಲವಾಗುತ್ತದೆ.

ಛೇರ್ಮನ್‌ರವರು.—ಈಗ ಮಾನ್ಯ ಮುಳ್ಳೂರು ಆನಂದರಾವ್‌ರವರಿಗೆ ೨೦ ನಿಮಿಷಗಳ ಕಾಲ ಕೊಟ್ಟಿದೆ.

† ಶ್ರೀ ಮುಳ್ಳೂರು ಆನಂದರಾವ್ (ರಾಜಾಜಿನಗರ).—ಸನ್ಮಾನ್ಯ ಸಭಾಪತಿಗಳೇ, ಮಾನ್ಯ ಶಿಕ್ಷಣ ಸಚಿವರು ೧೪೯ ಕೋಟಿ ರೂಪಾಯಿಗಳ ಬೇಡಿಕೆಯನ್ನು ನಮ್ಮ ಮುಂದೆ ಇಟ್ಟು ಅದಕ್ಕೆ ಸದನದ ಒಪ್ಪಿಗೆ

ಕೊಡಿ ಎಂದು ಕೇಳುತ್ತಾ ಇದ್ದಾರೆ. ಅದಕ್ಕೆ ಒಪ್ಪಿಗೆ ಕೊಡುವುದಕ್ಕೆ ನನ್ನ ವಿನಂತಿ ಇದೆ. ಯಾವುದೇ ಬೇಡಿಕೆ ಬಂದಾಗ ಸಾಮಾನ್ಯವಾಗಿ ವಿರೋಧಪಕ್ಷದವರು ವಿರೋಧಮಾಡುವುದು, ಆಡಳಿತ ಪಕ್ಷದವರು ಒಪ್ಪಿಗೆ ಕೊಡುವುದು ಸ್ವಾಭಾವಿಕ. ಆದರೆ ಈ ಒಂದು ಸಂದರ್ಭದಲ್ಲಿ ಎರಡೂ ಕಡೆ ಕುಳಿತಿರತಕ್ಕ ಮಿತ್ರರಲ್ಲಿ ನಾನು ಒಂದೇ ಒಂದು ಪ್ರಶ್ನೆಯನ್ನು ಕೇಳಲಿಕ್ಕೆ ಇಷ್ಟಪಡುತ್ತೇನೆ. ಏನೆಂದರೆ, ನಾವು ಮನಸ್ಸಿಟ್ಟು ಮನಃಪೂರ್ವಕವಾಗಿ ಇದಕ್ಕೆ ಒಪ್ಪಿಗೆ ಕೊಡುತ್ತಿದ್ದೇವೆಯೋ ಎಂದು. ಮಾನ್ಯ ಭಾಸ್ಕರ ಶೆಟ್ಟರು ಕೊಟ್ಟಿದ್ದಾರೆ. ಅವರು ಚೀಫ್ ವಿಪ್, ಕೊಡಲೇಬೇಕು. ಈ ಸದನದಲ್ಲಿ ಇಂತಹ ಬೇಡಿಕೆಗಳು ಬಂದಾಗ ನಿಮ್ಮ ಪಕ್ಷ, ನಮ್ಮ ಪಕ್ಷವನ್ನು ಸ್ವಲ್ಪ ಮರೆಯೋಣ. ಜನತಾ ಪಕ್ಷ, ಕಾಂಗ್ರೆಸ್ ಪಕ್ಷ ಎನ್ನುವುದನ್ನು ಬಿಟ್ಟು ಬಿಡೋಣ : ಎಲ್ಲಾ ಒಂದೇ ಆಗೋಣ. ಶಿಕ್ಷಣ ಇದಕ್ಕೆಲ್ಲಾ ಅತೀತವಾಗಿರತಕ್ಕ ಒಂದು ಪ್ರಶ್ನೆ ; ಮೂಲಭೂತವಾದ ಪ್ರಶ್ನೆ, ಮಕ್ಕಳ ಭವಿಷ್ಯ, ರಾಷ್ಟ್ರದ ಭವಿಷ್ಯ, ಸಮಾಜದ ಭವಿಷ್ಯ, ಸಂಬಂಧಪಟ್ಟವರ ಭವಿಷ್ಯಗಳ ಬಗ್ಗೆ ವಿಚಾರಮಾಡಬೇಕಾದರೆ ಪಕ್ಷದ ಹಿನ್ನೆಲೆಯಲ್ಲಿ ಹೊರಟಾಗ ಅದು ಬೇರೆ ಜಾಡನ್ನು ಹಿಡಿಯುತ್ತದೆ. ನಾವು ೧೪೯ ಕೋಟಿ ರೂಪಾಯಿಗಳನ್ನು ಕೊಡಬೇಕಾದರೆ ಅದು ಎಲ್ಲಿ ಹೋಗುತ್ತದೆ, ಏನಾಗುತ್ತದೆ ಎನ್ನುವುದನ್ನು ನಾವು, ನೀವು ಎಲ್ಲಾ ಕಲೆತು ವಿಚಾರಮಾಡಿ ಒಪ್ಪಿಗೆ ಕೊಡಬೇಕು, ಹೃದಯ ಮುಟ್ಟಿ ಒಪ್ಪಿಗೆ ಕೊಡಬೇಕು ಎಂದು ನಾನು ಕೇಳುತ್ತಾ ಇದ್ದೇನೆ. ಹಿಂದಿನ ವರ್ಷ ೧೪೫ ಕೋಟಿ ರೂಪಾಯಿಗಳಿಗೆ ಒಪ್ಪಿಗೆ ಕೊಟ್ಟಿದ್ದೇವೆ ; ಅದು ಏನಾಯಿತು, ಎಲ್ಲಿ ಹೋಯಿತು, ಖರ್ಚಾಗಿದೆ, ಇದರ ಬಗ್ಗೆ ಸಂಶಯವಿಲ್ಲ. ಆದರೆ ಖರ್ಚು ಹೇಗೆ ಆಯಿತು, ಏನು ಪ್ರತಿಫಲ ಸಿಕ್ಕಿತು—ಇದರ ಬಗ್ಗೆ ವಿಚಾರ ಮಾಡಬೇಕು. ನಾವು ಇದರ ಬಗ್ಗೆ ಪ್ರತಿವರ್ಷ ಕೇಳುತ್ತಾ ಇದ್ದೇವೆ. ಸಮಯದ ಕೊರತೆ ಇರುವುದರಿಂದ ಇದರ ಬಗೆ ನಾನು ವಿವರವಾಗಿ ಹೋಗುವುದಿಲ್ಲ. ಮಾನ್ಯ ಶಿಕ್ಷಣ ಮಂತ್ರಿಗಳನ್ನು ನಾನು ಕೇಳಲಿಕ್ಕೆ ಇಷ್ಟಪಡುತ್ತೇನೆ, ಏನೆಂದರೆ, ಹಿಂದಿನ ಸಾರಿ ನಿಮಗೆ ಕೊಟ್ಟಿರತಕ್ಕ ೧೪೫ ಕೋಟಿ ರೂಪಾಯಿಗಳಲ್ಲಿ ನೀವು ವಾಪಸ್ ಏನು ಕೊಟ್ಟಿದ್ದೀರಿ ಎಂದು. What is it you have achieved during this one year ? ಅದು ಏನಾಯಿತು, ಏನು ಗಳಿಸಿದ್ದೀರಿ, ಶಿಕ್ಷಣ ಇಲಾಖೆಯಲ್ಲಿ ಒಂದು ಇಂಚು ಏನಾದರೂ ಮುಂದಕ್ಕೆ ಹೋಗಿದ್ದೀರಾ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ, ಇದನ್ನು ನಾನು ಬಹಳ ನೊಂದ ಹೃದಯದಿಂದ, ನಿರಾಶೆಯಿಂದ ಹೇಳುತ್ತಿದ್ದೇನೆ. ಮಾನ್ಯ ಸುಬ್ಬಯ್ಯಶೆಟ್ಟರ ಬಗ್ಗೆ ನಾನು ದೊಡ್ಡ ಕಲ್ಪನೆ ಇಟ್ಟುಕೊಂಡಿದ್ದೇನೆ. ಅವರು ಸಮರ್ಥರು ನಿಜ, ಬೇರೆ ಕ್ಷೇತ್ರದಲ್ಲಿ. ಈ ಕ್ಷೇತ್ರದಲ್ಲಿ ಉತ್ಸಾಹದಿಂದ ಒಂದು ಹೆಜ್ಜೆ ಏನಾದರೂ ಮುಂದಕ್ಕೆ ತೆಗೆದುಕೊಂಡು ಹೋಗುತ್ತಾರೆ ಎಂದು ನಾನು ಭಾವಿಸಿದ್ದೆ. ಆದರೆ ಕಳೆದ ಒಂದು ವರ್ಷದಲ್ಲಿ ಒಂದು ಹೆಜ್ಜೆಯಲ್ಲ, ಒಂದು ಇಂಚೂ ಕೂಡ ಮುಂದೆ ತೆಗೆದುಕೊಂಡು ಹೋಗಿಲ್ಲ ಎಂದು ನಾನು ಬಹಳ ದುಃಖದಿಂದ ಹೇಳಬೇಕಾಗಿದೆ. ಅವರೇ ಒಂದು ಸಾರಿ ನಾನು ತಜ್ಞನಲ್ಲ ಇದರ ವಿಚಾರ ನನಗೆ ಗೊತ್ತಿಲ್ಲ ಎಂದು ಹೇಳಿದ್ದಾರೆ. ಒಂದು ಹೆಜ್ಜೆಯಾದರೂ ಮುಂದಕ್ಕೆ ಇಟ್ಟಿದ್ದರೆ ನಾನು ಸಂತೋಷಪಡುತ್ತಿದ್ದೆ. ಆದರೆ ಅವರು ಆ ರೀತಿ ಮಾಡಿಲ್ಲ. ಮಾನ್ಯ ಸುಬ್ಬಯ್ಯ ಶೆಟ್ಟರು ಇದರಲ್ಲಿ ವಿಫಲರಾಗಿದ್ದಾರೆ ಎಂದು ನಾನು ಬಹಳ ದುಃಖದಿಂದ ಹೇಳಬೇಕಾಗಿದೆ.

ಶ್ರೀ ವಿ. ಎಂ. ಘಾಡಿ.—ತಾವು ಯಾವ ರಾಡ್‌ನಿಂದ ಮೆಷರ್ ಮಾಡಿದ್ದೀರಿ ?

ಶ್ರೀ ಮಳ್ಳೂರು ಆನಂದರಾವ್.—ಮಾನ್ಯ ಅಧ್ಯಕ್ಷರೆ, ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಹೌಸ್‌ಗೆ ಬಹಳ ಇಂಟರೆಸ್ಟ್ ಇರುವ ಹಾಗೆ ಕಾಣುತ್ತದೆ. ಅವರು ಈ ರೀತಿ ಇಂಟರ್‌ಪ್ರಿಟೇಷನ್ ಮಾಡುವುದಾದರೆ ನಾನು ಕುಳಿತುಕೊಳ್ಳುತ್ತೇನೆ. ನನಗಿರುವ ಕಾಲದ ಅಭಾವದಿಂದ ಅದಕ್ಕೆಲ್ಲಾ ಉತ್ತರ ಕೊಡುವುದಕ್ಕೆ ಕಷ್ಟವಾಗುತ್ತದೆ. ಆದುದರಿಂದ ತಾವು ಕೃಪೆಮಾಡಿ ವಾಚಿನ ಕಡೆ ನೋಡಿ ನನಗೆ ಎರಡು ಗಂಟೆ ಕಾಲ ಸಮಯಕೊಡಿ, ನಾನು ಮಾತನಾಡುತ್ತೇನೆ. ಈಗ ನನಗೆ ೨೦ ನಿಮಿಷ ಮಾತನಾಡಿ ಎಂದು ಹೇಳಿದ್ದೀರಿ. ಮಾನ್ಯ ಸ್ನೇಹಿತರು ಈ ರೀತಿ ಇಂಟರ್‌ಪ್ರಿಟೇಷನ್ ಮಾಡುವುದಾದರೆ ೧೫ ನಿಮಿಷ ಅದಕ್ಕೇ ಹೋಗುತ್ತದೆ. ಆದುದರಿಂದ ನನಗೆ ೨ ಗಂಟೆ ಕಾಲಾವಕಾಶ ಕೊಡಿ. ಅವರು ಶಿಕ್ಷಣ ಇಲಾಖೆಯಲ್ಲಿ ಹೆಡ್ ಮಾಸ್ಟರ್ ಆಗಿದ್ದರು, ಯಾವ ಅಳತೆಗೋಲಿನಿಂದ ಅಳೆಯಬೇಕು, ಏನು ಪ್ರತಿಫಲ ಕೊಟ್ಟಿದೆ ಎನ್ನುವುದು ಅವರಿಗೇ ಗೊತ್ತು. ಈ ೧೫೦ ಕೋಟಿ ರೂಪಾಯಿಗಳನ್ನು ತೆಗೆದುಕೊಂಡುಹೋಗಿ ಸಂಬಳ, ಸಾರಿಗೆ ವಗೈರೆಗೆ ಡಿಸ್ಟ್ರಿಬ್ಯೂಷನ್ ಮಾಡುತ್ತಾರೆ. ಆದರಿಂದ ಸಮಾಜಕ್ಕೆ, ದೇಶಕ್ಕೆ, ವ್ಯಕ್ತಿಗೆ ಏನು ಪ್ರತಿಫಲ ಸಿಕ್ಕಿದೆ ? ಇದಕ್ಕೆ ಅನುಕೂಲವಾಗತಕ್ಕ ಶಿಕ್ಷಣ ಬೇಕಲ್ಲವೆ. ಶಾಲಾಕಾಲೇಜುಗಳಿಂದ ಹೊರಗೆ ಬರತಕ್ಕ ಮಕ್ಕಳಿಗೆ ಸ್ವಾವಲಂಬಿಗಳಾಗತಕ್ಕ ಶಕ್ತಿ ಇದೆಯೋ, ಸಮಾಜದಲ್ಲಿ ಕನಿಷ್ಠವಾಗಿಯಾದರೂ ಬಾಳುವಂಥ ಶಕ್ತಿ

ಯನ್ನು ಬೆಳೆಸಿಕೊಂಡು ಬರುತ್ತಿದ್ದಾರೆಯೋ, ಯಾವ ಅಳತೆಗೋಲಿನಿಂದ ಅಳೆದು ನೋಡಿದರೆ ಮಾನ್ಯ ಸಂಖ್ಯೆಯ್ಯಶೆಟ್ಟರು ಒಂದು ಹೆಜ್ಜೆ ಮುಂದಿಟ್ಟಿದ್ದಾರೆ ಎಂದು ಹೇಳೋಣ.

ಶ್ರೀ ಎಸ್. ವಿ. ನಾಯಕ್.—ಕೇಂದ್ರ ಸರ್ಕಾರ ಏನು ಮಾಡಿದೆ ?

ಶ್ರೀ ಮುಳ್ಳೂರು ಆನಂದರಾವ್.—ಮಾನ್ಯ ಸ್ನೇಹಿತರ ಕುತೂಹಲವನ್ನು ನಾನು ಮೆಚ್ಚುತ್ತೇನೆ. ಅದರ ಬಗ್ಗೆ ವಿವರವಾಗಿ ಹೋಗುವುದಕ್ಕೆ ಕಾಲದ ಅಭಾವವಿದೆ. ಒಟ್ಟಿನಲ್ಲಿ ಸುಂದರವಾಗಿ ಪುಸ್ತಕಗಳನ್ನು ಮುದ್ರಿಸಿ ನಮಗೆ ಕೊಟ್ಟಿದ್ದಾರೆ. ಹಿಂದಿನ ವರ್ಷದ ಪುಸ್ತಕಗಳನ್ನು ತೆಗೆದುಕೊಂಡು ನೋಡಿದರೆ ಅದಕ್ಕೂ ಇದಕ್ಕೂ ಏನೂ ವ್ಯತ್ಯಾಸವಿಲ್ಲ. ಅದರಲ್ಲಿರತಕ್ಕ ಅಂಕಿಅಂಶಗಳನ್ನು ಚೇಂಜ್‌ಮಾಡಿ ಇದರಲ್ಲಿ ಕೊಟ್ಟಿದ್ದಾರೆ. The same paras are repeated. ಇದರಲ್ಲಿ ಮೇಜರ್ ಮಿಸ್ಟೇಕ್ ಕೂಡ ಇದೆ. ಸಮಯ ಕೊಟ್ಟರೆ ಅದನ್ನೆಲ್ಲಾ ತೋರಿಸುತ್ತೇನೆ. ಜೊತೆಗೆ ೧೫೦ ಕೋಟಿ ರೂಪಾಯಿಗಳನ್ನು ಕೊಡುವ ಬಗ್ಗೆ ಒಂದೂವರೆ ಗಂಟೆ ಚರ್ಚೆಮಾಡಿ ಮುಗಿಸಿ ಹೋಗುತ್ತೇವೆಂದರೆ, ಇಡೀ ಸದನಕ್ಕೇ ದುಃಖವಾಗುತ್ತದೆ. ಇಡೀ ಬಜೆಟ್‌ನಲ್ಲಿ ಶಿಕ್ಷಣಕ್ಕೆ ಸಿಂಹಪಾಲು ಕೊಡುತ್ತೇವೆ. One-third of the total budget is earmarked for education. ಇದು ಹೇಗೆ ವ್ಯಯವಾಗಿದೆ ಎನ್ನುವುದನ್ನು ವ್ಯಾಲ್ಯು ಮಾಡುವುದಕ್ಕೋಸ್ಕರ ಬೇರೆ ಬೇರೆ ಏಜೆನ್ಸಿಗಳಿವೆ, ಪಬ್ಲಿಕ್ ಅಂಡರ್‌ಟೇಕಿಂಗ್ ಕಮಿಟಿ, ಪಬ್ಲಿಕ್ ಅಕೌಂಟ್ಸ್ ಕಮಿಟಿ ಇದೆ, ಅವರು ಮಾಡುತ್ತಾರೆ. ಶಿಕ್ಷಣಕ್ಕಾಗಿ ಕೊಡತಕ್ಕ ಹಣವನ್ನು ಯಾವರೀತಿಯಲ್ಲಿ ದೇಶಕ್ಕೆ, ಸಮಾಜಕ್ಕೆ, ವ್ಯಕ್ತಿಗೇ ಆಗಲೀ ವಾಪಸ್ ಕೊಡುತ್ತಾರೆ, ಈ ದಿಶೆಯಲ್ಲಿ ಏನು ಸಾಧನೆಯಾಗಿದೆ ಎನ್ನುವುದರ ಬಗ್ಗೆ ಚರ್ಚೆಮಾಡುವುದಕ್ಕೆ ವರ್ಷಕ್ಕೊಂದು ಸಾರಿ ಮಾತ್ರ ಅವಕಾಶವಿರುವುದು. ಬ್ರಾಹ್ಮಣರು ಯಾರಾದರೂ ಸತ್ತುಹೋದರೆ ವರ್ಷಕ್ಕೊಂದುಸಾರಿ ಶ್ರಾದ್ಧಮಾಡುತ್ತಾರೆ, ಹಾಗೆ ನಾವು ಮಾಡಿಕೊಂಡು ಹೋಗುತ್ತೇವೆ. ಓಟ್ ಆನ್ ಅಕೌಂಟ್ ಆಯಿತು, ಮತ್ತೆ ಈಗ ಓಟಿಗೆ ಹಾಕುತ್ತೀರಿ, ಮುಗಿಯಿತು. ಅದು ವಿನಹ ಏನಿದೆ ? ಶಿಕ್ಷಣ ಇಲಾಖೆಯ ರೀತಿನೀತಿಗಳನ್ನು ಶಿಕ್ಷಣಕ್ಕಾಗಿ ಎಷ್ಟು ಹಣ ಕೊಡುತ್ತಿದ್ದೇವೆ ಅದರ ಪ್ರತಿಫಲ ಏನು ಕೊಡುತ್ತಿದ್ದಾರೆ–ಅದನ್ನು ಮರೆಯುತ್ತೇವೆ. ೧೫೦ ಕೋಟಿ ರೂಪಾಯಿಗಳನ್ನು ಇದಕ್ಕೆ ಕೊಡುವಾಗ ನಾವು ವಿಚಾರ ಮಾಡಬೇಕಾಗುತ್ತದೆ.

ಖಾಸಗಿ ವಿದ್ಯಾಸಂಸ್ಥೆಗಳಿಗೆ ಕೋಟ್ಯಾಂತರ ರೂಪಾಯಿಯನ್ನು ಹಾಕಿದ್ದೀರಿ. ಇದರ ಜೊತೆಗೆ ಪೋಷಕರು ತಮ್ಮ ಮಕ್ಕಳುಗಳ ಮೇಲೆ ಎಷ್ಟು ಹಣವನ್ನು ಖರ್ಚು ಮಾಡುತ್ತಿದ್ದಾರೆ ? ತಾವು ತಮ್ಮ ಮಕ್ಕಳಿಗೋಸ್ಕರವಾಗಿ ಎಷ್ಟು ಹಣವನ್ನು ಖರ್ಚು ಮಾಡುತ್ತಿದ್ದೀರಿ ಎಂದು ನಾನು ಕೇಳಬಯಸುತ್ತೇನೆ. ರಾಷ್ಟ್ರದ ಇಡೀ ಸಂಪತ್ತು ಇವತ್ತು ಶಾಲಾಕಾಲೇಜುಗಳಲ್ಲಿ ಹಾಕುತ್ತಿದ್ದೇವೆ. ಒಂದು ರಾಷ್ಟ್ರದ ಸಂಪತ್ತು ಅರಣ್ಯ ಸಂಪತ್ತು ಅಲ್ಲ, ಕೈಗಾರಿಕಾ ಸಂಪತ್ತು ಅಲ್ಲ, ಖನಿಜ ಸಂಪತ್ತು ಅಲ್ಲ ಆ ಒಂದು ದೇಶದ ಮಕ್ಕಳೇ ಆ ರಾಷ್ಟ್ರದ ಸಂಪತ್ತು. ಆ ಸಂಪತ್ತನ್ನು ನಾವು ಶಾಲಾಕಾಲೇಜ್‌ಗಳೊಳಗೆ ಹಾಕಿ, ಅಧ್ಯಾಪಕರುಗಳಿಗೆ, ಶಿಕ್ಷಣ ಇಲಾಖೆಗೆ ಇವತ್ತಿನ ದಿವಸ ನಾವು ೧೫೦ ಕೋಟಿ ರೂಪಾಯಿಗಳನ್ನು ಬಡ್ಜೆಟ್‌ನಿಂದ ಸ್ಯಾಂಕ್ಷನ್ ಮಾಡುತ್ತಿದ್ದೇವೆ. ಮಕ್ಕಳು ಶಾಲೆಗಳೊಳಗೆ ಹೋಗಬೇಕಾದರೆ ದೇವರಾಗಿರುತ್ತಾರೆ, ಹೊರಗಡೆ ಬರ ಬೇಕಾದರೆ ಭೂತಗಳಾಗಿ ಬರುತ್ತಾರೆ. ಈಗ ಒಂದು ಇಂಡಸ್ಟ್ರೀಸ್‌ಗೆ ರಾ ಮೇಟೀರಿಯಲ್ ಹೋದಾಗ, ಆ ರಾ ಮೇಟೀರಿಯಲ್ ಹೊರಗೆ ಬರಬೇಕಾದರೆ ಫಿನಿಷಿಡ್ ಪ್ರಾಡಕ್ಟ್ ಬರುತ್ತದೆ. ಆದರೆ ಇವತ್ತು ನಮ್ಮ ಸುಂದರ್ ಮಕ್ಕಳು ಶಾಲಾ ಕಾಲೇಜುಗಳಿಂದ ಶಿಕ್ಷಣ ಮುಗಿಸಿಕೊಂಡು ಹೊರಗೆ ಬರುವಾಗ ಸಮಾಜದಲ್ಲಿ ಬಾಳುವೆ ಮಾಡುವುದಕ್ಕೆ ಏನೇನು ಗುಣಗಳನ್ನು ಪಡೆದುಕೊಂಡಿರಬೇಕೋ ಅವುಗಳನ್ನು ಹೊಂದಿರದೇ ಇತರೇ ಕೆಟ್ಟಗುಣಗಳನ್ನು ಹೊಂದಿಕೊಂಡು ಹೊರಗೆ ಬರುತ್ತಾರೆ. ಈ ದೋಷವನ್ನು ಯಾರ ಮೇಲೆ ಹಾಕುತ್ತೀರಿ ? ಅದಕ್ಕೋಸ್ಕರ ೧೫೦ ಕೋಟಿ ರೂಪಾಯಿಗಳನ್ನು ನಾವು ಶಿಕ್ಷಣ ಇಲಾಖೆಗೆ ಮಂಜೂರು ಮಾಡಿಕೊಡಬೇಕೇ ? ತಾವು ಇದರ ಬಗ್ಗೆ ಗಂಭೀರವಾಗಿ ಯೋಚನೆ ಮಾಡಬೇಕಾಗುತ್ತದೆ. ಇವತ್ತು ಬೇಕಾದರೆ ನಾವು ಶಿಕ್ಷಣ ಇಲಾಖೆಗೆ ೧೫೦ ಕೋಟಿ ಅಲ್ಲ ೨೫೦ ಕೋಟಿ ಬೇಕಾದರೆ ಖರ್ಚು ಮಾಡೋಣ, ಆದರೆ ಇವತ್ತು ನಮ್ಮ ರಾಷ್ಟ್ರದ ಸಂಪತ್ತು ಮಕ್ಕಳು ಏನಿದ್ದಾರೆ ಅವರು ದಾರಿ ತಪ್ಪಿ ಹೋದರೆ ಆ ಮೇಲೆ ಎಲ್ಲಿಂದಲಾದರೂ ಇಂಪೋರ್ಟ್ ಮಾಡಿಕೊಳ್ಳುತ್ತೀರಾ ? ಬೇರೆ ದೇಶದಿಂದ ಇಂಪೋರ್ಟ್ ಮಾಡಿಕೊಳ್ಳುತ್ತೀರೋ ಹೇಗೆ ? ನಮ್ಮ ಮಕ್ಕಳನ್ನು ಹಾಳುಮಾಡಿ ಬೇರೆ ಮಕ್ಕಳನ್ನು ತರಿಸಿಕೊಳ್ಳುತ್ತೀರಿ ? ಹೇಳಿ ತಾವೇ ಹೇಳಿ, ಇದನ್ನು ನಾನು ಅತ್ಯಂತ ವೇದನೆಯಿಂದ ಹೇಳುತ್ತಿದ್ದೇನೆ. ೨೦ ವರ್ಷಗಳ ಶಿಕ್ಷಣ ಕ್ಷೇತ್ರದಲ್ಲಿ ನನಗೆ ಅನುಭವವಿರುವುದರಿಂದ ಈ ಮಾತನ್ನು ಅತ್ಯಂತ ದುಃಖದಿಂದ ಹೇಳುತ್ತಿದ್ದೇನೆ. ಇವತ್ತು ನಮ್ಮ

ಶಾಲಾ ಕಾಲೇಜ್‌ಗಳೇನಿವೆ ಅವು ಶಾಲಾ ಕಾಲೇಜುಗಳಲ್ಲ. ನಮ್ಮ ಮಕ್ಕಳನ್ನು, ಯುವಕ ಯುವತಿಯನ್ನು ಸ್ಲಾಟರ್ ಮಾಡತಕ್ಕ ಹೌಸ್‌ಗಳಾಗಿವೆಂದು ಬಹಳ ದುಃಖದಿಂದ, ವೇದನೆಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ಇವು ಮಕ್ಕಳನ್ನು ಹಾಳು ಮಾಡತಕ್ಕ ಕೇಂದ್ರಗಳಾಗಿವೆ ಇದರ ಬಗ್ಗೆ ಕಾಳಜಿಯಿಂದ ವಿಚಾರ ಮಾಡಬೇಕಾಗಿದೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಒಂದು ವಿಷಯದ ಬಗ್ಗೆ ಗಂಟೆಗಟ್ಟಲೆ ಮಾತನಾಡಬಹುದು ಆದರೆ ಅದರ ಬಗ್ಗೆ ಹೆಚ್ಚು ಮಾತನಾಡಲು ಹೋಗುವುದಿಲ್ಲ. ಇದಕ್ಕೆ ಮಾನ್ಯ ಸಚಿವರ ಉತ್ತರವೇನಿದೆ ಎಂಬುದು ಗೊತ್ತು. ಈ ವಿಷಯವನ್ನು ಹಿಂದೆ ಪ್ರಸ್ತಾಪ ಮಾಡಿದಾಗ ಅವರು ಉತ್ತರವನ್ನು ಕೊಟ್ಟಿದ್ದರು ಅದು ಇನ್ನೂ ನನ್ನ ಮನಸ್ಸಿನಲ್ಲಿ ಹಾಗೆಯೇ ಉಳಿದಿದೆ. ನಾನು ಶಿಕ್ಷಣ ತಜ್ಞನಲ್ಲ, ಶಿಕ್ಷಣತಜ್ಞರ್ಯಾರಿದ್ದಾರೆ ಅವರಲ್ಲಿಯೇ ಭಿನ್ನಾಭಿಪ್ರಾಯಗಳು ಇವೆ, ನಮಗೆ ಯಾರೂ ಸಹ ಏನು ಮಾಡಬೇಕು ಬಿಡಬೇಕು ಎನ್ನುವ ಬಗ್ಗೆ ಹೇಳುವವರೇ ಇಲ್ಲ ಅಂತ ಪಾಪ ಅವರ ಕಷ್ಟವನ್ನು ಅವರು ಹೇಳಿಕೊಂಡರು. ಅದಕ್ಕೆ ನಾನು ಈ ಸದನದಲ್ಲಿ ಅವರಿಗೆ ದಯವಿಟ್ಟು ವಿನಮ್ರವಾಗಿ ತಿಳಿಸುವುದಕ್ಕೆ ಇಷ್ಟ ಪಡುತ್ತೇನೆ. ಶಿಕ್ಷಣದ ಬಗ್ಗೆ ಅನೇಕ ಯೋಜನೆಗಳನ್ನು ಶಿಕ್ಷಣ ತಜ್ಞರು ಹಾಕಿಕೊಟ್ಟಿದ್ದಾರೆ. ೧೯೩೭ನೇ ಇಸವಿಯಲ್ಲಿಯೆ ಮಹಾತ್ಮಾ ಗಾಂಧೀಜಿಯವರು ಈ ದೇಶಕ್ಕೆ ಒಂದು ಶಿಕ್ಷಣ ವಿಧಾನವನ್ನು ಯಾವ ರೀತಿಯಾಗಿ ಅಳವಡಿಸಬೇಕು ಎನ್ನುವ ಬಗ್ಗೆ ಉಲ್ಲೇಖ ಮಾಡಿ ಹೇಳಿದ್ದಾರೆ. ಮತ್ತೆ ಡಾ|| ಜಾಕೀರ್ ಹುಸೇನ್‌ರವರು ಮೂಲ ಶಿಕ್ಷಣ, Basic Education ಬಗ್ಗೆ ಹೇಳಿದ್ದಾರೆ ಅದರಲ್ಲಿ Basic ಹೋಗಿ ಬರೀ sick ಮಾತ್ರ ಉಳಿದುಕೊಂಡಿದೆ. ಅವರ ಜೊತೆಗೆ ಬೇಸಿಕ್ ಎಜುಕೇಷನ್ ಕೂಡ ರಾಜ್‌ಘಾಟ್‌ನಲ್ಲಿ ಸಮಾಧಿಯಾಗಿ ಹೋಯಿತೇನೋ ? ಇದರ ಬಗ್ಗೆ ಅನೇಕ ಶಿಕ್ಷಣ ತಜ್ಞರು ಅನೇಕ ಯೋಜನೆಗಳನ್ನು ಕೊಟ್ಟಿದ್ದಾರೆ. ೧೯೬೪ರಲ್ಲಿ ಕೋಠಾರಿ ಎಜುಕೇಷನ್ ಕಮಿಷನ್ಸ್ ರಿಪೋರ್ಟ್ ತಯಾರಾಯಿತು ? ಅದು ಎಲ್ಲಿಗೆ ಹೋಯಿತು ? ಅದು ಬರೀ ಬೌಂಡ್ ಆಗಿ ಅಲ್ಲಿ ಒಂದು ಕಡೆ ಬಿದ್ದಿದೆ, Right from pre-primary up to University, what type of education should be given etc., are all there in those reports. ಪ್ರತಿಯೊಂದರಲ್ಲಿ ಸ್ಪಷ್ಟವಾಗಿ ತೋರಿಸಿಕೊಟ್ಟಿದ್ದಾರೆ. ಅದಾದ ಮೇಲೆ ನಮ್ಮ ರಾಜ್ಯದಲ್ಲಿ ಎಷ್ಟೊ ಸಮಿತಿಗಳು ಆಯಿತು, ಅವುಗಳ ವರದಿಗಳು ಏನಾದವು ? ಎಲ್ಲಾ ಇದೆ. ಸರ್ಕಾರಕ್ಕೆ ಮಾರ್ಗದರ್ಶನ ಮಾಡಲು ಬೇಕಾದಷ್ಟು ಯೋಜನೆಗಳನ್ನು ನಮ್ಮ ಶಿಕ್ಷಣ ತಜ್ಞರು ರೂಪಿಸಿಕೊಟ್ಟಿದ್ದಾರೆ, ಯಾವ ರೀತಿಯಲ್ಲಿ ಮುಂದುವರಿಸಬೇಕು ಎನ್ನುವ ಬಗ್ಗೆ ಸಲಹೆ ಕೊಡಲು ಸಿದ್ಧರಾಗಿದ್ದಾರೆ ಆದರೆ ಅದನ್ನು ಜಾರಿಗೆ ತರತಕ್ಕ ಸರ್ಕಾರ ಇನ್ನೂ ಬರಲಿಲ್ಲ. ಸರ್ಕಾರ ಬಂದರೂ ಕೂಡ......

ಒಬ್ಬ ಸದಸ್ಯರು.—ಕೇಂದ್ರದಲ್ಲೂ ಬರಲಿಲ್ಲವಲ್ಲಾ ? ?

ಶ್ರೀ ಮಳ್ಳೂರು ಆನಂದರಾವ್.—ಕೇಂದ್ರದಲ್ಲೂ ಬರಲಿಲ್ಲ ಒಪ್ಪುತ್ತೇನೆ ಇಲ್ಲವೆಂದು ಅಲ್ಲ. ಅಲ್ಲೂ ಬರಲಿಲ್ಲ ಇದರ ಬಗ್ಗೆ, I am going to speak on the Bill which the Central Government has introduced. There is no doubt about it. ಅದಕ್ಕೆ ಆಗಲೇ ನಾನು ಹೇಳಿದ್ದು ಇಲ್ಲಿ ನಾವು ಪಕ್ಷಗಳ ಭೇದಭಾವನೆಯನ್ನು ಮರೆತುಬಿಡೋಣ, ಅದನ್ನು ಬಿಟ್ಟು ನೀವು ಪ್ರತಿ ಸಾರಿಯೂ ಡೆಲ್ಲಿಗೆ ಕಡೆ ಬೆಟ್ಟುಮಾಡಿ ತೋರಿಸುತ್ತಿದ್ದರೆ ನಾವು ಇಲ್ಲಿ ಶ್ರೀ ದೇವರಾಜ್ ಅರಸ್ ಸರ್ಕಾರದ ಕಡೆಗೆ ಬೆಟ್ಟುಮಾಡಿ ತೋರಿಸಬೇಕಾಗುತ್ತದೆ. ಆದುದರಿಂದ ಇಬ್ಬರೂ ಸ್ವಲ್ಪ ಹೊತ್ತು ಪಕ್ಷಗಳ ಭೇದ ಭಾವನೆಯನ್ನು ಮರೆತು ಚರ್ಚೆ ಮಾಡೋಣ ವಿಮರ್ಶೆ ಮಾಡೋಣ. ಕೇಂದ್ರ ಸರ್ಕಾರ ಕೂಡ ವಿಫಲವಾಗಿದೆ, ಅದರಲ್ಲಿ ಏನೂ ಅನುಮಾನವಿಲ್ಲ, ಶೇಕಡ ೫೦,೫೦ ವಿಫಲರಾಗಿದ್ದೇವೆ ಅದಕ್ಕೋಸ್ಕರ ಶಿಕ್ಷಣ ತಜ್ಞರು ಏನು ಈ ದೇಶಕ್ಕೆ ಯಾವ ರೀತಿಯ ಶಿಕ್ಷಣ ಇರಬೇಕು ಎನ್ನುವುದರ ಬಗ್ಗೆ ಶಿಕ್ಷಣ ತಜ್ಞರು ಕೊಟ್ಟಿದ್ದಾರೆ. ಅದನ್ನು ಅಳವಡಿಸಿ, ಶಾಲಾ ಕಾಲೇಜ್‌ಗಳಲ್ಲಿ ಅನುಷ್ಠಾನಕ್ಕೇ ತಂದು ಮಕ್ಕಳನ್ನು ಯೋಗ್ಯರನ್ನಾಗಿ ಮಾಡಿ, ಅವರಿಗೆ ಯೋಗ್ಯ ಶಿಕ್ಷಣ ಕೊಡಬೇಕು ಎನ್ನತಕ್ಕ ಕಳಕಳಿಯನ್ನು ಹೊಂದಿರತಕ್ಕ, ಆ ಒಳ್ಳೆಯ ಹೃದಯವನ್ನು ಹೊಂದಿರತಕ್ಕ ಶಿಕ್ಷಣ ಮಂತ್ರಿಗಳವರು ದುರಾದೃಷ್ಟವಶಾತ್ ಇಲ್ಲಿಯವರೆಗೂ ಬರಲಿಲ್ಲ. ಈ ರಾಜ್ಯದಲ್ಲಿ ನಾವು ೪-೫ ಶಿಕ್ಷಣ ಮಂತ್ರಿಗಳವರನ್ನು ನೋಡಿದ್ದೇವೆ, ಪಾಪ ಅವರಿಗೇನೋ ಆ ಒಂದು ಕಳಕಳಿ ಇತ್ತು ಆದರೆ ಅವರು ಅದನ್ನು ಮಾಡುವುದಕ್ಕೆ ನಮ್ಮ ಶಿಕ್ಷಣ ಇಲಾಖೆ ಬಿಟ್ಟು ಕೊಡುತ್ತಿರಲಿಲ್ಲ. ನೀವು ಒಂದು ವೇಳೆ ಮಾಡಬೇಕು ಅಂತ ಹೋದರೂ ಕೂಡ ನಿಮ್ಮ ಶಿಕ್ಷಣ ಇಲಾಖೆ ಒಂದು ಚೆನ್ನಾಗಿ ಸೆಟ್ ಅಪ್ ಆಗಿ ಬಿಟ್ಟಿದೆ. ಅವರು ನಿಮಗೆ ಅವಕಾಶ ಮಾಡಿಕೊಡುವುದಿಲ್ಲ, ನೀವು ಮಾಡಬೇಕೆಂದು ಹೊರಟಿರುವ ಕೆಲಸವನ್ನು ತಡೆಗಟ್ಟುತ್ತಾರೆ, ಅಷ್ಟರಮಟ್ಟಿಗೆ ಅವರು ಬಲವಾಗಿ ಬಿಟ್ಟಿದ್ದಾರೆ

ಅಲ್ಲಿ. ಇದಕ್ಕೆ ನಾನು ತಮಗೆ ಸರಿಯಾದ ಮಾರ್ಗದರ್ಶನ ಕೊಡುವುದೇನೆಂದರೆ, ಮಾನ್ಯ ಶ್ರೀ ಸುಬ್ಬಯ್ಯ ಶೆಟ್ಟಿಯವರಿಗೆ ಇತರೇ ಕ್ಷೇತ್ರಗಳಲ್ಲಿ ಒಳ್ಳೆಯ ಅನುಭವವಿದೆ ಆದುದರಿಂದ ಶಿಕ್ಷಣ ಕ್ಷೇತ್ರದಲ್ಲಿ ಒಳ್ಳೆಯ ಅನುಭವವಿರತಕ್ಕಂಥ ವ್ಯಕ್ತಿಯನ್ನು ಇಲ್ಲಿಗೆ ಹಾಕುವ ಬಗ್ಗೆ ನೀವು ನಿಮ್ಮ ಪಕ್ಷದಲ್ಲಿ ಒಂದು ತೀರ್ಮಾನಕ್ಕೆ ಬಂದು ಅಂಥ ವ್ಯಕ್ತಿಯನ್ನು ಈ ಶಿಕ್ಷಣ ಕ್ಷೇತ್ರಕ್ಕೆ ಹಾಕಿ, ಮಾನ್ಯ ಸುಬ್ಬಯ್ಯ ಶೆಟ್ಟರಿಗೆ ಇತರೇ ಕ್ಷೇತ್ರಗಳಲ್ಲಿ ಒಳ್ಳೆಯ ಪರಿಣತೆಯನ್ನು ಹೊಂದಿದ್ದಾರೆ ಇಲ್ಲವೆಂದು ಅಲ್ಲ, ಆದರೆ ಶಿಕ್ಷಣ ಇಲಾಖೆ ಹೇಗೆ ನಡೆಯುತ್ತಿದೆ? ಅದು ಸಮರ್ಪಕವಾಗಿ ನಡೆಯಲು ಅದಕ್ಕೆ ಒಬ್ಬ ಸಮರ್ಪಕವಾದ ವ್ಯಕ್ತಿಯನ್ನು ಹಾಕಲು ಸರ್ಕಾರ ಗಮನದಲ್ಲಿಟ್ಟುಕೊಳ್ಳಬೇಕು.

ಶ್ರೀ ಬಿ. ಭಾಸ್ಕರ್ ಶೆಟ್ಟಿ.—ಶ್ರೀ ಮಳ್ಳೂರು ಆನಂದರಾಯರು ಏನಾದರೂ ಈ ಕಡೆಗೆ ಬರುವ ಹಾಗಿದ್ದರೆ ಆಲೋಚನೆ ಮಾಡಬೇಕಾಗುತ್ತದೆಯೇನೋ ?

ಶ್ರೀ ಮಳ್ಳೂರು ಆನಂದರಾವ್.—ನಿಮಗೆ ಅಷ್ಟೊಂದು ವಿಶಾಲ ಹೃದಯವಿದ್ದರೆ, let them extend the invitation. I will consider it. ದಿ॥ ಪಂಡಿತ ಜವಾಹರ್ ಲಾಲ್ ನೆಹರೂರವರ ಮಂತ್ರಿಮಂಡಲದಲ್ಲೂ ಸಹ, ಅವರನ್ನು ಕಟುವಾಗಿ ಟೀಕೆ ಮಾಡುತ್ತಿದ್ದ ಒಬ್ಬ ಶ್ಯಾಮ್ ಪ್ರಕಾರ್ ಮುಕರ್ಜಿಯವರನ್ನು ಅನಂತರ ಮಂತ್ರಿಗಳನ್ನಾಗಿ ಮಾಡಿದ್ದರು. ಆದುದರಿಂದ ಅವರ ಬಗ್ಗೆ ತಮಗೆ ಸಂಕುಚಿತ ಮನೋಭಾವನೆ ಬೇಡ, ಇವತ್ತು ನಮ್ಮಲ್ಲಿ ಸಂಕುಚಿತ ಮನೋಭಾವನೆ ಬೆಳೆದಿದೆ. ಆದುದರಿಂದ ಅಧ್ಯಕ್ಷರೇ, ನಾನು ಈ ಶಿಕ್ಷಣ ಇಲಾಖೆಯ ಬಗ್ಗೆ ಹೇಳುತ್ತಿದ್ದೆ, ಇದು ಶಿಕ್ಷಣ ಇಲಾಖೆ ಒಂದು ದೊಡ್ಡ ಗೊಂಡಾರಣ್ಯ ಇದ್ದ ಹಾಗೆ ಒಳಕ್ಕೆ ಹೋದರೆ ಹೊರಕ್ಕೆ ಬರುವುದಕ್ಕೇ ರಸ್ತೆ ಗೊತ್ತಾಗುವುದಿಲ್ಲ, ಆ ರೀತಿಯಾಗಿ ಬೆಳೆದುಕೊಂಡು ಬಿಟ್ಟಿದೆ. ಅದಕ್ಕೆ ನಾನು ಮಾನ್ಯ ಶ್ರೀ ಸುಬ್ಬಯ್ಯ ಶೆಟ್ಟಿಯವರಿಗೆ ಏನು ಪೊಲಿಟಿಕಲ್ ಸ್ಟ್ರಕ್ಚರ್ ಇದೆ ಅದನ್ನೂ ಸಹ ಈ ಶಿಕ್ಷಣ ಇಲಾಖೆಯ ಮಂತ್ರಿಗಳಾಗಿ ಕಳೆದುಕೊಂಡು ಹೋಗಿ ಬಿಡುತ್ತಾರಲ್ಲಾ ಅಂತ ವ್ಯಥೆಯಾಗುತ್ತಿದೆ. You take care of your self that is my sincere, I don't say advice, prayer.

SRI G. K. TAKKED.—He has been successful.

SRI MALLUR ANANDA RAO.—I wish that...... ನನಗೆ ಸಾಕಷ್ಟು ಸಮಯ ಕೊಟ್ಟರೆ ಈ ಪೆಟ್ಟಿಗೆ ತುಂಬಾ ವಿಷಯಗಳು ಇದೆ ಎಲ್ಲಾ ತಮಗೆ ಹೇಳುತ್ತಿದ್ದೆ, ಆದರೆ ಟೈಮ್‌ನ ಅಭಾವವಿರುವುದರಿಂದ ಒಂದೊಂದೇ ವಿಷಯವನ್ನು ಕೋಟ್ ಮಾಡಿ ತಮಗೆ ಹೇಳುತ್ತೇನೆ. ಕಳೆದ ಒಂದು ವರ್ಷದಲ್ಲಿ ಈ ಶಿಕ್ಷಣ ಇಲಾಖೆ ಒಂದು ಇಂಚೂ ಮುಂದೆ ಹೋಗಿಲ್ಲ. ಯಾವುದರಲ್ಲಿ ಮುಂದೆ ಹೋಗಿದೆ ಎಂದರೆ ಈ ಇಲಾಖೆಯ ಆಫೀಸರ್‌ಗಳ ಹುದ್ದೆಗಳು ಮಾತ್ರ ಹೆಚ್ಚಾಗುತ್ತಾ ಹೋಗುತ್ತಿದೆಯೇ ಹೊರತು ಕೆಲಸವೇನೂ ಆಗುತ್ತಿಲ್ಲ. ಇವತ್ತು ನಿಮ್ಮ ಶಿಕ್ಷಣ ಇಲಾಖೆಯಲ್ಲಿ ಯೂನಿವರ್ಸಿಟಿ, ಪ್ರಿ ಯೂನಿವರ್ಸಿಟಿ, ಪ್ರೈಮರಿ ಎಜುಕೇಷನ್ ಬೋರ್ಡ್, ಟೆಕ್ನಿಕಲ್ ಎಜುಕೇಷನ್ ಬೋರ್ಡ್ ಹೀಗೆ ಒಂದು ಆರ್ಮಿ ಆಫ್ ಆಫೀಸರ್ಸ್ ಇದ್ದಾರೆ ಇದರ ಜೊತೆಗೆ ಸುಮಾರು ಒಂದೂ, ಒಂದೂವರೆ ಲಕ್ಷದಷ್ಟು ಅಧ್ಯಾಪಕರುಗಳು ಇದ್ದಾರೆ, ಇದರ ಜೊತೆಗೆ ನಿಮ್ಮ ಡೈರೆಕ್ಟರೇಟ್ ಆಫ್ ಎಜುಕೇಷನ್ ಕಳೆದ ಹತ್ತಾರು ವರ್ಷಗಳಲ್ಲಿ ಏನು ಕೆಲಸ ಮಾಡುತ್ತಿದ್ದೆ ಎಂದರೆ ಕೇವಲ ೩ ಕೆಲಸಗಳನ್ನು ಮಾತ್ರ ಮಾಡುತ್ತಿದೆ. ಮೊದಲನೆಯದಾಗಿ ಮತ್ತು ಮುಖ್ಯವಾದದ್ದು ಎಂದರೆ ಟ್ರಾನ್ ಫರ್‌ಗಳನ್ನು ಮಾಡುವುದು, ಅದಕ್ಕೆ ಬೇಕಾದಂಥ ಒಂದು ಫೈನ್ ಏಜೆನ್ಸಿಯನ್ನು ನಿರ್ಮಾಣ ಮಾಡಿಕೊಂಡಿದ್ದಾರೆ, ಮಾನ್ಯ ಶ್ರೀ ಸುಬ್ಬಯ್ಯ ಶೆಟ್ಟಿಯವರಿಗೆ ಗೊತ್ತಿದೆ, ಅದೂ ಗೊತ್ತಿಲ್ಲವೇ ? ಟ್ರಾನ್ಸ್‌ಫರ್‌ಗೆ ಇಷ್ಟು ಹಣ ಅಂತ ನಿಗದಿ ಮಾಡಿ ಹಣವನ್ನು ತೆಗೆದುಕೊಳ್ಳುತ್ತಿದ್ದಾರೆ, I can quote the names of agents. I can quote the persons who have taken the money including the D.P.I. for your kind information. I know the names. ಎರಡನೆಯದಾಗಿ ರೆಕ್ರೂಟ್‌ಮೆಂಟ್, ಇಲ್ಲಿ ಕೆಲಸಕ್ಕೆ ತೆಗೆದುಕೊಳ್ಳುವಾಗ ನಡೆಯುವಂಥಾ ಭ್ರಷ್ಟಾಚಾರ ಇನ್ನು ಯಾವುದರಲ್ಲೂ ನಡೆಯುತ್ತಿಲ್ಲ. ನಿಮ್ಮ ಶಿಕ್ಷಣ ಇಲಾಖೆ ಸಂಪೂರ್ಣವಾಗಿ ನಿಮ್ಮ ಡೆಪ್ಯುಟಿ ಡೈರೆಕ್ಟರ್‌ಗಳು ಎಲ್ಲಾ ಇದರಲ್ಲಿ ಪಳಗಿದ್ದಾರೆ, ಬೆಂಗಳೂರಿನ ಒಬ್ಬ ಡೆಪ್ಯುಟಿ ಡೈರೆಕ್ಟರ್ ಅದೂ ಮಹಿಳಾ ಡೈರೆಕ್ಟರ್‌ರೊಬ್ಬರಾಗಿದ್ದರು ಅವರು ಕೆಲಸಕ್ಕೆ ೩ ಸಾವಿರ ರೂಪಾಯಿಗಳನ್ನು ತೆಗೆದುಕೊಳ್ಳುತ್ತಿದ್ದರು. ಅವರಿಗೆ ಮಂತ್ರಿಗಳೊಬ್ಬರ ರಕ್ಷಣೆ ಕೂಡ ಇತ್ತು. ನನಗೆ ಖಂಡಿತವಾಗಿಯೂ ಗೊತ್ತು ಅವರು ೩,೦೦೦ ರೂಪಾಯಿಗಳನ್ನು ತೆಗೆದುಕೊಳ್ಳುತ್ತಿದ್ದು ತಾವು ಇಲ್ಲವೆನ್ನುವುದಾದರೆ ನಾನು ಆ ವ್ಯಕ್ತಿಯನ್ನು ತಮ್ಮ ಮುಂದೆ ನಿಲ್ಲಿಸಿ ಬಿಡುತ್ತೇನೆ.

ಶ್ರೀಮಂತಿ ಎಸ್. ಪ್ರಮೀಳಾ.—ಒಬ್ಬ ಮಹಿಳೆ ಎಂದರೆ ಯಾರು ? ಗೊತ್ತಾಗಲಿಲ್ಲ ಸ್ವಾಮಿ ?

ಚೇರ್ಮನ್‌ರವರು.—ಲಂಚ ತೆಗೆದುಕೊಳ್ಳುವುದಕ್ಕೆ ಮಹಿಳೆ, ಗಂಡಸು ಅಂತ ಹೇಳುವುದು ಬೇಡ, ಯಾರೇ ಅಧಿಕಾರಿಗಳಾಗಿರಲಿ ಅವರ ಮೇಲೆ ತಾವು ಆಪಾದನೆ ಮಾಡುವಾಗ,.........

SRI MALLUR ANANDA RAO.—I am aware of all that. I have already given a notice under the required rules. I am going to charge some of the Officers of the Education Department. The Hon. Minister of Education has to come prepared with that.

ಸ್ವಾಮಿ, ಈ ಕೆಲಸಗಳಲ್ಲಿ ಅವರು ತೊಡಗಿರುತ್ತಾರೆ. ಈಗ ಒಂದು ರೆಕ್ರೂಟ್‌ಮೆಂಟ್ ಮತ್ತೊಂದು ಟ್ರಾನ್ಸ್‌ಫರ್ ಬಗ್ಗೆ ಆಯಿತು. ಇನ್ನು ಮೂರನೆಯದೊಂದು ದೊಡ್ಡ ಕೆಲಸ ಇದೆ, ಅದಕ್ಕೆ ಅಂಕಿ ಅಂಶಗಳನ್ನೆಲ್ಲ ಕೊಡುತ್ತೇನೆ, ಈ ಶಿಕ್ಷಣ ಇಲಾಖೆಯಲ್ಲಿ ಆ ಕೆಲಸವನ್ನು ಇನ್ನು ಬೇರೆ ಏನನ್ನೂ ಮಾಡುವುದಿಲ್ಲ. ಅದೇನೆಂದರೆ, ಖಾಸಗೀ ಶಾಲೆಗಳೊಡನೆ ಸಂಪೂರ್ಣ ನಿಕಟ ಸಂಬಂಧವನಿಟ್ಟುಕೊಂಡು ಸರ್ಕಾರದಿಂದ ಬರತಕ್ಕ ಗ್ರ್ಯಾಂಟನ್ನೆಲ್ಲ ಚಾನಲೈಸ್ ಮಾಡಿ ಅವರಿಂದ ಎಷ್ಟೆಷ್ಟು ಪರ್ಸೆಂಟೇಜ್ ಹಣವನ್ನು ಹೇಗೆ ಹೊಡೆಯಬೇಕೆಂಬುದರಲ್ಲಿ ನಿಮ್ಮ ವಿದ್ಯಾ ಇಲಾಖೆಯವರು ಪರಿಣತರು. ಈ ಮೂರು ಕೆಲಸಗಳನ್ನೇ ಅವರು ಮಾಡುವುದು, ಅವನ್ನು ಬಿಟ್ಟು ಶಿಕ್ಷಣದ ಬಗ್ಗೆ ಯಾವ ನಿರ್ದೇಶನವನ್ನು ಮಾಡುವುದಿಲ್ಲ. ರೆಕ್ರೂಟ್‌ಮೆಂಟ್ ಕಮಿಟಿ ಮೂಲಕ ದುಡ್ಡು ಹೊಡೆಯುವುದು, ಟ್ರಾನ್ಸ್‌ಫರ್ ಮಾಡುವಾಗ ದುಡ್ಡು ಹೊಡೆಯುವುದು, ಮತ್ತು ನೇರವಾಗಿ ಖಾಸಗೀ ಶಾಲೆಗಳಿಂದ ಲಕ್ಷ ಲಕ್ಷ ರೂಪಾಯಿಗಳನ್ನು ಹೊಡೆಯುವುದೇ ಇವರ ಮೂಲ ಕಸುಬಾಗಿದೆ. ನೀವು ಈ ರೀತಿ ನೇರವಾಗಿ ಆಪಾದನೆಗಳನ್ನು ಮಾಡುತ್ತೀರಲ್ಲ, ನಿಮ್ಮ ಹತ್ತಿರ ಅವಕ್ಕೆಲ್ಲ ಸಾಕ್ಷಿ ಆಧಾರಗಳು ಇವೆಯೇ ಎಂದು ಮಾನ್ಯ ಮಂತ್ರಿಗಳು ಕೇಳಬಹುದು. ಖಾಸಗೀ ಶಾಲೆಗಳ ವ್ಯವಹಾರವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತಂದರೆ ಬಹುಶಃ ಅರ್ಥವಾಗುತ್ತದೆ, ಈ ಶಿಕ್ಷಣ ಇಲಾಖೆಯಲ್ಲಿ ಎಷ್ಟು ಆಳವಾದ ಭ್ರಷ್ಟಾಚಾರ ಇದೆ ಎಂಬುದು. ಈಗ ಹಣಕಾಸಿನ ಸಚಿವರು ಇಲ್ಲ ; ಅವರು ಇದ್ದಿದ್ದರೆ ಚೆನ್ನಾಗಿತ್ತು. ಅವರು ಇವತ್ತಿನ ದಿವಸ ೩೦ ಕೋಟಿ ರೂಪಾಯಿಗಳ ಟ್ಯಾಕ್ಸನ್ನು ಏನು ಹಾಕಿದ್ದಾರೆ, ಅದನ್ನು ಹಾಕುವುದಕ್ಕೆ ಮುಂಚೆ ನನ್ನನ್ನು ಕನ್‌ಸಲ್ಟ್ ಮಾಡಿದ್ದರೆ ಟ್ಯಾಕ್ಸ್ ಹಾಕದೆ ಅಷ್ಟು ಹಣವನ್ನು ಹೇಗೆ ಪಡೆಯಬಹುದಿತ್ತು ಎಂಬುದನ್ನು ತೋರಿಸಿಕೊಡುತ್ತಿದ್ದೆ. ಈಗ ನಿಮಗೆ ತಿಳಿಸುತ್ತೇನೆ, ಅದು ಎಲ್ಲೆಲ್ಲಿ ಸೋರಿ ಹೋಗುತ್ತಿದೆ ಎಂಬುದನ್ನು, ಅದನ್ನು ತಡೆಹಿಡಿಯುವ ಶಕ್ತಿ ಇದ್ದರೆ ತಡೆಹಿಡಿಯಿರಿ. ಇವತ್ತಿನ ದಿವಸ ಖಾಸಗೀ ಶಾಲೆಗಳಿಗೆ ಗ್ರ್ಯಾಂಟ್ ರೂಪದಲ್ಲಿ ೨೫ ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೀರಿ. ಅಲ್ಲಿ ಯಾವ ಯಾವ ರೀತಿ ನಡೆಯುತ್ತಿದೆ ಎಂದರೆ, ಅದಕ್ಕಿಂತ ದೊಡ್ಡ ರ್‍ಯಾಕೆಟ್ ಬಿಸಿನೆಸ್ ಬೇರೆ ಯಾವುದೂ ಇಲ್ಲ ಶಿಕ್ಷಣದ ಹೆಸರಿನಲ್ಲಿ, ಹಗಲು ದರೋಡೆ, ಲೂಟಿ, ಏನೇನು ನಡೆಯಬೇಕೋ ಅದೆಲ್ಲ ನಡೆಯುತ್ತಿದೆ. ಇದೆಲ್ಲವೂ ನಡೆಯತಕ್ಕದ್ದು ಸಂಪೂರ್ಣವಾಗಿ ಶಿಕ್ಷಣ ಇಲಾಖೆಯ ಅಧಿಕಾರಿಗಳ ನಿರ್ದೇಶನದಲ್ಲಿ ಮತ್ತು ಅವರ ಒಂದು ಸಹಕಾರದಿಂದ, ಅವರೇ ಇದಕ್ಕೆ ಡೈರೆಕ್ಟ್ ಮಾಡುವವರು ; ಹೀಗೆ ಮಾಡಿ ಇವತ್ತು ಕೋಟ್ಯಾಂತರ ರೂಪಾಯಿಗಳನ್ನು ಹೊಡೆಯುತ್ತಿದ್ದಾರೆ. ಇನ್ನು ನಮ್ಮಲ್ಲಿ ೩ ತರಹ ಖಾಸಗೀ ಸಂಸ್ಥೆಗಳು ಇವೆ. ಎಲ್ಲವುಗಳ ಮೇಲೂ ನಾನು ಆಪಾದನೆ ಮಾಡುವುದಕ್ಕೆ ಹೋಗುವುದಿಲ್ಲ. ಶಿಕ್ಷಣಕ್ಕೋಸ್ಕರ ಇರತಕ್ಕ ಖಾಸಗಿ ಶಾಲೆಗಳಿವೆ. ಅವರು ಶಿಕ್ಷಣಕ್ಕೋಸ್ಕರ ಸ್ಥಾಪನೆ ಮಾಡಿದ್ದಾರೆ. ಅವುಗಳನ್ನು ಬೇಕಾದರೆ ಹೆಸರಿಸಬಹುದು. ಅಂಥ ಶಿಕ್ಷಣ ಸಂಸ್ಥೆಗಳು ಬೆಂಗಳೂರಿನಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹಳಷ್ಟು ಇವೆ ಬೆಳಗಾಂ, ಬಿಜಾಪುರ ಹಾಗೂ ಮಂಡ್ಯದಲ್ಲಿ ಒಂದೆರಡು ಮೂರು ಒಳ್ಳೆಯ ಸಂಸ್ಥೆಗಳಿವೆ. ಇವು ಶಿಕ್ಷಣಕ್ಕೋಸ್ಕರ ಇರತಕ್ಕ ಶಾಲೆಗಳು. ಇದು ಒಂದು ಕೇಡರ್ ಆದರೆ ಎರಡನೆಯದಾಗಿ, ಅರಿಸ್ಟೋಕ್ರಾಟಿಕ್ ಸೋಫಿಯಲಿಸ್ಟಿಕ್ ಖಾಸಗಿ ಶಾಲೆಗಳು. ಅಲ್ಲಿ ಸಾಹುಕಾರರುಗಳ ಮಕ್ಕಳನ್ನು ಮಾತ್ರ ಸೇರಿಸಿಕೊಳ್ಳುವುದು. ಒಂದೊಂದು ನರ್ಸರಿ ಶಾಲೆಗಳಲ್ಲು ಮಕ್ಕಳಿಗೆ ೧೫೦ ರೂಪಾಯಿ ಪ್ರವೇಶ ಶುಲ್ಕವನ್ನು ತೆಗೆದುಕೊಳ್ಳುತ್ತಾರೆ. ಇದೇ ಬೆಂಗಳೂರಿನಲ್ಲೂ ಅಂಥ ಶಾಲೆಗಳಿವೆ. ಉದಾಹರಣೆಗೆ, ಈಸ್ಟ್–ವೆಸ್ಟ್ ಸ್ಕೂಲ್ ಇದೆ ; ಅದರ ವಾರ್ಷಿಕ ವರಮಾನ ೬೫ ಸಾವಿರ ರೂಪಾಯಿಗಳೆಂದು ಇದೇ ಸಭೆಯಲ್ಲಿ ಮಾನ್ಯ ಮಂತ್ರಿಗಳು ಪ್ರಶ್ನೋತ್ತರಗಳಿಗೆ ಉತ್ತರ ನೀಡುವಾಗ ಹೇಳಿದ್ದಾರೆ. ಆ ಶಾಲೆಗೆ ಮಕ್ಕಳನ್ನೆಲ್ಲ ಕಾರಿನಲ್ಲೇ ಕಳುಹಿಸಿಕೊಡುತ್ತಾರೆ. ಅರಿಸ್ಟೋಕ್ರಾಟಿಕ್ ಸೋಫಿಯಲಿಸ್ಟಿಕ್ ಅಂದರೆ ಹೇಗೆಂದರೆ

ಸಾಹುಕಾರರುಗಳಿಂದ ದುಡ್ಡು ತೆಗೆದುಕೊಂಡು ಕೆಲಸ ಮಾಡುವುದು. ಇಂಥ ಶಾಲೆಗಳು ಬೆಂಗಳೂರಿನಲ್ಲಿ ಬೇಕಾದಷ್ಟು ಇವೆ. ಆ ಬಗ್ಗೆ ತನಿಖೆ ಮಾಡಿ. ಇನ್ನು ಮೂರನೆಯದಾಗಿ, ಬರೀ ದುಡ್ಡು ಮಾಡತಕ್ಕ ಶಾಲೆಗಳು. ಶಿಕ್ಷಣದ ಹೆಸರಿನಲ್ಲಿ ಸಾರ್ವಜನಿಕರ ಹಣವನ್ನು ಮತ್ತು ಸರ್ಕಾರದ ಹಣವನ್ನು ಹಗಲು ದರೋಡೆ ಮಾಡತಕ್ಕ ದರೋಡೆಕಾರರ ಒಂದು ದೊಡ್ಡ ಗುಂಪು ಇದೆ. ಇವರೇ ಸಿಂಹಪಾಲು ತೆಗೆದು ಕೊಳ್ಳುತ್ತಾರೆ. ದುಡ್ಡು ಹೊಡೆಯುವ ವಿಷಯಕ್ಕೆ ಜಾತಿ–ಗೀತಿ ಎಂಬುದೇನು ಇಲ್ಲ ; ಎಲ್ಲರೂ ಹೊಡೆಯುತ್ತಾರೆ. ಹೇಗೆ ನಡೆಯುತ್ತದೆಂಬುದಕ್ಕೆ ಹೇಳುತ್ತೇನೆ. ಇದರಲ್ಲಿ ಶಿಕ್ಷಣ ಇಲಾಖೆಯ ಅಧಿಕಾರಿಗಳು, ಕೇಸ್ ವರ್ಕರ್ಸ್, ಅಡಿಷನಲ್ ಡೈರೆಕ್ಟರ್, ಸೂಪರಿಂಟೆಂಡೆಂಟ್ಸ್ ಹೀಗೆ ಎಲ್ಲರೂ ಶಾಮೀಲಾಗಿ ಎಷ್ಟೆಷ್ಟು ಲಕ್ಷ ರೂಪಾಯಿಗಳನ್ನು ಹೊಡೆಯುತ್ತಾರೆಂಬುದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ಬೆಂಗಳೂರಿನ ಅಂಕಿ ಅಂಶಗಳನ್ನು ಮಾತ್ರ ನಾನು ಸಂಗ್ರಹ ಮಾಡಿದ್ದೇನೆ. ಸರಸ್ವತಿ ವಿದ್ಯಾನಿಕೇತನ ಎಂದು ಒಂದು ಶಿಕ್ಷಣ ಸಂಸ್ಥೆ ಇದೆ. ಅದರ ಕಾರ್ಯದರ್ಶಿ, (ಪ್ರೊಪ್ರೈಟರ್ ಎಂದು ಕೂಡ ಕರೆಯುತ್ತಾರೆ) ಶ್ರೀ ಸಿ. ಎಂ. ನಾಗರಾಜಯ್ಯ ಎಂಬುವವರು. ಅವರು ಡ್ರಿಲ್ ಟೀಚರ್ ಆಗಿದ್ದರು. ಅದಕ್ಕೆ ರಾಜೀನಾಮೆ ಕೊಟ್ಟು ೧೯೬೬—೬೭ರಲ್ಲಿ ಶಾಲೆಯನ್ನು ಶುರು ಮಾಡಿದರು. ಇವತ್ತಿನ ದಿವಸ ಅವರು ೧೪ ನರ್ಸರಿ ಶಾಲೆಗಳನ್ನೂ, ೨ ಪ್ರಾಥಮಿಕ ಶಾಲೆಗಳನ್ನೂ ಮತ್ತು ಒಂದು ಪ್ರೌಢ ಶಾಲೆಯನ್ನು ನಡೆಸುತ್ತಿದ್ದಾರೆ. ಇದೇ ಬೆಂಗಳೂರಿನಲ್ಲಿ ೧೬ ಬಿಲ್ಡಿಂಗ್‌ಗಳನ್ನು ಕೇವಲ ೫೦—೬೦ ರೂಪಾಯಿ ಬಾಡಿಗೆಗೆ ತೆಗೆದುಕೊಂಡಿದ್ದಾರೆ, ಮತ್ತು ಅವರಿಗೆ ೧೯೬೬ರಿಂದ ೩—೪ ಪಟ್ಟು ಗ್ರಾಂಟನ್ನು ಮಂಜೂರ್ಮಾಡಿ ಕೊಡಲಾಗುತ್ತಿದೆ. ಅವರ ಆಸ್ತಿ ಎಷ್ಟಿದೆ ಎಂದರೆ, ೬ ಸ್ವಂತ ಮನೆಗಳು ಬೆಂಗಳೂರಿನಲ್ಲಿವೆ, ೧೨ ಅಂಗಡಿಗಳು ಮತ್ತು ೬—೭ ಸೈಟುಗಳು ಇವೆ. ಆ ಸರಸ್ವತಿ ವಿದ್ಯಾನಿಕೇತನದ ಅಧ್ಯಕ್ಷರು ಯಾರೆಂದರೆ ಹಿಂದೆ ಶಿಕ್ಷಣ ಇಲಾಖೆಯಲ್ಲಿ ಸೂಪರಿಂಟೆಂಡೆಂಟ್ ಆಗಿದ್ದು ರಿಟೈರ್ ಆಗಿರುವವರು (ಅವರ ಹೆಸರು ಹೇಳುವುದಿಲ್ಲ). ಇನ್ನೊಬ್ಬರು ರಿಟೈರ್ ಆಗಿರತಕ್ಕ ಎ.ಇ.ಓ. ಈ ಶಾಲೆಯನ್ನು ನಿರ್ದೇಶನ ಮಾಡುತ್ತಾರೆ. ಇದರಲ್ಲಿ ಶಿಕ್ಷಣ ಇಲಾಖೆಯ ಕೈವಾಡ ಹೇಗಿದೆ ಎಂಬ ಬಗ್ಗೆ ವಿಧಾನ ಪರಿಷತ್ತಿನಲ್ಲಿ ೧೯೭೨-೭೩-೭೪ರಲ್ಲಿ ಆಪಾದನೆಗಳನ್ನು ಮಾಡಿ ಡಾಕ್ಯುಮೆಂಟ್‌ಗಳನ್ನು ಕೊಟ್ಟೆ. ಅಲ್ಲಿ ಎಷ್ಟು ಮುಂದುವರಿದಿದ್ದಾರೆಂದರೆ, ಅಲ್ಲಿನ ಒಬ್ಬ ಉಪಾಧ್ಯಾಯಿನಿಯನ್ನೇ, ಇವರ ವಿರುದ್ಧ ಅರ್ಜಿ ಕೊಟ್ಟಿದ್ದಾರೆಂದು ವಿಷ ಕೊಟ್ಟು ಕೊಂದರು. ಆ ಬಗ್ಗೆ ಕೂಡ ನಾನು ಆಪಾದನೆ ಮಾಡಿದ್ದೆ ; ತತ್ಸಂಬಂಧವಾಗಿ ಕ್ರಿಮಿನಲ್ ಕೇಸ್ ಕೂಡ ದಾಖಲಾಗಿದೆ ; ಪುನಃ ಅದು ಏನಾಯಿತೋ ಗೊತ್ತಿಲ್ಲ. ಆಗಿನ ಶಿಕ್ಷಣ ಮಂತ್ರಿಗಳಾಗಿದ್ದ ಶ್ರೀಮಾನ್ ಬದರಿನಾರಾಯಣ್‌ರವರಿಗೆ ವಿಧಾನ ಪರಿಷತ್ತಿನಲ್ಲಿ ಎಲ್ಲ ಅಂಕಿ ಅಂಶಗಳನ್ನು ಕೊಟ್ಟ ಮೇಲೆ ಉಗ್ರ ಕ್ರಮ ತಗೆದುಕೊಂಡು ಎಲ್ಲ ಶಾಲೆಗಳನ್ನು ಡೀರೆಕಗ್‌ನೈಸ್ ಮಾಡಿ ಬಂದ್ ಮಾಡಿದರು. ನಂತರ ಮಾನ್ಯ ಬದರಿನಾರಾಯಣ್‌ರವರು ಡೆಲ್ಲಿಗೆ ಹೋದರು, ನಾನು ಜೈಲಿಗೆ ಹೋದೆ. ೧೯೭೨-೭೩ರಲ್ಲಿ ಬಂದ್ ಆಗಿದ್ದ ಶಾಲೆಗಳಿಗೆ ೧೯೭೪ರಲ್ಲಿ ಗ್ರಾಂಟ್ ಸ್ಯಾಂಕ್ಷನ್ ಮಾಡಿ ೬ ಲಕ್ಷದ ೮೧ ಸಾವಿರ ರೂಪಾಯಿಗಳನು ಕೊಟ್ಟಿದ್ದಾರೆ. ಆ ಬಗ್ಗೆ ಮಾನ್ಯ ಸುಬ್ಬಯ್ಯ ಶೆಟ್ಟರಿಗೆ ಟೀಚರ್ಸ್ ಅಸೋಷಿಯೇಷನ್‌ನಿಂದ ಮನವಿ ಬಂದ ಮೇಲೆ ೩ ಲಕ್ಷ ರೂಪಾಯಿಗಳನ್ನು ತಡೆಹಿಡಿದರು ; ಉಳಿದ ೩ ಲಕ್ಷದ ೮೧ ಸಾವಿರ ರೂಪಾಯಿಗಳನ್ನು ಆ ಮನುಷ್ಯ ಹೊಡೆದುಕೊಂಡು ಹೋದ. ಇದನ್ನು ಮಂಜೂರು ಮಾಡಿದವರು ಯಾರು ? Who is that Officer ? He is your Additional Director of Public Instruction Sri Mallappa. I know the percentage of money he has taken for that. The Additional Director who has to control and safeguard the interest of this Education Department has hand in glove with the Manangement. I have got the all details... I have given notice......

ಛೇರ್ಮನ್‌ರವರು.—ಆದರೂ ಕೂಡ ಹೆಸರುಗಳನ್ನು ಹೇಳುವುದು ಬೇಡ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಅವರು ಹೇಳುವ ಯಾವ ಸದಸ್ಯರಿಗೂ ಈ ಮನೆಯಲ್ಲಿ ಡಿಫೆಂಡ್ ಮಾಡುವಷ್ಟು ಅವಕಾಶ ಇಲ್ಲ ; ಆದ್ದರಿಂದ, ಅಂಥವರ ಹೆಸರು ಹೇಳಿ ಅಪಾದನೆ ಮಾಡುವುದು ಸರಿಯಲ್ಲ.

ಶ್ರೀ ಮಳೂರು ಆನಂದರಾವ್.—ಈ ವಿಚಾರದಲ್ಲಿ ಯಾವ ಡೇಟ್‌ನಲ್ಲಿ ಆರ್ಡರ್ ಮಾಡಿದರು, ಹೇಗೆ ಮಾಡಿದರು ಎಂಬುದು ನನಗೆ ಗೊತ್ತಿದೆ. ಅವರಿಗೆ ಗ್ರಾಂಟನ್ನು ನಿಲ್ಲಿಸಬೇಕು ಎಂದು ಹೇಳಿದ್ದರೂ

ಕೂಡ ೬ ಲಕ್ಷ ರೂಪಾಯಿಗಳಷ್ಟು ಗ್ರ್ಯಾಂಟ್ ಕೊಟ್ಟಿದ್ದಾರೆ. ಇದನ್ನು ನಾವೆಲ್ಲ ಒಮ್ಮತವಾಗಿ ಸಪೋರ್ಟ್ ಮಾಡಬೇಕೋ ಅಥವಾ ಕಂಡೆಮ್ ಮಾಡಬೇಕೋ ಎಂಬುದನ್ನು ತಾವೇ ಹೇಳಿ. ಈ ಬಗ್ಗೆ ನಾನು ೧೦೦ ಉದಾಹರಣೆಗಳನ್ನು ಬೇಕಾದರೆ ಕೊಡಬಲ್ಲೆ.

೫-೩೦ ಪಿ.ಎಂ.

ಛೇರ್‌ಮನ್‌ರವರು.—ತಾವು ಈ ಮನೆಯ ಸದಸ್ಯರಲ್ಲದವರ ಮೇಲೆ ಇಲ್ಲಿ ಅಪಾದನೆ ಮಾಡಬೇಡಿ. ಆ ಸಂಸ್ಥೆಗಳ ಬಗ್ಗೆ ಹೇಳಿ.

SRI MALLUR ANANDA RAO.—The Addional Director of Public Instruction who is in charge of giving the grant has granted Rs. 6,81,000. ಆಗ ಇದರಲ್ಲಿ ೩ ಲಕ್ಷ ರೂಪಾಯಿಗಳಷ್ಟನ್ನು ಎಜುಕೇಷನ್ ಮಿನಿಸ್ಟರ್‌ರವರು ತಡೆ ಹಿಡಿದರು. ಇನ್ನು ೩ ಲಕ್ಷ ರೂಪಾಯಿಗಳನ್ನು ಹೊಡೆದಿರುವ ಅವರ ಹೆಸರುಗಳನ್ನು ಹೇಳಬಾರದೇ? ನಾನು ಅದನ್ನು ಹೇಳುತ್ತೇನೆ. ಈ ಬಗ್ಗೆ ನಾನು ನೋಟೀಸ್ ಕೊಟ್ಟಿದ್ದೇನೆ. ನೋಟೀಸ್ ಕೊಡದೇ ಹೇಳಲಿಲ್ಲ. The Education Minister is capable of defending if he desires to. If he can be placed under suspensior, let him be suspended. If my charges are disproved, I will resign.

MR. CHAIRMAN.—The hon. Member is making certain charges.

SRI MALLUR ANANDA RAO.—Sir, If my charges are not proved I will resign. ಇನ್ನು ಎರಡನೆಯದಾಗಿ ಕಮಲಾ ದೆಹರು ಮಕ್ಕಳ ವಿದ್ಯಾಮಂದಿರ ಎಂದು ಇದೆ. ನಮ್ಮ ಮಾನ್ಯ ಸದಸ್ಯರೆಲ್ಲರೂ ಇದನ್ನು ಗಮನವಿಟ್ಟು ಕೇಳಬೇಕು ನಮ್ಮ ಶಿಕ್ಷಣ ಇಲಾಖೆಯಲ್ಲಿ ಎಂತೆಂತಹ ಕತೆ ನಡೆಯುತ್ತದೆ ಎಂದು. ಈ ಮಕ್ಕಳ ವಿದ್ಯಾಮಂದಿರದ ಪ್ರೊಪ್ರೈಟರ್ ಹಿಂದೆ ಗುಬ್ಬಿ ಕಂಪನಿಯಲ್ಲಿ ಪರದೆಯನ್ನು ಎಳೆಯುತ್ತಿದ್ದರು.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಆನಂದರಾಯರು ಈಗಾಗಲೇ ೩೦ ನಿಮಿಷಗಳಷ್ಟು ಮಾತನಾಡಿದ್ದಾರೆ.

MR. CHAIRMAN.—It is not at all my intention to curb his speech. But while speaking let him touch upon all important points which he wants to raise.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಸ್ವಾಮಿ, ಮಾನ್ಯ ಆನಂದರಾಯರು ಒಬ್ಬರೇ ಮಾತನಾಡಲಿ. ಆ ಕಡೆಯ ಸದಸ್ಯರಿಗೆ ಕೊಡತಕ್ಕಂಥ ಸಮಯದಲ್ಲಿ ಕಡಿಮೆ ಮಾಡಿಕೊಳ್ಳಿ; ಇದಕ್ಕೆ ಆ ಕಡೆಯ ಸದಸ್ಯರ ಒಪ್ಪಿಗೆಯನ್ನು ತೆಗೆದುಕೊಳ್ಳಿ; ಏಕೆಂದರೆ ನಮ್ಮ ಕಡೆಯಲ್ಲಿ ಮಾತನಾಡುವವರು ಇದ್ದಾರೆ.

ಛೇರ್‌ಮನ್‌ರವರು.—ನೀವು ನಿಮ್ಮ ಕಡೆಯಲ್ಲಿ ಮಾತನಾಡತಕ್ಕಂಥವರ ಪಟ್ಟಿಯನ್ನು ಕೊಟ್ಟಿದ್ದೀರಲ್ಲ ಅವರಲ್ಲಿ ಒಬ್ಬರನ್ನು ನೀವು ಬಿಟ್ಟುಕೊಡಬೇಕಾಗುತ್ತದೆ.

ಶ್ರೀ ಮಳ್ಳೂರ್ ಆನಂದರಾವ್.—ನಾವು ಅದಕ್ಕೆ ಒಪ್ಪಿಕೊಂಡಿದ್ದೇವೆ. ಸ್ವಾಮಿ, ಬಸವನಗುಡಿಯಲ್ಲಿ ಈ ಕಮಲಾ ನೆಹರೂ ಮಕ್ಕಳ ವಿದ್ಯಾಮಂದಿರದ ಪ್ರೊಪ್ರೈಟರ್ ಆಗಿ ಶ್ರೀ ಶೇಷಗಿರಿರಾವ್ ಎನ್ನುವವರು ಇದ್ದಾರೆ. ಅವರು ಹಿಂದೆ ಗುಬ್ಬಿ ಕಂಪನಿಯಲ್ಲಿ ಪರದೆಯನ್ನು ಎಳೆಯುತ್ತಿದ್ದರು ಹಾಗೂ ಹಾರ್ಮೋನಿಯಂ ಬಾರಿಸುತ್ತಿದ್ದರು. ಅವರು ಆಗ ಇಲ್ಲಿಗೆ ಬಂದು ಒಂದು ಶಾಲೆಯನ್ನು ಪ್ರಾರಂಭ ಮಾಡಿದರು. ಇವತ್ತು ಅವರು ಬೆಂಗಳೂರಿನಲ್ಲಿ ೧೪ ಶಾಲೆಗಳನ್ನು ನಡೆಸುತ್ತಿದ್ದಾರೆ. ಇದರಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಮಾಡಿಕೊಂಡಿದ್ದಾರೆ; ಅವರಿಗೆ ಅನೇಕ ಮನೆಗಳು ಇವೆ; ಅಲ್ಲದೇ ಟ್ಯಾಕ್ಸಿಯನ್ನು ನಡೆಸುತ್ತಿದ್ದಾರೆ. ಅವರು ಅತ್ಯಾಚಾರ ಅನಾಚಾರಗಳನ್ನು ಮಾಡುತ್ತಿದ್ದಾರೆ.

ಶ್ರೀ ಟಿ. ಆರ್. ಶಾಮಣ್ಣ.—ಸ್ವಾಮಿ, ಅವರು ಅಷ್ಟೆಲ್ಲಾ ನಮ್ಮ ಕಡೆಯಲ್ಲಿ ಮಾಡಿಕೊಂಡಿಲ್ಲ,

ಶ್ರೀ ಮುಳ್ಳೂರ್ ಆನಂದರಾವ್.—ಸ್ವಾಮಿ, ಮಾನ್ಯ ಶಾಮಣ್ಣನವರು ಅಷ್ಟೆಲ್ಲಾ ಅವರು ಮಾಡಿಕೊಂಡಿಲ್ಲ ಎಂದು ಹೇಳಿದರು. ಅವರು ಇದರಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಮಾಡಿಕೊಂಡಿದ್ದಾರೆ. ಅದಕ್ಕೆ ಬೇಕಾದರೆ ನಾನು ಉದಾಹರಣೆಯನ್ನು ಕೊಡುತ್ತೇನೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಸ್ವಾಮಿ, ಮಾನ್ಯ ಆನಂದರಾಯರು, ಅವರು ಕೋಟ್ಯಾಂತರ ರೂಪಾಯಿಗಳನ್ನ ಮಾಡಿಕೊಂಡಿದ್ದಾರೆ ಎಂದು ಹೇಳುತ್ತಾರೆ. ಮಾನ್ಯ ಶಾಮಣ್ಣನವರು ಅವರು ಏನೂ ಮಾಡಿಕೊಂಡಿಲ್ಲ ಎಂದು ಹೇಳುತ್ತಿದ್ದಾರೆ. ಇದು ಹೇಗೆ?

ಛೇರ್‌ಮನ್‌ರವರು.—ಅವರು ಮಾನ್ಯ ಸುಬ್ಬಯ್ಯ ಶೆಟ್ಟರ ಕಾಲದಲ್ಲಿ ಏನನ್ನೂ ಮಾಡಲಿಲ್ಲ ಎಂದು ಹೇಳುತ್ತಿದ್ದಾರೆ. ಇವರು ಅವರು ಹೇಗೆ ದುಡ್ಡು ಮಾಡಿದ್ದಾರೆ ಎಂಬುದನ್ನು ಹೇಳುತ್ತಿದ್ದಾರೆ,

ಶ್ರೀ ಮುಳ್ಳೂರ್ ಆನಂದರಾವ್.—ಸ್ವಾಮಿ, ಜಯನಗರದಲ್ಲಿ ಅವರು ಒಂದು ಮನೆಯನ್ನು ಬಾಡಿಗೆಗೆ ತೆಗೆದುಕೊಂಡರು. ಮನೆ ನಂ. ೩೦೮, ೯ನೇ ಬ್ಲಾಕ್, ೮ನೇ ಕ್ರಾಸ್. ಜಯನಗರ—ಈ ಮನೆಯನ್ನು ಅಲ್ಲಿ ಶಾಲೆ ನಡೆಸುವುದಕ್ಕಾಗಿ ಬಾಡಿಗೆಗೆ ತೆಗೆದುಕೊಂಡರು. ಈ ಮನೆಯ ಓನರ್ ಯಾರೆಂದರೆ ಶ್ರೀ ಎಸ್. ಎಸ್. ತ್ರಿವೇದಿ ಎನ್ನುವವರು. ಇವರು ಎಚ್.ಎ.ಎಲ್‌ನ ರಿಟೈರ್ಡ್ ಆಫೀಸರ್. ಇದರಲ್ಲಿ ಸ್ಕೂಲ್‌ಗಾಗಿ ಹನ್ನೊಂದು ರೂಮುಗಳನ್ನು ಕಟ್ಟಿಸುವುದಕ್ಕಾಗಿ ಅವರು ಎಜುಕೇಷನ್ ಡಿಪಾರ್ಟ್‌ಮೆಂಟ್‌ಗೆ ಅರ್ಜಿಯನ್ನು ಹಾಕಿಕೊಂಡರು. ಎಜುಕೇಷನ್ ಡಿಪಾರ್ಟ್‌ಮೆಂಟ್ ನವರು ಒಂದೊಂದು ರೂಮಿಗೆ ೧೦೦೦ ರೂಪಾಯಿಗಳಂತೆ ೧೧ ಸಾವಿರ ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿದರು. ಆಮೇಲೆ ಅವರು ಏನು ಮಾಡಿದರು ಎಂದರೆ ಅವರು ಬಾಡಿಗೆ ತೆಗೆದುಕೊಂಡಂಥ ಮನೆಯಲ್ಲಿ ರೂಮುಗಳನ್ನು ಕಟ್ಟಿದ್ದೇವೆ ಎಂದು ರಿಕಾರ್ಡ್ಸ್ ಬಿಲ್ಡ್ ಅಪ್ ಮಾಡಿದರು. ಎಜುಕೇಷನ್ ಆಫೀಸರ್‌ಗಳು ಇದರಲ್ಲಿ ಶಾಮೀಲಾಗಿ ಹಣವನ್ನು ಸ್ಯಾಂಕ್ಷನ್ ಮಾಡಿದರು. ಆ ಬಿಲ್ಡಿಂಗ್‌ನಲ್ಲಿ ರೂಮುಗಳೇ ಇಲ್ಲ. ಬಾಡಿಗೆ ಮನೆಯನ್ನೇ ತೋರಿಸಿಬಿಟ್ಟು ಗ್ರ್ಯಾಂಟ್ ಸ್ಯಾಂಕ್ಷನ್ ಮಾಡಿಬಿಟ್ಟರು. ಗೌರ್ನಮೆಂಟ್ ಆರ್ಡರ್ ನಂ. ಇಡಿಎಲ್‌ಎಸ್‌ಜಿಎಬಿ ೩೦೬೮ ಸಿಎಲ್‌ಬಿ ೮೩ ೬೭–೬೮, ದಿನಾಂಕ ೧೭ನೇ ಏಪ್ರಿಲ್ ೧೯೬೮ರಲ್ಲಿ ಸ್ಯಾಂಕ್ಷನ್ ಮಾಡಿದರು. ಮನೆ ಓನರ್ ಬಾಡಿಗೆ ಕೇಳಿದಾಗ ಕೊಡುವುದಿಲ್ಲವೆಂದು ಅವರು ಹೇಳಿದರು. ಈ ವಿಷಯವನ್ನು ನಾನು ಹಿಂದೆ ವಿಧಾನ ಪರಿಷತ್ತಿನಲ್ಲಿ ಹೇಳಿದ್ದೇನೆ. ಈ ಬಗ್ಗೆ ಯಾರೂ ಅವರ ಮೇಲೆ ಕ್ರಮ ತೆಗೆದುಕೊಳ್ಳಲಿಲ್ಲ. ಅದೇ ಬಿಲ್ಡಿಂಗ್‌ನಲ್ಲಿ ಆ ವ್ಯಕ್ತಿ ಇವತ್ತಿಗೂ ಶಾಲೆಯನ್ನು ನಡೆಸುತ್ತಿದ್ದಾನೆ. ಈ ರೀತಿ ನಮ್ಮ ಶಿಕ್ಷಣ ಇಲಾಖೆಗೆ ಪಂಗನಾಮ ಹಾಕಿದ್ದಾನೆ. ಇದರ ಜೊತೆಗೆ ನಿಮ್ಮ ಅಡಿಷನಲ್ ಡೈರೆಕ್ಟರ್ ಶ್ರೀ ಮರಿಯಪ್ಪ ಎನ್ನುವ ಜವಾನನಿಗೆ ಆ ಸ್ಕೂಲ್‌ನಲ್ಲಿ ಅವನ ಸಂಸಾರ ಇರುವುದಕ್ಕೆ ಅವಕಾಶ ಮಾಡಿಕೊಟ್ಟು ದುಡ್ಡು ಹೊಡೆಯುತ್ತಿದ್ದಾರೆ. ಮಾನ್ಯ ಶ್ರೀ ಬದರೀ ನಾರಾಯಣ ರವರು ಇದ್ದಂಥ ಕಾಲದಲ್ಲಿ ಈ ವಿಚಾರ ವಿಜಿಲೆನ್ಸ್ ಕಮಿಷನ್‌ರವರ ಗಮನಕ್ಕೆ ಹೋಯಿತು. ಇದು ಅವರ ಗಮನಕ್ಕೆ ಹೋದಾಗ ಸಂಬಂಧಪಟ್ಟ ಫೈಲ್ ಮಿಸ್ಸಿಂಗ್ ಆಯಿತು. Officer is present, buiding is there: man running the school is there. File is missing. See how efficient your Education Department is, ಇದರಲ್ಲಿ ದುಡ್ಡು ಹೋಯಿತು, ಫೈಲ್ ಮಿಸ್ಸಿಂಗ್ ಆಯಿತು; ಮನೆ ಓನರ್‌ಗೆ ಬಾಡಿಗೆ ಕೊಡದೇ ಆ ವ್ಯಕ್ತಿ ಸ್ಕೂಲ್ ನಡೆಸುತ್ತಿದ್ದಾನೆ. ಅದೇ ಸ್ಕೂಲ್‌ನಲ್ಲಿ ನಡೆದಂಥ ಇನ್ನೊಂದು ಉದಾಹರಣೆಯನ್ನು ಹೇಳುತ್ತೇನೆ; ಇದರಲ್ಲಿ ನಿಮ್ಮ ಶಿಕ್ಷಣ ಇಲಾಖೆಯ ಅಧಿಕಾರಿಗಳು ಹೇಗೆ ಶಾಮೀಲ್ ಆಗಿದ್ದಾರೆ ಎಂಬುದನ್ನು ನೀವು ತಿಳಿದುಕೊಳ್ಳಿ, ಅಲ್ಲಿ ೪ ಜನ ಟೀಚರ್‌ಗಳನ್ನು ಅಪಾಯಿಂಟ್‌ಮೆಂಟ್ ಮಾಡಿಕೊಳ್ಳಬೇಕು ಎಂದು ಹೇಳಿ ೧೪ನೇ ಫೆಬ್ರವರಿ ೧೯೭೦ರಲ್ಲಿ ಅಡ್ವರ್‌ಟೈಸ್‌ಮೆಂಟ್ ಮಾಡಿದರು. ೧೪ನೇ ತಾರೀಖಿಗೆ ಅಡ್ವರ್‌ಟೈಸ್‌ಮೆಂಟ್ ಮಾಡಿ ಅದಾದ ೩ನೇ ದಿನಕ್ಕೆ ೪ ಜನ ಟೀಚರ್‌ಗಳನ್ನು ಅಪಾಯಿಂಟ್ ಮಾಡಿಕೊಂಡರು. ಅದನ್ನು ಅಪ್ರೂವಲ್‌ಗಾಗಿ ಅಡಿಷನಲ್ ಡೈರೆಕ್ಟರ್‌ರವರಿಗೆ ಕಳಿಸಿದರು. ಅವರು ಗೌರ್ನಮೆಂಟ್ ಆರ್ಡರ್ ನಂ. ೧೪, ಇಡಿಎಲ್‌ಎಸ್‌ಜಿಬಿ ೭೪೨೬೮, ಎಪಿಟಿ ೭೭–೭೮, ದಿನಾಂಕ ೧೨ನೇ ಜನವರಿ ೧೯೭೮ರಲ್ಲಿ ಸುಮಾರು ೮ ತಿಂಗಳ ಹಿಂದಿನಿಂದ ಅದಕ್ಕೆ ಅಪ್ರೂವಲ್ ಕೊಟ್ಟರು. ಈ ಒಂದು ಸಣ್ಣ ಇನ್‌ಸಿಡೆಂಟ್‌ನಲ್ಲಿ ಎಷ್ಟು ಹಣ ಇನ್‌ವಾಲ್ವ್ ಆಗಿದೆ ಎಂದರೆ ೨೦,೨೫೦ ರೂಪಾಯಿಗಳು ಇನ್‌ವಾಲ್ ಆಗಿದೆ. Additional Director is directly involved in it. He has knocked off the money. ಆ ಶಾಲೆಯಲ್ಲಿ ಮೇಷ್ಟರುಗಳಿಗೆ ದುಡ್ಡನ್ನು ಕೊಟ್ಟಿಲ್ಲ. !How did he approve that payment ? What is the share amount he has got ? ಈ ಶಾಲೆಯ

ಮೇಲೆ ಬೇಕಾದಷ್ಟು ಗಲಾಟೆಯಾಗಿ ಟಿ.ಸಿ.ಎಚ್.ನ್ನು ಡಿರೆಕಾಗ್ನೈಸ್ ಮಾಡಿದರು. ಈ ಘಟನೆ ಮಾನ್ಯ ಸುಬ್ಬಯ್ಯ ಶೆಟ್ಟಿಯವರಿಗೂ ಗೊತ್ತು. ಅಕ್ರಮವೆಂದು ಡಿರೆಕಾಗ್ನೈಸ್ ಮಾಡಿದ ಮೇಲೆ, ಸೆಕ್ರೆಟರಿಯೇಟ್ ಮಟ್ಟದಲ್ಲಿ ಪ್ರಭಾವ ಬೀರಿ, ಡಿರೆಕಾಗ್ನೈಸ್‌ಗೆ ಸ್ಟೇ ಮಾಡಿಸಿದರು. ಆತ ಅಷ್ಟು ಪ್ರಭಾವವುಳ್ಳ ಮನುಷ್ಯ. ಆತನು ಎಲ್ಲರ ಮೇಲೂ ಹಿಡಿತವಿಟ್ಟಿದ್ದಾನೆ, ಹಣ ಹೊಡೆಯುತ್ತಿದ್ದಾನೆ. But you have helped him over the matter.

ಅರುಣೋದಯ ಪ್ರಾಥಮಿಕ ಶಾಲೆಯೊಂದಿದೆ. ಇದರ ವ್ಯವಸ್ಥಾಪಕರು : ಸಿ. ಎಸ್ ಶಾಂತಕುಮಾರ್. ಆ ಶಾಲೆಗೆ ಇವರೇ ಕಾರ್ಯದರ್ಶಿ, ಅಧ್ಯಕ್ಷ ಮತ್ತು ಮುಖ್ಯೋಪಾಧ್ಯಾಯ ! ಇವರ ಮೇಲೆ ಬೇಕಾದಷ್ಟು ಅಪಾದನೆಗಳಿದ್ದುದರಿಂದ, ಆ ಶಾಲೆಗೆ ಸರ್ಕಾರದ ಅನುದಾನವನ್ನು ನಿಲ್ಲಿಸಲಾಗಿತ್ತು. ಆದರೆ, ಅಡಿಷನಲ್ ಡೈರೆಕ್ಟರ್ ಅವರು ಪುನಃ ಅನುದಾನವನ್ನು ಮಂಜೂರು ಮಾಡಿದರು. ಹೇಗೆ ಮಂಜೂರು ಮಾಡಿದರು ? ಎಷ್ಟು ವಿಚಿತ್ರವಾಗಿ ನಡೆಯುತ್ತಿದೆ ಶಿಕ್ಷಣ ಇಲಾಖೆ! ಈ ಶಾಲೆಯಲ್ಲಿ ರಾಮಯ್ಯ ಎನ್ನುವ ಒಬ್ಬ ಉಪಾಧ್ಯಾಯ ೧ನೇ ಮಾರ್ಚಿ ೧೯೭೭ರಿಂದ ಕೆಲಸ ಮಾಡುತ್ತಿದ್ದ. ಇವನ ಸೇವೆಯನ್ನು ಒಪ್ಪಿಗೆಗಾಗಿ ಇಲಾಖೆಗೆ ಕಳುಹಿಸಿದಾಗ, ಇಲಾಖೆಯವರು ಒಪ್ಪಿಗೆ ಕೊಡಲಿಲ್ಲ. ಹಿಂದಕ್ಕೆ ಹಾಗೇ ಕಳುಹಿಸಿದರು. ಆದರೆ ಶಾಲೆಯ ಪ್ರೊಪ್ರೈಟರ್ ಅವರ ಒಬ್ಬ ತಂಗಿ ಮತ್ತು ಒಬ್ಬ ಅಕ್ಕನಿಗೆ—ಅವರು ಕೆಲಸವೇ ಮಾಡದಿದ್ದರೂ ಇಲಾಖೆಯವರು ಒಪ್ಪಿಗೆ ಕೊಟ್ಟುಬಿಟ್ಟರು. ಒಪ್ಪಿಗೆ ಕೊಟ್ಟವರು ಅಡಿಷನಲ್ ಡೈರೆಕ್ಟರ್ ಫಾರ್ ಪ್ರೈಮರಿ ಎಜುಕೇಷನ್. ಆದರೆ ನಿಜವಾದ ಉಪಾಧ್ಯಾಯ ನೀಡಿದ ಅರ್ಜಿ ನನ್ನಲ್ಲಿದೆ. ಯಾರು ಕೆಲಸ ಮಾಡಿದ್ದಾರೆ ಅವರಿಗೆ ಒಪ್ಪಿಗೆ ಕೊಟ್ಟಿಲ್ಲ, ಆದರೆ ಸುಳ್ಳು ಉಪಾಧ್ಯಾಯರಿಗೆ, ಶಾಲೆಗೆ ಹೋಗದ ಉಪಾಧ್ಯಾಯರಿಗೆ ೧ನೇ ಜೂನ್ ೧೯೭೭ರಲ್ಲಿ ಅನುದಾನದ ಸಮೇತ ಒಪ್ಪಿಗೆ ನೀಡಿದ್ದಾರೆ. ಇದಕ್ಕೆ ಕಾರಣವೇನು ? ದೇವರಿಗೆ ಗೊತ್ತು !

ಇನ್ನೊಂದು ಶಾಲೆ. ಮಾನ್ಯ ಶಾಮಣ್ಣನವರು ಕೋಪ ಮಾಡಿಕೊಳ್ಳಬಾರದು. ಅದರ ಹೆಸರು ವಿಜಯ ಪ್ರಾಥಮಿಕ ಶಾಲೆ. ಇದು ಕೆಂಪೇಗೌಡ ನಗರದಲ್ಲಿದೆ. ಇದರ ಪ್ರೊಪ್ರೈಟರ್ ಕೆ. ನಾರಾಯಣಸ್ವಾಮಿ. ಇವರು ಸ್ವರಾಜ್ಯ ಪಕ್ಷದ ಸಂಸ್ಥಾಪಕರಲ್ಲೊಬ್ಬರು. ಇವರದ್ದು ಹತ್ತು ಶಾಲೆಗಳಿವೆ. ಅವುಗಳಲ್ಲ ನಾಲ್ಕನ್ನು ಡೀ-ರಿಕಗ್ನೈಸ್ ಮಾಡಿದ್ದಾರೆ. ಇವರ ಶಾಲೆಗಳಲ್ಲಿ ೧೩ ಜನ ಉಪಾಧ್ಯಾಯರುಗಳಿದ್ದಾರೆ. ಇವರಲ್ಲಿ ಒಂಬತ್ತು ಜನರು ಸುಳ್ಳು ಉಪಾಧ್ಯಾಯರು. ಇವರು ಅಸ್ತಿತ್ವದಲ್ಲೇ ಇಲ್ಲ. ಆದರೆ, ೧೯೭೮ರಿಂದಲೂ ಅವರ ಹೆಸರಿನಲ್ಲಿ ಅನುದಾನ ಪಡೆಯಲಾಗಿದೆ. ಈ ಬಗ್ಗೆ ಕಾಗದ ಬರೆದು, ಎಲ್ಲಾ ಆಯಿತು. ಏನೂ ಕ್ರಮ ತೆಗೆದುಕೊಳ್ಳಲಿಲ್ಲ. ಯಾರು ಯಾರು ಸುಳ್ಳು ಉಪಾಧ್ಯಾಯರೆಂಬುದನ್ನು ನೋಡಿ ಸ್ವಾಮಿ, ರಿಜಿಸ್ಟರ್‌ನಲ್ಲಿ ಎಲ್ಲಾ ಇದೆ. (ರಿಜಿಸ್ಟರನ್ನು ಪ್ರದರ್ಶಿಸುತ್ತಾ) ನಿಮಗೆ ಒರಿಜಿನಲ್ ರಿಜಿಸ್ಟರ್ ಬೇಕಾದರೆ ಕೊಡುತ್ತೇನೆ, ನೋಡಿ. Your Inspsctors have gone to that school and signed those registers.

ಶ್ರೀ ಟಿ. ಆರ್. ಶಾಮಣ್ಣ.—ರಿಜಿಸ್ಟರ್ ನಿಮ್ಮ ಬಳಿಗೆಹೇಗೆ ಬಂತು ?

ಶ್ರೀ ಮಳ್ಳೂರು ಆನಂದರಾವ್.—ಹೇಗೋ ಬರುತ್ತದೆ. ಉದಾಹರಣೆ : ಕಮಲಮ್ಮ, ಪದ್ಮಾವತಿ...

ಶ್ರೀ ಬಿ. ಭಾಸ್ಕರಶೆಟ್ಟಿ.—ಮಾನ್ಯ ಆನಂದರಾಯರು ಒರಿಜಿನಲ್ ದಾಖಲೆಗಳಿಗೆ ಹೇಗೆ ಕೈ ಇಟ್ಟರೆನ್ನುವ ಅನುಮಾನ ಬರುತ್ತಿದೆ !

ಶ್ರೀ ಮಳ್ಳೂರು ಆನಂದರಾವ್.—ನನಗೆ ಹೇಗೆ ದಾಖಲೆಗಳು ಬರುತ್ತವೆಂದು ಮಾನ್ಯ ಭಾಸ್ಕರ ಶೆಟ್ಟಿಯವರಿಗೂ ಗೊತ್ತಿದೆ. ಹದಿಮೂರು ಜನ ಕೃತಕ ಉಪಾಧ್ಯಾಯರುಗಳಿಗೆ ತಿಂಗಳಿಗೆ ಎಷ್ಟು ಸಂಬಳವೆಷ್ಟು ? ಮತ್ತೆ ಒಂದು ವರ್ಷಕ್ಕೆ ಎಷ್ಟಾಗುತ್ತದೆ ? ಹಾಗೂ ೧೯೭೮ ರಿಂದ ಆ ಪ್ರಮಾಣದಲ್ಲಿ ೧೯೭೯ ರವರೆಗೂ ಎಷ್ಟಾಗುತ್ತದೆ ಎನ್ನುವುದನ್ನು ಲೆಕ್ಕ ಹಾಕಿ ; ತನಿಖೆ ಮಾಡಿ ಇಲಾಖೆಯ ಅಧಿಕಾರಿ ಸೆಪ್ಟೆಂಬರ್ ೨೭ನೇ ತಾರೀಖಿನಂದು ಚೆಕ್ ಮಾಡಿದ್ದಾನೆ. ನೋಡಲಾಗಿದೆ ಎಂದು ಬರೆದು ರುಜು ಮಾಡಿ ಹೋಗಿದ್ದಾನೆ.... ಆಮೇಲೆ ೨೮ನೇ ತಾರೀಖು ಎಲ್ಲಾ ಉಪಾಧ್ಯಾಯರೂ ರಾಜೀನಾಮೆ ಕೊಟ್ಟುಬಿಟ್ಟರು. ಏಕೆಂದರೆ, ಅಧಿಕಾರಿಗಳು ಬರುತ್ತಾರೆಂದು ! He is one of the big guns. ಇದಕ್ಕೂ ಮಾನ್ಯ ಶಾಮಣ್ಣನವರಿಗೂ ಸಂಬಂಧವಿಲ್ಲ. ಇದೆಲ್ಲ ಆದಮೇಲೆ ಶಾಮಣ್ಣನವರನ್ನು ಅಧ್ಯಕ್ಷರನ್ನಾಗಿ ಮಾಡಿಕೊಂಡರ

ಬೇಕು. ಏಕೆಂದರೆ, ಶಾಮಣ್ಣನವರನ್ನು ಯಾರಾದರೂ ಬಂದು ಅಧ್ಯಕ್ಷರಾಗಬೇಕು ಎಂದು ಕೇಳಿಕೊಂಡ ಕೂಡಲೇ 'ಹೂ'' ಅಂದುಬಿಡುತ್ತಾರೆ! ಇದನ್ನೆಲ್ಲ ಮಾಡುವುದಕ್ಕೆ ಯಾರು ಸಲಹೆ ಮಾಡುತ್ತಿದ್ದಾರೆ ಗೊತ್ತೆ? ನೇರವಾಗಿ ಹೋಗಿ ಬೆಳಿಗ್ಗೆಯೇ ಅತನನ್ನು ಬಂಧಿಸಬಹುದು. ಶಿಕ್ಷೆ ವಿಧಿಸಬಹುದು. ಕಂಬಯ್ಯ ಎಂದು ಅವನ ಹೆಸರು. ಈತ ಸರ್ಕಾರಿ ಶಾಲೆಯೊಂದರ ಮುಖ್ಯೋಪಾಧ್ಯಾಯ ಈ ಶಾಲೆಗೆ ಕಾರ್ಯದರ್ಶಿ ರಾಮಸ್ವಾಮಿ ಎಂದು. ಆದರೆ, ಆ ವ್ಯಕ್ತಿ ಅಲ್ಲಿ ಇಲ್ಲವೇ ಇಲ್ಲ. ಈ ಕಂಬಯ್ಯ ರಾಮಸ್ವಾಮಿ ಹೆಸರಿನಲ್ಲಿ ರುಜು ಮಾಡುತ್ತಾನೆ- ಕಾರ್ಯದರ್ಶಿ ಅಂತ! ಇದೊಂದು ಫೋರ್ಜರಿ ಪ್ರಕರಣ. ನೀವು ನಾಳೆಯೇ ಅವನನ್ನು ಬಂಧಿಸಬಹುದು. ಡಿ.ಡಿ.ಪಿ ಐ. ರಾಮಕೃಷ್ಣ ಇವರಿಗೆಲ್ಲ. ಸಲಹೆಗಾರ He is the brain behind all these things. ಈಗ ನಾರಾಯಣಸ್ವಾಮಿ ಅವರ ಸಹೋದರಿ ಶಾಲೆಯ ಮುಖ್ಯೋಪಾಧ್ಯಾಯಿನಿಯಾಗಿದ್ದಾರೆ. ಆದರೆ ಅವರಿಗೆ ಅರ್ಹತೆ ಇಲ್ಲ. ಇದೆಲ್ಲಾ ಆಗಿ ಈ ಶಾಲೆಯ ವಿಚಾರ ಜಾಗೃತ ಆಯೋಗಕ್ಕೆ ಹೋಯಿತು. ಆಗ ಈ ಶಾಲೆಗೆ ಸಂಬಂಧಪಟ್ಟ ಕಡತವೇ ನಾಪತ್ತೆ! ಕಡತವನ್ನು ಗೆದ್ದಲು ತಿಂದಿತೋ ಅಥವಾ ಇನ್ನೇನು ತಿಂದಿತೋ ನನಗೆ ಗೊತ್ತಿಲ್ಲ. ಈ ಪ್ರಕರಣದಲ್ಲೂ ಇಲಾಖೆಯ ಆಡಿಷನಲ್ ಡೈರೆಕ್ಟರ್ ಅವರು ಷಾಮೀಲಾಗಿದ್ದಾರೆ. He who has sanctioned against the advice of the A.E.O.

ಸ್ವಾಮಿ, ಇನ್ನೊಂದು ಶಾಲೆ ಇದೆ. ಅದರ ಹೆಸರು ಸತ್ಯದೇವ ಕಾನ್ವೆಂಟ್ ಸ್ಕೂಲ್ ಅಂತ. ಇದು ನನ್ನ ಕ್ಷೇತ್ರದಲ್ಲೇ ಇದೆ. ಇದರ ಕಾರ್ಯದರ್ಶಿ ಬೋರಯ್ಯನವರು ಅಂತ. ಇವರು ಸರ್ಕಾರಿ ಶಾಲೆಯೊಂದರ ಮುಖ್ಯೋಪಾಧ್ಯಾಯರು. ಶಾಲೆಯ ಹೆಸರನ್ನು ಮಾತ್ರ ಬಹಳ ಸುಂದರವಾಗಿ ಇಡಲಾಗಿದೆ. ಇನ್ನೊಂದು ಲೈಟ್ ಆಫ್ ಏಷಿಯಾ ಸ್ಕೂಲ್ ಅಂತ. ಇದರಲ್ಲಿ ಮೂರು ಜನ ಕೃತಕ ಉಪಾಧ್ಯಾಯರಿದ್ದಾರೆ. ಆ ಶಾಲೆಯಲ್ಲಿ ಸುಮಿತ್ರಾ ಎನ್ನುವ ಮಹಿಳೆಯೊಬ್ಬಳಿಗೆ ೬೦ ರೂಪಾಯಿ ಸಂಬಳ ಕೊಡುತ್ತಿದ್ದರು ; ಆದರೆ ! ಆದರೆ ರುಜು ಹಾಕುವವರು ಬೇರೆ

ಒಬ್ಬ ಸದಸ್ಯರು .—ಯಾವ ಸುಮಿತ್ರಾ ಸ್ವಾಮಿ ?

ಮುಳ್ಳೂರು ಆನಂದರಾವ್ .—ಸುಮಿತ್ರಾ ದೇಸಾಯಿ ಅಲ್ಲ! ಬರೀ ಸುಮಿತ್ರಾ ಅಷ್ಟೆ. ಈಕೆಯ ಪ್ರಕರಣವೇ ಬೇರೆ. ಈಕೆ ತನ್ನ ಮಾರ್ಕ್ಸ್ ಕಾರ್ಡ್‌ನ್ನು ಕೇಳಿದಾಗ, ಶಾಲೆಯವರು. ಅನುದಾನ ಕೊಡಲಿ, ಅನುದಾನ ಬಂದಮೇಲೆ ನಿನ್ನ ಮಾರ್ಕ್ಸ್ ಕಾರ್ಡ್ ತೆಗೆದುಕೊಂಡು ಮನೆಗೆ ಹೋಗಮ್ಮ ಎಂದು ಹೇಳುತ್ತಿದ್ದಾರೆ. ಇದೇ ಶಾಲೆಯಲ್ಲಿ ಸುಮಿತ್ರಾ ಎನ್ನುವವರು ೧೯೭೭ ರಲ್ಲಿ ನೇಮಕವಾಗಿ ಕೆಲಸ ಮಾಡುತ್ತಿದ್ದಾರೆ. ಈಕೆಯ ಕೈಯಿಂದ ೧೯೭೦ ರಿಂದ ಏಳು ವರ್ಷಗಳವರೆಗಾಗುವಷ್ಟು ಸಹಿಯನ್ನು ತೆಗೆದುಕೊಂಡಿದ್ದಾರೆ. ಅವಳಿಗೆ ೫೦ ರೂಪಾಯಿ ಸಂಬಳ ಕೊಡುತ್ತಿದ್ದಾರೆ. ಅದಕ್ಕೆ ಸಂಬಂಧಪಟ್ಟ ರಿಜಿಸ್ಟರ್ ಕೂಡ ಇಲ್ಲಿದೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ಸ್ವಾಮಿ, ಈ ಕಡೆಯಿಂದ ನಾಳೆ ಊರಿಗೆ ಹೋಗುವವರು ಬಹಳ ಮಂದಿ ಇದ್ದಾರೆ ; ಮಾನ್ಯ ಸದಸ್ಯರು ಮಾತನಾಡಲಿಕ್ಕೆ ಪ್ರಾರಂಭ ಮಾಡಿ ಆಗಲೇ ಐವತ್ತು ನಿಮಿಷಗಳಾಯಿತು.

ಶ್ರೀ ಮುಳ್ಳೂರು ಆನಂದರಾವ್.— ಈ ಸದನಕ್ಕೆ ಎಷ್ಟೆಷ್ಟು ಲಕ್ಷ ರೂಪಾಯಿಗಳು ಸೋರಿಹೋಗುತ್ತದೆಂಬುದು ಗೊತ್ತಾಗಬೇಕು. ಜನಗಳಿಗೆ ಗೊತ್ತಾಗಬೇಕು. ಇಲ್ಲಿ ಇರತಕ್ಕ ಪ್ರತಿನಿಧಿಗಳಿಗೆ ಗೊತ್ತಾಗಬೇಕು. ನಾವು ಮಂಜೂರು ಮಾಡಿಕೊಡತಕ್ಕ ಹಣ ಹೇಗೆ ಖರ್ಚಾಗುತ್ತದೆಂಬುದು ತಿಳಿಯಬೇಕು ಸ್ವಾಮಿ, ವಿನೋಭಾ ನಗರದಲ್ಲಿ ಸಿಟಿ ಹರಿಜನ ಸೇವಕ ಸಂಘ ಅಂಥ ಇದೆ ಮಾನ್ಯ ಸಾಲಪ್ಪನವರು ಅದರ ಅಧ್ಯಕ್ಷರು : ಅಲ್ಲಿ ಇಬ್ಬರು ಹರಿಜನ ಉಪಾಧ್ಯಾಯರುಗಳಿಗೆ ೬ ತಿಂಗಳಿನಿಂದ ಸಂಬಳ ಇಲ್ಲ : ಡಿಪಾರ್ಟ್‌ಮೆಂಟಿನವರು ರಿಮ್ಯಾಂಡರ್ಸ್ ಮೇಲೆ ರಿಮ್ಯಾಂಡರ್ ಬರೆದರೂ ಉತ್ತರ ಕೊಟ್ಟಿಲ್ಲ : ಕಳೆದ ಮೂರು ವರ್ಷಗಳಿಂದ ಉಪಾಧ್ಯಾಯರುಗಳ ಪ್ರೊಪೋಸಲ್ ಕಳುಹಿಸಿಲ್ಲ ! ಏತಕ್ಕೆ ಕಳುಹಿಸಿಲ್ಲ ಅಂದರೆ ಪ್ರತಿಯೊಬ್ಬ ಟೀಚರ್ಸ್ ಪ್ರತಿ ತಿಂಗಳು ೬೦ ರೂಪಾಯಿಗಳು ಮಾಮೂಲು ಕೊಡಬೇಕು. ಅದನ್ನು ಮ್ಯಾನೇಜ್‌ಮೆಂಟಿನವರಿಗೆ ಮತ್ತು ಪ್ರೊಪ್ರೈಟರಿಗೆ ಕೊಟ್ಟರೆ ಅವರು ಅಪ್ರೂವಲ್‌ಗೆ ಕಳುಹಿಸುತ್ತಾರೆ. ಹರಿಜನ ಉಪಾಧ್ಯಯರುಗಳಿಗೆ ಆಗಿರತಕ್ಕ ಗತಿ ಇದು ; ಸ್ವಾಮಿ, ತಾವು ಅಪ್ಪಣೆ ಕೊಡಿಸಿದರೆ, ಇಲ್ಲಿಯೇ ತಂದು ಅವರನ್ನು ನಿಲ್ಲಿಸಿ : ಅವರ ಬಾಯಿಂದಲೇ ಅಲ್ಲಿ ಏನೇನು ನಡೆಯುತ್ತದೆ ಎಂಬುದನ್ನು ಹೇಳಿಸುತ್ತೇನೆ. ೭೬ ರಿಂದ ಸ್ಟಬ್ಲಂಡ್‌ಫಂಡ್ ಅಂತ ಕಲೆಕ್ಟ ಮಾಡಿ ಟೀಚರ್ಸ್ ಕಟ್ಟಿದ್ದಾರೆ.

ಇನ್ನು ಎರಡು ಉದಾಹರಣೆಗಳನ್ನು ಹೇಳುತ್ತೇನೆ ! ಸವಂತಾವಾದ ನರ್ಸರಿಸ್ಕೂಲ್ ಗುಟ್ಟೆಪಾಳ್ಯ ಲಕ್ಷ್ಮಿ ನರಸಿಂಹಯ್ಯನವರ ಅದರ ಅಧ್ಯಕ್ಷರು. ಇವರ ೩–೪ ಸ್ಕೂಲುಗಳನ್ನು ನಡೆಸುತ್ತಿದ್ದಾರೆ. ಇವರು ಸ್ಕೂಲುಗಳು ಹರಿಜನರ ಕೇರಿಯಲ್ಲಿವೆ ! ಒಂದೊಂದು ಮಗುವಿನಿಂದ ೪ ರೂಪಾಯಿ ಶುಲ್ಕವನ್ನು ವಸೂಲು ಮಾಡುತ್ತಾರೆ. ೫೨೦ ಮಕ್ಕಳು ಇರತಕ್ಕ ಒಂದು ಸ್ಕೂಲು ಇದೆ ! ಸ್ವಾಮಿ, ಇವರು ಕಾರ್ಪೊರೇಷನ್ನಿನವರು ಹಾಲು ಮಾರುವುದಕ್ಕೆ ಕಟ್ಟಿಸಿರತಕ್ಕ ಮಿಲ್ಕ್ ಬೂತ್‌ನ್ನು ಅಕ್ವೈರ್ ಮಾಡಿಕೊಂಡು ಅಲ್ಲಿ ಶಾಲೆಗಳನ್ನು ನಡೆಸುತ್ತಿದ್ದಾರೆ ! ಮೂರು ರೂಮು ಇದೆ ! ೫೨೦ ಮಕ್ಕಳನ್ನು ಆ ಮೂರು ರೂಮಿನಲ್ಲಿ ಕೂಡಿಹಾಕಿದ್ದಾರೆ ! ಕೂಲಿ ಮಾಡುವವರ ಹಾಗೂ ಜಾಡಮಾಲಿಗಳ ಮಕ್ಕಳು ಇರತಕ್ಕ ಶಾಲೆಗಳು ಇವು. ಅನುದಾನ ಪಡೆಯತಕ್ಕ ಶಾಲೆಗಳು ಇವು ? ಕಾರ್ಪೊರೇಷನ್ ಅಪ್ಪಣೆ ಇಲ್ಲದೆ ಬಿಲ್ಡಿಂಗ್ ತೆಗೆದುಕೊಂಡು ಅಧಿಕಾರಿಗಳಿಗೆ ಹೆದುರಿಸುತ್ತಿದ್ದಾರೆ.

ಇನ್ನೊಂದು ಇದೆ ಕಲ್ಬುರ್ಗಿ-ವಿದ್ಯಾಶಾಲಾ ಎಂದು ೧೦ ಸ್ಕೂಲುಗಳು ಇವೆ. ಇವರು ಸ್ಕೂಲುಗಳು ಸಾಲದು ಎಂದು ಸಿನಿಮಾ ಪ್ರೊಡ್ಯೂಸರ್ ಬೇರೆ ಆಗಿದ್ದಾರೆ. ಆಕ್ಸ್‌ಫರ್ಡ ಇಂಗ್ಲೀಷ್ ಸ್ಕೂಲುಗಳು ಅಂಥ ಹೆಸರಿಟ್ಟಿದ್ದಾರೆ. ಇವರ ಪ್ರತಿ ತಿಂಗಳ ಒಟ್ಟು ಆದಾಯ ೭೫,೦೦೦ರೂಪಾಯಿಗಳು. ನನ್ನ ಹತ್ತಿರ ರಶೀತಿ ಇವೆ ! ಸುಮಾರು ೩,೦೦೦ ಮಕ್ಕಳು ಇದ್ದಾರೆ ಒಂದನೇ ತರಗತಿಯ ಪ್ರತಿ ಮಗವಿಗೆ ೧೧ ರೂಪಾಯಿ ಶುಲ್ಕ ವಸೂಲಿ ಮಾಡುತ್ತಿದ್ದಾರೆ. ಇಂಥಾದ್ದು ಬೇಕಾದಷ್ಟು ಪ್ರಕರಣಗಳು ಇವೆ ! ಆದರೂ ಕ್ರಮ ಏತಕ್ಕೆ ತೆಗೆದುಕೊಳ್ಳಲಿಲ್ಲ.

ಸ್ವಾಮಿ ವಿವೇಕಾನಂದ ಸ್ಕೂಲ್ ಅಂತ ಇದೆ ! ಇದರ ಅಧ್ಯಕ್ಷರೂ ಸಿನಿಮಾ ತೆಗೆದಿದ್ದಾರೆ. ಈ ಶಾಲೆಗೆ ೭೩-೭೪ ರಿಂದ ೭೯ವರೆಗೆ ಗ್ರ್ಯಾಂಟ್ ಸ್ಯಾಂಕ್ಷನ್ ಮಾಡಿದ್ದಾರೆ. ವಿತ್ ರೆಟ್ರೊಸ್ಪೆಕ್ಟೀವ್ ಎಫೆಕ್ಟೀವ್ ಆಗಿ ಕೊಡುವುದಕ್ಕೆ ಯಾರು ಸಿಫಾರಸ್ಸು ಮಾಡಿದರೋ ಗೊತ್ತಿಲ್ಲ. ಸ್ವಾಮಿ, ಇನ್ನೊಂದು ಸ್ಕೂಲು ಇದೆ ! ಈ ಸ್ಕೂಲು ಹೆಸರು ಹೇಳದೇ ಇದ್ದರೆ ನನಗೆ ಸಮಾಧಾನ ಇಲ್ಲ. ‘‘ಕಾಂಗ್ರೆಸ್ ವರ್ಕರ್ಸ್ ಯೂನಿಯನ್ ಪ್ರೈಮರಿ ಸ್ಕೂಲ್’’ ಎಂದು ಇದು ಐ ಕಾಂಗ್ರೆಸ್ಸೋ ? ನ್ಯಾಷನಲ್ ಕಾಂಗ್ರೆಸ್ಸೋ ? ಗೊತ್ತಿಲ್ಲ. ಇದರ ಪ್ರೊಪ್ರೈಟರ್ ಷಣ್ಮುಗಂರವರು. ಈ ಶಾಲೆಯಲ್ಲಿ ಕನ್ನಡ ಮಾಧ್ಯಮ ! ಉರ್ದು ಮಾಧ್ಯಮ ತಮಿಳು ಮಾಧ್ಯಮ ಕೂಡ ಇದೆ. ಕನ್ನಡ ಮಾಧ್ಯಮದಲ್ಲಿರತಕ್ಕ ಹುಡುಗರನ್ನು ಉರ್ದು ಮಾಧ್ಯಮದಲ್ಲಿಯೂ ! ಉರ್ದು ಮಾಧ್ಯಮಲ್ಲಿರತಕ್ಕ ಹುಡುಗರನ್ನು ತಮಿಳು ಮಾಧ್ಯಮ್ಯಮದಲ್ಲಿಯೂ ತೋರಿಸಿ, ಸರ್ಕಾರದಿಂದ ಗ್ರ್ಯಾಂಟ್ ಪಡೆಯುತ್ತಿದ್ದಾರೆ. ಈ ಶಾಲೆ ಗಾಂಧಿ ನಗರದಲ್ಲಿದೆ ! ನಾನು ಈ ವಿಚಾರವನ್ನು ಶಾಸನ ಸಭೆಯಲ್ಲಿ ಪ್ರಸ್ತಾಪ ಮಾಡುತ್ತೇನೆ, ಡಿಪಾರ್ಟಮೆಂಟಿನವರು ಆಕ್ಷನ್ ತೆಗೆದುಕೊಳ್ಳುತ್ತಾರೆ ! ಕ್ರಿಮಿನಲ್ ಆಕ್ಷನ್ ತೆಗೆದುಕೊಳ್ಳುತ್ತಾರೆಂದು ತಿಳಿದು ಶಾಲೆಯನ್ನು ಹೊಡೆದು ಹಾಕುವುದಕ್ಕೆ ಶುರು ಮಾಡಿದ್ದಾರೆ.

ಸ್ವಾಮಿ, ಶೇಕಡ ೫೦ ರಷ್ಟು ಮಾತ್ರ ಹೇಳಿದ್ದೇನೆ ! ತಾವು ಸಮಯಕೊಟ್ಟಿದಕ್ಕಾಗಿ ತುಂಬ ಋಣಿಯಾಗಿದ್ದೇನೆ. ನನ್ನ ಹತ್ತಿರ ಇನ್ನು ಬೇಕಾದಷ್ಟು ಡಾಕ್ಯುಮೆಂಟ್ಸ್ ಇದೆ ! ಪೇಪರ್ ಕಟಿಂಗ್ಸ್ ಇದೆ ! ಫೋಟೋಸ್ಟೇಟ್ ಕಾಫೀಸ್ ಇವೆ ! ಚೂರು ಮಾತ್ರ ಸಭೆಗೆ ದರ್ಶನ ಮಾಡಿಸಿದ್ದೇನೆ. ಖಾಸಗಿ ಶಾಲೆಗಳು ಹೇಗೆ ಹೇಗೆ ನಡೆಯುತ್ತಿವೆ ಎಂಬುವನ್ನು ತಿಳಿಸಿದ್ದೇನೆ. ಶಿಕ್ಷಣ ಇಲಾಖೆಯ ಅಧಿಕಾರಿಗಳು ಸಂಪೂರ್ಣವಾಗಿ ಷಾಮೀಲಾಗಿ ಖಾಸಗೀ ಶಾಲೆಗಳವರಿಗೆ ನಿರ್ದೇಶನ ಮಾಡುತ್ತಾ ನಾವು ಮಂಜೂರು ಮಾಡತಕ್ಕ ಕೋಟ್ಯಾಂತರ ರೂಪಾಯಿಗಳನ್ನು ಲೂಟಿಮಾಡುವುದರ ಜೊತೆಗೆ ಮಕ್ಕಳ ಭವಿಷ್ಯವನ್ನು ಹಾಳು ಮಾಡುತ್ತಿದ್ದಾರೆ ನಮ್ಮ ಹಣ ಹೋಗಲಿ ! ಮಕ್ಕಳ ಗತಿ ಏನು ? ಇದರ ನಿರ್ದೇಶನವನ್ನು ಸಹಾಯಕ ವಿದ್ಯಾಧಿಕಾರಿ ರಂಗೇಗೌಡ ಎನ್ನುವವರು ಮಾಡುತ್ತಿದ್ದಾರೆ ! ಅವರು ಸಾಯಂಕಾಲ ಬಾರ್‌ನಲ್ಲಿರುತ್ತಾರೆ. ಖಾಸಗೀ ಶಾಲೆಗಳ ಅಕ್ರಮವ್ಯವ ಹಾರದ ಬಗ್ಗೆ ಮಾತನಾಡುವ ಉದ್ದೇಶದಿಂದ ಉಳಿದ ವಿಚಾರಗಳನ್ನು ಬದಿಗಿಟ್ಟಿದ್ದೇನೆ. ವಿಶ್ವವಿದ್ಯಾ ನಿಲಯ ಹಾಗೂ ಪರೀಕ್ಷಾ ಮಂಡಲಿಯ ನ್ಯೂನತೆಗಳ ಬಗೆ ಬೇಕಾದಷ್ಟು ಹೇಳಬೇಕಾದ್ದು ಇದೆ-ಇದು ಶಿಕ್ಷಣದ ನಾನಾ ಮುಖಗಳು ! ನಾನು ವಿಧಾನಪರಿಷತ್ತಿನಲ್ಲಿದ್ದಾಗ ಹೆಚ್ಚಿನ ಮಾಹಿತಿ ಕೊಟ್ಟಿದ್ದೇನೆ.

೬.೦೦ ಪಿ. ಎಂ.

ಆದರೆ ನಾನು ಇಷ್ಟು ಮಾತ್ರ ಹೇಳುತ್ತೇನೆ. ನಾನು ಹೇಳಿದ್ದನ್ನು, ಈ ಸಭೆಯ ಎಲ್ಲ ಸದಸ್ಯರು ಗಂಭೀರವಾಗಿ ಕೇಳಿದ್ದಾರೆ. ಇದುವರೆಗೂ ನಾನು ಹೇಳಿರತಕ್ಕ ಅಂಶಗಳಲ್ಲಿ ಇದು ಸರಿಯಲ್ಲ ಎಂದು ಯಾವ ಸದಸ್ಯರಾದರೂ ಪ್ರೂವ್ ಮಾಡಿದರೆ ನಾನು ಈ ಸಭೆಗೆ ರಾಜೀನಾಮೆ ಕೊಟ್ಟು ಹೊರಟು

ಹೋಗುತ್ತೇನೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ ಅಂದರೆ ಈ ವಿಚಾರವೆಲ್ಲಾ ನಾಳೆ ಪತ್ರಿಕೆಗಳಲ್ಲಿ ಬರುತ್ತದೆ. ಆಗ ಈ ಅಧಿಕಾರಿಗಳು ಅವನು ಏನೋ ಮಾತನಾಡಿದ ಮಳ್ಳೂರು ಅನಂದರಾವ್, ಸುಮ್ಮನೆ ಮಾತನಾಡಿದ ಅನ್ನುವ ರೀತಿಗೆ ಹೋಗಬಾರದು. ಈ ರೀತಿಗೆ ಹೋದರೆ ನಾಳೆ ನಾವು ಇಲ್ಲಿ ಕುಳಿತು ಕೆಲಸ ಮಾಡಲಿಕ್ಕೆ ಆಗುವುದಿಲ್ಲ. ಶಿಕ್ಷಣ ಇಲಾಖೆಗೆ ನಿರ್ದೇಶನ ಮಾಡಲಿಕ್ಕೆ ಸಾಧ್ಯವಿಲ್ಲ. ಈಗಾಗಲೇ ಇದರ ಬಗ್ಗೆ ಇನ್‌ಫರ್‌ಮೇಷನ್ ಗ್ಯಾಲರಿಯಲ್ಲಿದ್ದವರು ತೆಗೆದುಕೊಂಡು ಹೋಗಿದ್ದಾರೆ ನಾನು ನೋಟೀಸ್ ಕೊಟ್ಟ ತಕ್ಷಣವೇ ಎಲ್ಲಾ ಫೈಲುಗಳನ್ನು ಪತ್ತೆ ಮಾಡುತ್ತಿದ್ದಾರೆ. ಆದುದರಿಂದ ನಾನು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ ತಾವು ನಾನು ಹೇಳಿದ್ದೇನೆ ಇದರ ಬಗ್ಗೆ ತನಿಖೆಮಾಡಿ. ಇವೊತ್ತು ಯಾರು ನಿಮ್ಮ ಗ್ರಾಂಟ್ ಇನ್ ಏಡ್ ಸೆಕ್ಷನ್‌ನಲ್ಲಿ ಇದ್ದಾರೆ ಅವರನ್ನೆಲ್ಲಾ ಸಸ್ಪೆಂಡ್‌ನಲ್ಲಿ ಇಟ್ಟರೆ ಸತ್ಯಾಂಶ ಹೊರಬರುತ್ತದೆ. ಇವೊತ್ತು ರಾತ್ರಿಯೇ ಪೋಲೀಸ್ ಕಳುಹಿಸಿ ಸಂಬಂಧಪಟ್ಟ ರೆಕಾರ್ಡ್‌ಗಳನ್ನೆಲ್ಲಾ ಸೀಜ್ ಮಾಡಿಸಿದರೆ ಸತ್ಯ ಹೊರಕ್ಕೆ ಬರುತ್ತದೆ. ಇಲ್ಲಿ ಕೋಟ್ಯಾಂತರ ರೂಪಾಯಿ ಅವ್ಯವಹಾರವಾಗಿದೆ. ಸಾರ್ವಜನಿಕರ ಹಿತದೃಷ್ಟಿಯಿಂದ ರಾಜ್ಯದ ಬೊಕ್ಕಸದ ಹಣ ಅಪವ್ಯಯವಾಗಬಾರದು. ಇವೊತ್ತು ನಾನು ಯಾವ ಯಾವ ಶಾಲೆಗಳನ್ನು ರೆಫರ್ ಮಾಡಿದ್ದೇನೆ ಅವುಗಳ ಬಗ್ಗೆ ನೀವು ಸಂಜೆ ಮನೆಗೆ ಹೋಗುವುದಕ್ಕೆ ಮುಂಚೆ ಸಿ.ಬಿ.ಐ.ಗೆ ರೆಫರ್ ಮಾಡಿ ತನಿಖೆ ಮಾಡಿಸಬೇಕು. ಇದನ್ನು ತಾವು ಮಾಡದೇ ಹೋದರೆ ಇದರ ಬಗ್ಗೆ ನಾನು ಇದೇ ಕೊನೇ ಬಾರಿ ಪ್ರಸ್ತಾಪ ಮಾಡಿದಂತಾಗುತ್ತದೆ. ಈ ಸದನದ ಮರ್ಯಾದೆ ಕೂಡ ಅದರಲ್ಲಿ ಇದೆ. ಇವೊತ್ತು ನನ್ನ ಕಡೆಯ ಮಿತ್ರರು ನನಗೆ ಸಮಯ ಬಿಟ್ಟುಕೊಟ್ಟಿದ್ದರಿಂದ ಅವರಿಗೂ ಅಭಿನಂದನೆಯನ್ನು ಸಲ್ಲಿಸಿ, ನನಗೆ ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟಂತಹ ಅಧ್ಯಕ್ಷರಿಗೂ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. CHAIRMAN.—The discussion on these Demands will continue tomorrow. The demands relating to the Minister for Rural Development will be taken up on the 28th May 1979.

The House now stands adjourned to meet tomorrow at 1 P.M.

The House adjourned four Minutes past Six of the clock to meet again at one of the clock on Tuesday the 8th May 1979.